೩-೩೦ ಪಿ.ಎಂ.

ನಿಯಮ 68ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ಕೇರಳದ ಶ್ರೀ ರಶೀದ್ ಎಂಬ ವಕೀಲರ ಕೊಲೆ ಪ್ರಕರಣದಲ್ಲಿ ಮಾಜಿ ಗೃಹ ಸಚಿವರ ರಾಜೀನಾಮೆಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ

ಶ್ರೀಮತಿ ಕೆ ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿಯರು).— ಮಾನ್ಯ ಅಧ್ಯಕ್ಷರೇ ಮಾನ್ಯ ಜಾಲಪ್ಪನವರು ರಾಜೀನಾಮೆ ಮತ್ತು ರಷೀದ್‌ರವರ ಏನು ಒಂದು ಕೊಲೆ ಆಯಿತು ಈ ವಿಚಾರದಲ್ಲಿ ನಾವು ಒಂದು ನಿಲುವಳಿ ಸೂಚನೆಯನ್ನು ಮೊನ್ನೆ ದಿವಸ ಕಳುಹಿಸಿಕೊಟ್ಟಿದ್ದೆವು. ಈ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ಚರ್ಚೆಯಾದ ತದನಂತರ, ಈ ವಿಚಾರದಲ್ಲಿ ನಿಲುವಳಿ ಸೂಚನೆ ಬೇಡ, ಏನಿದ್ದರೂ ಚರ್ಚೆ ನಡೆಯಲಿ ಎಂದು ತಾವು ಅಪ್ಪಣೆ ಕೊಟ್ಟಮೇಲೆ ಇವತ್ತು ಈ ವಿಚಾರವಾಗಿ ಸ್ವಲ್ಪ ಮಟ್ಟಿಗೆ ಚರ್ಚೆ ಮಾಡಬೇಕೆಂದು ನಾನು ಕೆಲವು ಮಾತನಾಡುತ್ತಿದ್ದೇನೆ.

ಅಧ್ಯಕ್ಷರೇ, ತಮಗೆ ಹಾಗೂ ಎಲ್ಲರಿಗೂ ಗೊತ್ತಿರುವ ಹಾಗೆ ಇದು ಹೊಸ ವಿಚಾರ ಅಲ್ಲ. ಎಲ್ಲಾ ಪತ್ರಿಕೆಗಳಲ್ಲೂ ಬಂದಿರುವ ಹಾಗೆ ಶ್ರೀಮಾನ್ ರಶೀದ್‌ರವರು ಟ್ರೆಸ್‌ಪಾಸ್ ಮಾಡಿದರು ಎಂದು ಹೇಳಿ ಅವರನ್ನು ಅರೆಸ್ಟ್ ಮಾಡಿದರು. ನಂತರ ಅವರು ಅನ್ಯಾಯವಾಗಿ ಕೊಲ್ಲಲ್ಪಟ್ಟರು. ಯಾರು ಕೊಲೆ ಮಾಡಿದರು, ಏತಕ್ಕೆ ಮಾಡಿದರು. ಹೇಗೆ ಮಾಡಿದರು ಎನ್ನುವ ವಿಚಾರನ್ನು ಪತ್ತೆ ಮಾಡಬೇಕೆಂದು ಹೇಳಿ ಈ ಮನೆಯಲ್ಲಿ ನಿರ್ಣಯ ಆದಹಾಗೆ, ಇದನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಲಾಯಿತು. ಇದನ್ನು ಸಿ ಬಿ.ಐ. ಗೆ ಒಪ್ಪಿಸಿಯಾದ ನಂತರ ಅನೇಕ ವಿಚಾರಗಳು ಹೊರಗಡೆ ಬಂದಿವೆ, ಹೊರಗಡೆ ಬಂದ ನಂತರ ನಡೆದ ವಿಚಾರಗಳನ್ನು ಮೊನ್ನೆ ದಿವಸ ನಾವು ಇಲ್ಲಿ ಹೇಳಿದ್ದೇವೆ. ಆದರೂ ಕೂಡಾ ತಿರುಗಿ ಹೇಳಬೇಕಾಗಿ ಬಂದಿರುತ್ತದೆ. ಶ್ರೀಮಾನ್ ವೆಂಕಟಪ್ಪ ಎನ್ನುವ ಅಡ್ವೊಕೇಟರು, ರಶೀದ್ ರವರು ಇಲ್ಲಿ ಅವರ ಪತ್ತೆಯಾಗಿಲ್ಲ. ಅವರು ಎಲ್ಲೋ ಕಾಣುತ್ತಿಲ್ಲ ಅವರನ್ನು ಹುಡುಕಿಸಬೇಕೆಂದು ಕೋರ್ಟಿಗೆ ಕೇಳಿಕೊಂಡಿದ್ದರು. ಆದರೇ ಅದೇ ದಿವಸ ೧೮ನೇ ತಾರೀಖು ಅವರ ಶವ ಸೇಲಂ್ ಬಳಿ ರೈಲ್ವೆ ಹಳಿಯ ಬಳಿ ಸಿಕ್ಕಿತು ಎಂದು ಹೇಳಿ ಗೊತ್ತಾಗಿದೆ. ಈ ವಿಚಾರ ಆಗ ಪೋಲೀಸ್ ಕಮೀಷನರ್ ಆಗಿದ್ದ ಬಾಲಕೃಷ್ಣರಾವ್ ಅವರ ನಜರಿಗೂ ಬಂದಿಲ್ಲ ಎಂದು ಅವರೇ ಹೇಳಿಕೊಂಡಿದ್ದಾರೆ. ಈ ತರಹ ಬಾಲಕೃಷ್ಣರಾವ್‌ರವರಿಗೂ ಮುಚ್ಚಿಟ್ಟಿರತಕ್ಕಂಥ ಪ್ರಸಂಗವಿದು. ಅನೇಕ ದೊಡ್ಡ ದೊಡ್ಡ ಪೋಲೀಸ್ ಆಫೀಸರ್ಸ್‌ಗೂ ಈ ವಿಷಯವನ್ನು ಮುಚ್ಚಿಟ್ಟಿದ್ದಾರೆ. ಏತಕ್ಕಾಗಿ ಇದು ಅವರ ನಜರಿಗೆ ಬರಲಿಲ್ಲ? ಇದು ಒಂದು ಶೇಷ ಪ್ರಶ್ನೆಯಾಗಿಯೇ ಉಳಿದಿದೆ. ಎಲ್ಲಿಗೆ ಹೋಗಿದೆ ನೋಡಿ ಇದು, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಸಚಿವರು ಹಿಂದೆ ಹೇಳಿದ್ದರು. ನಮ್ಮ ಪೋಲೀಸ್ ಇಲಾಖೆಯ ಒಬ್ಬ ಪೋಲೀಸ್ ಆಫೀಸರ್ ಇನ್‌ವಾಲ್ವ್ ಆಗಿಲ್ಲ ಒಂದು ವೇಳೆ ಆ ರೀತಿ ಏನಾದರೂ ಆಗಿದ್ದರೆ ನನಗೆ ಗೊತ್ತಾದ ತಕ್ಷಣ ಒಂದು ನಿಮಿಷವು ಈ ಸ್ಥಳದಲ್ಲಿ ಕುಳಿತುಕೊಳ್ಳುವುದಿಲ್ಲವೆಂದು ಅವರು ಅಲ್ಲಿ ಕುಳಿತಿದ್ದಂತಹ ಗೃಹಸಚಿವರು ಹೇಳಿದರು. ಆಮೇಲೆ ನೋಡಿದರೆ ಒಬ್ಬರಾದ ಮೇಲೆ ಒಬ್ಬರು ೫-೬ ಜನ ಪೋಲೀಸ್ ಆಫೀಸರ್ಸ್ ಅರೆಸ್ಟ್ ಆದರು. ಅದರಲ್ಲೂ ಒಬ್ಬ ಸೀನಿಯರ್ ಪೋಲೀಸ್ ಆಫೀಸರ್ ಸಹ ಅರೆಸ್ಟ್ ಆದರು. ಇಷ್ಟಾದರೂ ಈ ಜನರಿಗೆ ಒಂದು ಶಂಕೆ ಬರಲಿಲ್ಲವೇ? ಸರ್ಕಾರಕ್ಕೆ ಬರಲಿಲ್ಲವೇ? ಹಿಂದೆ ಶಂಕೆ ಬಂದಿದ್ದರಿಂದಲೇ ಮಾನ್ಯ ಮುಖ್ಯಮಂತ್ರಿಗಳು ತನಿಖೆ ನಡೆಸಲು ಸಿ ಬಿ ಐ.ಗೆ ವಹಿಸಿದರು. ಈಗ ಅವರ ಮೇಲೆ ಏನೋ ಒಂದು ತರಹ ಅನುಮಾನವನ್ನು ಪ್ರಕಟಣೆ ಮಾಡುತ್ತಿದ್ದಾರೆ. "ನನಗೆ ಏನಾದರೂ ಮುಂಚಿತವಾಗಿ ಗೊತ್ತಿದ್ದರೆ ಅವತ್ತು ನಾನು ಅವರಿಗೆ ಒಪ್ಪಿಸುತ್ತಿರಲಿಲ್ಲವೆಂದು ನಿನ್ನೆಯ ದಿವಸ ಸಹ ಉತ್ತರ ಕೊಟ್ಟಿದ್ದನ್ನು ನಾವು ಕೇಳಿದೆವು. ಶಂಕೆ ಬಂದಿದೆ ಎಂದು ನನಗೆ ಹೇಳಿದ್ದಾರೆ, ಅವರಿಗೆ ಈಗ ಏತಕ್ಕೆ ಶಂಕೆ ಬಂತೆಂದರೆ ಕೇಂದ್ರ ಸರ್ಕಾರದ ಒಬ್ಬ ಸೀನಿಯರ್ ಆಫೀಸರ್ ಅವತ್ತು ಇವರಿಗೆ ಹೇಳಿದ್ದರಂತೆ ನೀವು ಇದನ್ನು ಸಿ.ಬಿ.ಐ. ಗೆ ಕೊಟ್ಟಿದ್ದು ಸರಿ ಇಲ್ಲ, ತಪ್ಪು ಮಾಡಿದಿರಿ, ಇದರಲ್ಲಿ ರಾಜಕೀಯ ಬರುತ್ತದೆಂದು ಹೇಳಿದ್ದರಂತೆ. ಅದನ್ನು ಇವರು ನಿನ್ನೆ ಹೇಳಿದರು ಇದನ್ನು ನೋಡಿದರೆ ನನಗೊಂದು ತರಹ ಅನುಮಾನ ಎಂದು ಹೇಳಬೇಕೋ ಅಥವಾ ವಿಷಾದವೆಂದು ಹೇಳಲೋ ಅಥವಾ ನನ್ನ ತಲೆಯಲ್ಲಿ ಏನಾದರೂ ಹುಳ ಗಿಳ ಹೊಕ್ಕಿದೆಯೊ ಗೊತ್ತಾಗುತ್ತಿಲ್ಲ. ಇವರಿಗೆ ಇದೇ ಅಭ್ಯಾಸವೇ? ಹೋಗಿ ಹೋಗಿ ಅಲ್ಲಿ ಅವರನ್ನು ಕೇಳುವುದು.

ಹೋಗಿ ಹೋಗಿ ಅವರನ್ನು ಏನಾದರೂ ಸಮಾಧಾನ ಮಾಡುವುದು ಅಭ್ಯಾಸವೇನಾದರೂ ಇವೆಯೇ? ಯಾರೋ ಒಬ್ಬ ಸೀನಿಯರ್ ಆಫೀಸರ್ ಕಾನ್ಫಿಡೆನ್ಷಿಯಲ್ ಮ್ಯಾಟರ್ ಅನ್ನು ಮುಖ್ಯಮಂತ್ರಿಗಳಿಗೆ ಈ ರೀತಿ ಹೇಳಬಹುದೇ? ಇದು ಯಾವ ತರಹದ ವಿಚಾರ? ಯಾವ ತರಹ ಆಗಿದೆ? ಈ ತರಹವೂ ನಡೆಯುತ್ತದೆಯೇ? ಇದು ನನ್ನ ಮನಸ್ಸಿನಲ್ಲಿರತಕ್ಕ ಶಂಕೆ ಇಂತಹ ಕೆಲಸ ನಿಮ್ಮಿಂದ ಆಗಬಾರದು? ಸಿ.ಬಿ.ಐ. ನವರಿಗೆ ಕೊಟ್ಟಿದು ತಪ್ಪಾಯಿತು ಎಂದರೆ ಹೇಗೆ? ನಾವು ಸಾಮಾನ್ಯವಾಗಿ ಯಾವುದಾದರೊಂದು ಇಂತಹ ವಿಚಾರಗಳು ಬಂದಾಗ ಡಿಮ್ಯಾಂಡ್ ಮಾಡುವುದು ಜುಡಿಷಿಯಲ್ ಎನ್‌ಕ್ವೈರಿಗೆ ಅಥವಾ ಸಿ.ಬಿ.ಐ. ಎನ್‌ಕ್ವೈರಿಗೆ. ಅಂದ ಮೇಲೆ ಸಿ.ಬಿ.ಐ. ಗೆ ಕೊಡಬೇಡಿ ಎಂದು ಅಡ್ವೈಸ್ ಮಾಡಿದರೆ ಇನ್ನು ಯಾರಿಗೆ ನಾವು ಅಪೀಲ್ ಹಾಕಬೇಕು ಆ ದೇವರಿಗೆ ಅಪೀಲು ಹಾಕಬೇಕು. ಇನ್ನು ನಾವು ಯಾವ ತರಹ ನಿರ್ಣಯವನ್ನು ತೆಗೆದುಕೊಳ್ಳಬೇಕು ಎನ್ನುವುದು ನಮಗಿನ್ನು ಅರ್ಥವಾಗಿಲ್ಲ. ನಮ್ಮ ಮಾನ್ಯಮುಖ್ಯಮಂತ್ರಿಗಳು ನಿನ್ನೆ ಹೇಳಿದರು ಮಹಾ ನಾಯಕಿ ಶ್ರೀಮತಿ ಇಂದಿರಾ ಗಾಂಧೀಯವರಿಗೆ ಮಾಡಿದ ಸಹಾಯಕ್ಕೆ ನೀವು ಅವರಿಗೆ ಋಣ ತೀರಿಸಿ ಎಂದು ಹೇಳಿದರು. ಯಾರಿಗೆ ಯಾರು ಋಣ ತೀರಿಸಬೇಕು? ರಾಜಕೀಯ ವ್ಯವಹಾರದಲ್ಲಿ ಯಾರು ಋಣ ತೀರಿಸುವುದಕ್ಕೆ ಆಗುತ್ತದೆ? ಅದು ಸಾಧ್ಯವೇ? ಸಾಧ್ಯವಿಲ್ಲ. ನೀವು ಋಣ ತೀರಿಸುವುದಕ್ಕೆ ಸಾಧ್ಯವೇ? ಮಾನ್ಯ ಮುಖ್ಯಮಂತ್ರಿಗಳಿಗೆ ನೀವೆಲ್ಲಾ ಋಣ ತೀರಿಸುವುದಕ್ಕೆ ಆಗುತ್ತದೆಯೇ? ಆಗುವುದಿಲ್ಲ. ಯಾವ ತರಹದಲ್ಲಿಯೂ ಋಣ ತೀರಿಸಲು ಸಾಧ್ಯವಿಲ್ಲ. ಇನ್ನು ಬಿ.ಜೆ.ಪಿ. ನಾಯಕರು ಮೊನ್ನೆ ದಿವಸ ಮಾತನಾಡುವಾಗ ಅವರು ಅವರ ಕೆಲಸವನ್ನು ಮಾಡುವುದು ಬಿಟ್ಟು ಕಾಂಗ್ರೆಸ್‌ನವರು ಏನನ್ನು ಮಾಡಲಿಲ್ಲ? ಆಮೇಲೆ ಜನತಾ ಪಕ್ಷದ ಸರ್ಕಾರದ ಒಳಗೆ ಕೆಲಸ ಮಾಡುತ್ತಿದ್ದಾರೆ. ಇದೇತಕ್ಕೆ ಬೇಕು? ಅವರು ಅವರ ಕೆಲಸ ಮಾಡಲು ಬೇರೆಯವರ ಪಕ್ಷದ ಬಗ್ಗೆ ಮಾತನಾಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ.— ಒಂದು ನಿಮಿಷ ತಾವು ಯಿಲ್ಡ್ ಆಗುವ ಹಾಗಿದ್ದರೆ,

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ನಾನು ಯಿಲ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.— ಬಿ.ಜೆ.ಪಿ. ಪಕ್ಷ ಏನು ಕೆಲಸ ಮಾಡಬೇಕು ಎಂಬ ಬಗ್ಗೆ ಅದಕ್ಕೆ ಚೆನ್ನಾಗಿ ಗೊತ್ತಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಯಿಲ್ಡ್ ಆಗಿಲ್ಲ. ಅವರು ಮಾತನಾಡುವುದು ರೆಕಾರ್ಡ್‌ಗೆ ಹೋಗಬೇಕೋ ಬೇಡವೋ ಎಂಬುದನ್ನು ತಾವೇ ಹೇಳಬೇಕು ಅಧ್ಯಕ್ಷರೇ, ಅವರ ಸುದ್ದಿಗೆ ನಾವು ಹೋಗುವುದಿಲ್ಲ, ಅವರ ತಂಟೆಗೆ ನಾವು ಹೋಗುವುದಿಲ್ಲ, ಅವರ ವಿಚಾರವನ್ನು ನಾವು ಮಾತನಾಡುವುದಿಲ್ಲ. ನಮಗೇ ಬೇಕಾದಷ್ಟು ಕೆಲಸ ಇದೆ. ನಾವು ಏನು ಮಾಡಬೇಕು ಎಂಬುದರ ಬಗ್ಗೆ ನಮಗೆ ಚೆನ್ನಾಗಿ ಗೊತ್ತಿದೆ. ನಮ್ಮ ಪಕ್ಷ ಇಪತ್ತು ಬಂದು ನಾಳೆ ಹೋಗುವ ಪಕ್ಷ ಅಲ್ಲ ನಮ್ಮ ಪಕ್ಷಕ್ಕೆ 100 ವರ್ಷದ ಹಿನ್ನೆಲೆ ಇದೆ. ಕಾಂಗ್ರೆಸ್‌ನವರು ಕೆಲಸ ಮಾಡಿಲ್ಲ, ಎಂದು ಇವರು ಏಕೆ ಹೇಳಬೇಕು. ಅದನ್ನು ಕಟ್ಟಿಕೊಂಡು ಇವರಿಗೇನು?

ಶ್ರೀ ಬಿ.ಎಸ್. ಯಡಿಯೂರಪ್ಪ.— ನಿಮ್ಮಿಂದ ರಾಜ್ಯದ ಜನ ತೊಂದರೆ ಪಡುತ್ತಿದ್ದಾರೆ. ಅದಕ್ಕೆ ಹೇಳಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರ ಜೊತೆ ಶಾಮೀಲಾಗಿ ಮಾತನಾಡುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೆ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರ ಏಜೆಂಟ್ ಆಗಿ ಕೆಲಸ ಮಾಡುವುದಕ್ಕೆ ನಾಚಿಕೆ ಆಗುವುದಿಲ್ಲವೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.— ನೀವು ಏನು ಮಾಡಿದ್ದೀರಿ ಎಂಬುದು ರಾಜ್ಯದ ಜನತೆಗೆ ಗೊತ್ತಿದೆ. ನೀವು ಏಜೆಂಟರು, ಆ ಕಡೆ ಈ ಕಡೆ ಎಂದು ಪಕ್ಷಾಂತರ ಮಾಡುವವರು ನೀವು.

ಜನರ ಸಮಸ್ಯೆಗಳನ್ನು ಹೇಳುವುದಕ್ಕೆ ನಾನು ಒಬ್ಬನೇ ಸಾಕು. ನಿಮ್ಮಿಂದ ಈ ದೇಶದ ಸ್ಥಿತಿ ಇಲ್ಲಿಗೆ ಬಂದಿದೆಯೆಂದು ಜನರಿಗೆ ಚೆನ್ನಾಗಿ ಗೊತ್ತಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾವು ಮಂತ್ರಿ ಸ್ಥಾನ ಸಿಗಂತ್ತದೆಂದು ನಾವು ಪಕ್ಷಾಂತರ ಮಾಡಲಿಲ್ಲ.

(ಗೊಂದಲ)

ಅಧ್ಯಕ್ಷರು.— ಎಲ್ಲರೂ ಕುಳಿತುಕೊಳ್ಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ರಷೀದರ ಶವವನ್ನು ಸಾಗಿಸುವಾಗ ಕಾಲುಗಳನ್ನು ಒಳಗೆ ತಳ್ಳಿದೆ ಎಂದು ರೂಮ್ ಬಾಯ್ ಹೇಳಿದ್ದಾನೆ. ಇದನ್ನು ಏಕೆ ಮಾಡುತ್ತಾರೆ ? ಇಂಥವರು ಮಾಡಿದ್ದಾರೆ ಅಂಥವರು ಮಾಡಿದ್ದಾರೆ ಎನ್ನುವ ಪ್ರಶ್ನೆ ಇದಲ್ಲ. ಈ ರಾಜ್ಯಕ್ಕೆ ಕೇರಳಾ ದಿಂದ ಬಂದಿರತಕ್ಕ ಒಬ್ಬ ಮನುಷ್ಯ ಅವನು. ಅವನನ್ನು ಹೀಗೆ ಕೊಲೆ ಮಾಡಿದರೆ, ಅವನ ಮನೆ ಮಕ್ಕಳ ಗತಿ ಏನು ? ಅವನ ಹೆಂಡತಿ ಗತಿ ಏನು ? ಕಗ್ಗೊಲೆ ಮಾಡಿದವರನ್ನು ಮುಚ್ಚಿಟ್ಟುಕೊಳ್ಳ ಬೇಕು ಎಂದರೆ ಅದು ಯಾರಿಗೂ ಮರ್ಯಾದೆ ತರತಕ್ಕ ಪ್ರಸಂಗ ಅಲ್ಲ. ಮುಖ್ಯ ಮಂತ್ರಿಯವರು ಈ ಕೇಸ್ ಬಗ್ಗೆ ವಿಚಾರಣೆ ಮಾಡುವುದಕ್ಕೆ ಸಿ. ಬಿ. ಐ. ನವರಿಗೆ ವಹಿಸಿಕೊಟ್ಟರು. ಅವರು ಈಗ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಅದಕ್ಕೆ ಸಹಕಾರ ಮಾಡಬೇಕು ರೂಲ್ಸ್‌ಗಿಂತ ಹೆಚ್ಚಿನವರು ಯಾರೂ ಇಲ್ಲ. ಎಷ್ಟೇ ದೊಡ್ಡವರಾಗಿರಲಿ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳು ವುದು ಸರ್ಕಾರದ ಕರ್ತವ್ಯ. ಆದ್ದರಿಂದ ಈ ಕೇಸ್‌ನಲ್ಲಿ ತಪ್ಪಿತಸ್ಥರ ಮೇಲೆ ತಕ್ಕ ಕ್ರಮವನ್ನು ತೆಗೆದು ಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ರಾಜ್ಯದಲ್ಲಿ ಯಾವುದೇ ಜಾಗದಲ್ಲಿ ರೇಪ್ ಆದರೆ ಪರಿಹಾರ ಕೊಡುತ್ತಾರೆ, ಮನೆ ಬಿದ್ದು ಹೋದರೆ ಪರಿಹಾರ ಕೊಡುತ್ತಾರೆ, ಸರ್ಕಸ್ ದುರಂತ ಆದರೆ ಪರಿಹಾರ ಕೊಡಿ ಎನ್ನುತ್ತಾರೆ. ಇವರಿಗೆ ಯಾರು ಪರಿಹಾರ ಕೊಡುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ನಾವು ಈಗಾಗಲೇ ಒಂದು ನಿಲುವಳಿ ಸೂಚನೆಯನ್ನು ಮೊನ್ನೆಯ ದಿವಸ ತಂದು. ಆ ಮೇಲೆ ಶ್ರೀಮಾನ್ ಜಾಲಪ್ಪನವರು ಕೂಡ ರಾಜೀನಾಮೆಯನ್ನು ಕೊಟ್ಟರು. ರಷೀದ್‌ನ ಮರ್ಡರನ್ನು ಈ ರಾಜ್ಯದಲ್ಲಿ ಪೊಲೀಸರ ಸಹಾಯ ದಿಂದ ಮಾಡಲಾಗಿದೆ ಎನ್ನತಕ್ಕಂಥ ಆಪಾದನೆಯನ್ನು ಏನು ಹರಡಿತ್ತು ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟಂಥ ಗೃಹ ಮಂತ್ರಿಗಳು ಆಗ ಇದರ ಬಗ್ಗೆ ಒಪ್ಪಿಕೊಳ್ಳಲಿಲ್ಲ. ಆದರೆ ಇವೊತ್ತು ಸ್ವಲ್ಪ ಮಟ್ಟಿಗೆ ಸಿ. ಬಿ. ಐ. ನವರು ವಿಚಾರಣೆ ಮಾಡಿದ ಮೇಲೆ ಮತ್ತು ಈಗ ಎನ್‌ಕ್ವಯರಿ ಏನು ನಡೆಯುತ್ತಾ ಇದೆ ಇದರಿಂದ ಅ ವಾಸನೆ ಹೊರಗೆ ಬರುತ್ತಾ ಇದೆ ಮತ್ತು ಅದು ಎಲ್ಲರಿಗೂ ಗೊತ್ತಾಗಿದೆ. ಈ ರಶೀದ್‌ನ ಕೊಲೆ ಯಾವ ರೀತಿಯಾಗಿ ಆಯಿತು, ಇದಕ್ಕೆ ಯಾರ್ಯಾರು ಕಾರಣ......

ಶ್ರೀ ಡಿ. ಟಿ ಜಯಕುಮಾರ್.— ಅದು ಕೊಲೆ ಎಂದು ಹೇಗೆ ಹೇಳುತ್ತೀರಿ ? ಅದು ಆತ್ಮಹತ್ಯೆ ಏಕೆ ಆಗಿರಬಾರದು ?

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.— ನಿಗೂಢ ಎಂದ ಮೇಲೆ ಆತ್ಮಹತ್ಯೆ ಏಕೆ ಆಗಬಾರದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಕೊಲೆ ಎಲ್ಲಿ ಆಯಿತು ? ಯಾವ ರೀತಿಯಾಗಿ ಆಯಿತು ? ಆ ಶವವು ಎಲ್ಲಿ ಸಿಕ್ಕಿತು ? ಎನ್ನುವ ಬಗ್ಗೆ ಪತ್ರಿಕೆಗಳಲ್ಲಿ ವಿವರವಾಗಿ ಬಂದಿದೆ. ಹೀಗೆ ವಿಷಯಗಳು ಪತ್ರಿಕೆಯಲ್ಲಿ ಬಂದ ಮೇಲೆ,ಈ ಸದನದಲ್ಲಿ,ಆ ಸದನದಲ್ಲಿ ಪ್ರಸ್ತಾಪ ಮಾಡಿದ ಮೇಲೆ ಅದಕ್ಕೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಡದೆ, ಆ ಮಾತಿಗೆ ಮನ್ನಣೆಯನ್ನು ಕೊಡದೆ ತಳ್ಳಿಹಾಕಿದರು. ಮಾನ್ಯ ಸದಸ್ಯರು ಹೇಳಿದ ಹಾಗೆ . ಆತ್ಮಹತ್ಯೆ ಏಕೆ ಇರಬಾರದು ? ಅವರೇ ಆತ್ಮಹತ್ಯೆ ಮಾಡಿಕೊಂಡಿರಬಹುದು

ಅವರ ಫೋಟೊ ನೋಡಿದ್ದೇವೆ, ಆಗ ಮೀಸೆ ಇತ್ತು, ಈ ಫೋಟೋದಲ್ಲಿ ಮೀಸೆ ಇಲ್ಲ'' ಎಂದು ಮುಂತಾಗಿ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ, ಇದರ ಅರ್ಥ ಏನು ? ಹಾಗಾದರೆ ಹೆಚ್ಚಿನ ಮಾಹಿತಿಯು ಅವರ ಹತ್ತಿರ ಇತ್ತು ಎನ್ನುವ ಒಂದು ಸಂಶಯ ಬರುತ್ತದೆ. ಮತ್ತು ಅವರು ಸ್ಪಷ್ಟಪಡಿಸಿದ್ದಾರೆ, ಇದರ ಬಗ್ಗೆ ಅನೇಕ ಮಾಹಿತಿಗಳು ನನ್ನಲ್ಲಿ ಇವೆ, ಸಂದರ್ಭ ಬಂದಾಗ ಹೇಳುತ್ತೇನೆ, ಇವೊತ್ತು ಸಿ. ಬಿ. ಐ.ಗೆ ಒಪ್ಪಿಸಬೇಕೆಂದು ತೀರ್ಮಾನ ಮಾಡಿದ್ದೇವೆ, ಅದಕ್ಕೆ ಒಪ್ಪಿಸುತ್ತೇವೆ ಎಂದು ಹೇಳಿದ್ದಾರೆ. ಹೀಗೆ ಹೇಳುವಾಗ ಇನ್ನೊಂದು ಮಾತನ್ನು ಅವರು ಹೇಳಿದರು. ಅದೇನೆಂದರೆ, ಅವರು ಒಂದುಕಡೆ ಜಡ್ಜ್‌ಮೆಂಟ್ ಪಾಸ್ ಮಾಡುತ್ತಾರೆ, ಮತ್ತು ಆ ಬಗ್ಗೆ ಆರ್ಗ್ಯೂಮೆಂಟ್‌ನ್ನು ಕೂಡ ಅವರೇ ಮಾಡುತ್ತಾರೆ. ಒಂದು ಕಡೆ ಹೇಳುತ್ತಾರೆ ಸಿ.ಬಿ.ಐ.ಗೆ ಕೊಡುತ್ತೇವೆ ಎಂದು, ಅಂತೆಯೇ ಯಾವ ದಿವಸ ಕೊಡುತ್ತೇವೆ ಎಂದು ಹೇಳಿದ್ದಾರೆ ಅದೇ ದಿವಸ ಸಿ. ಬಿ. ಐ.ನ್ನು ಬೈದು ಬಿಟ್ಟರು. ಅವರು ಇಂಫಾರ್ಶಿಯಾಲ್ ಆಗಿ ಆಕ್ಟ್ ಮಾಡುತ್ತಾರೋ ಇಲ್ಲವೋ, ಗೊತ್ತಿಲ್ಲ. ಆದರೂ ಕೂಡ ಅವರಿಗೆ ವಹಿಸಬೇಕೆಂದು ಮಾಡಿದ್ದೇವೆ ಮತ್ತು ಸಿ. ಬಿ. ಐ ನವರು ಇದರೊಳಗೆ ಒಂದು ವೇಳೆ ರಾಜಕೀಯ ಮಾಡಿದರೆ ನಾನು ತಿಳಿದುಕೊಳ್ಳುತ್ತೇನೆ ಅದು ನನ್ನ ದುರ್ದೈವ ಎಂದು ಹೇಳಿದರು. ಹೀಗೆ ಅನೇಕ ರೀತಿಯಲ್ಲಿ ತರ್ಕ ಮಾಡಿ ಇದನ್ನು ಪ್ರಾರಂಭ ಮಾಡಿದರು, ಮತ್ತು ಅದೇ ಪ್ರಿಜ್ಯೂಡೀಸ್ ಇಟ್ಟುಕೊಂಡು ಮೊದಲನೇ ದಿವಸ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ. ಟೆಲೆಕ್ಸ್ ಮ್ಯಾಸೇಜ್ ಕಳುಹಿಸಿದ ಮೇಲೆ ಏನು ಈ ಸದನದಲ್ಲಿ ಬಂದು ಹೇಳಿದ್ದಾರೋ ಆ ಹೇಳಿಕೆಗೆ ಪೂರಕವಾಗಿ ಏನು ಸ್ಟೇಟ್‌ಮೆಂಟ್‌ಬೇಕು ಅದನ್ನೇ ಕೊಡುತ್ತಾ ಬಂದಿದ್ದಾರೆ. ಈಗ ಸತ್ಯಾಂಶ ಹೊರಕ್ಕೆ ಬರುವಾಗ ಸಿ. ಬಿ. ಐ ನವರು ಕೆಲವು ಗೂಂಡಾಗಳನ್ನು ಕೆಲವು ಕ್ಯಾರೆಕ್ಟರ್‌ಲೆಸ್ ಜನಗಳನ್ನು ಹಿಡಿದು ಕೊಂಡು ಬಂದು ಹೇಳಿಕೆಗಳನ್ನು ಕೊಡಿಸುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ, ಹೀಗೆ ಈ ರಾಜ್ಯದ ಮುಖ್ಯ ಮಂತ್ರಿಗಳೇ ಈ ರೀತಿಯಾಗಿ ಇನ್‌ವೆಸ್ಟಿಗೇಷನ್ ಮೇಲೆ ಪರಿಣಾಮ ಬೀರುವ ರೀತಿಯಲ್ಲಿ ಮಾತನಾಡಿದರೆ ಅಧ್ಯಕ್ಷರೇ ನಿಮಗೂ ಗೊತ್ತು, ಇನ್‌ವೆಸ್ಟಿಗೇಟ್ ಮಾಡುವವರು ಎಸ್. ಐ.ಗಳು, ಡಿ. ಸಿ. ಪಿ.ಗಳು ಅವರ ಮೇಲೆ ಏನು ಪರಿಣಾಮ ಬೀರುತ್ತದೆ, ಅವರಿಗೆ ಡಿಸ್ಕರೇಜ್ ಮಾಡುವ ರೀತಿ ಯಲ್ಲಿ ಸ್ಟೇಟ್‌ಮೆಂಟ್ ಕೊಡುತ್ತಾರೆ. ಸತ್ಯಾಂಶ ಹೊರಬರುವ ರೀತಿಯಲ್ಲಿ ಎಂದೂ ಹೇಳಿಕೆ ಕೊಡುತ್ತಿಲ್ಲ ಇದು ನಿಜ ಹಾಗೂ ಜವಾಬ್ದಾರಿ ಸ್ಥಾನದಲ್ಲಿರುವವರೊಬ್ಬರ ನಡವಳಿಕೆಯೇ ?

(ಗೊಂದಲ)

All are equal before the law. Whether he is Home Minister or the Chief Minister or the MLA or whosoever he may be-you should act impartially ಇವರು ಯಾರೋ ಒಬ್ಬರು ಇನ್ನೋಸೆಂಟ್ ಎಂದು ವಾದಿಸುವುದಾದರೆ ಅದು ಹೇಗೆ ಇವರಿಗೆ ಗೊತ್ತು, ಇವರು ಸರ್ಟಿಫಿಕೇಟ್ ಕೊಡುತ್ತಾರೋ ? ಅದಕ್ಕಾ ಇವರು ಇರೋದು ? ಇನ್ನೊಂದು ಕಡೆ ಬೇಲ್ ರಿಜೆಕ್ಟ್ ಮಾಡುವ ಕಪನ್ಸ್ ಜಡ್ಜರ ತೀರ್ಮಾನವನ್ನು ವಿಚಿತ್ರ ಎಂದು ಒಬ್ಬರೆಂದರೆ ಇನ್ನೊಬ್ಬರು ಪರ್ವರ್ಸ್ ಎಂದು ಹೀಯಾಳಿಸುವ ರೀತಿಯಲ್ಲಿ ಮಾತನಾಡುತ್ತಾರೆ. ಒಂದು ವೇಳೆ ನಾವು ಇವರು ಹೇಳಿದಂತೆ ನ್ಯಾಯ ಕೊಡದೇ ಇದ್ದರೆ ನಾಳೆ ನಮಗೆ ತೊಂದರೆ ಆಗುತ್ತದೆ ಎಂದು ಇನ್‌ವೆಸ್ಟಿಗೇಟ್‌ಗೆ ಸಹಾಯ ಮಾಡುವ ಪೋಲೀಸ್ ಅಧಿಕಾರಿಗಳ ಮನದಲ್ಲಿ ಭಯ ಹುಟ್ಟಿಸುವ ರೀತಿಯಲ್ಲಿ ಹೇಳಿಕೆ ಕೊಡುತ್ತಾರೆ ಏಕೆಂದರೆ ಈ ಸದನದಲ್ಲಿ ಆ ಜಡ್ಜರು ಬಂದು ಪಾಪ ಡಿಫೆಂಡ್ ಮಾಡಿಕೊಳ್ಳುವ ಹಾಗಿಲ್ಲ. ಅಥವಾ ಅದನ್ನು ರೆಫ್ಯೂಟ್ ಮಾಡುವ ಹಾಗೂ ಇಲ್ಲ. ಈ ರೀತಿ ಮುಖ

(ಶ್ರೀ ಎಂ. ಎಸ್. ನಾರಾಯಣರಾವ್‌ರವರು ಅಧ್ಯಕ್ಷ ಪೀಠದಲ್ಲಿ ಆಸೀನರಾದರು)

ಮಂತ್ರಿಗಳು ಹೋಗುವ ಧಾಟಿ ನೋಡಿದರೆ ಮುಂಚಿನಿಂದಲೂ ನೀವು ಯಾರನ್ನೋ ರಕ್ಷಿಸುವುದಕ್ಕೆ ಕೇಸನ್ನು ಡಿಫೆಂಡ್ ಮಾಡಿಕೊಂಡು ಬಂದಿದ್ದೀರೆಂದೇ ಹೇಳಬೇಕಾಗುತ್ತದೆ. You are suppor-ting this cause, since beginning you are helping them. You are supporing this cause. ಏಕೆಂದರೆ ನಾಗೇಗೌಡರು, ಹಾವನೂರ್‌ರವರು ಈ ವಿಷಯವನ್ನು ಎತ್ತಿದ್ದಾಗ ತಾವು ಅಲ್ಲಿ ಕೊಟ್ಟಂಥ ಹೇಳಿಕೆಯನ್ನು ನೋಡಿದೆ ಸುಮಾರು ಅದು ೧೨ ಪುಟಗಳಷ್ಟು ಇದೆ. ಅದನ್ನು ನೋಡಿದರೆ ನನಗೆ ಏನೆನ್ನಿಸುತ್ತದೆ ಎಂದರೆ......

ಈ ಕಾಸ್‌ಗೆ ಸಪೋರ್ಟ್ ಮಾಡುವ ಪ್ರಯತ್ನ ಸಿಸ್ಟಮೆಟಿಕಾಗಿ ನಡೆದಿದೆ ಎಂದು ಗೊತ್ತಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ.—ಆ ರೀತಿ ಇದ್ದಿದ್ದರೆ ಮುಖ್ಯಮಂತ್ರಿಗಳು ಕೇಸನ್ನು ಸಿಬಿಐಗೆ ಏಕೆ ಒಪ್ಪಿಸುತ್ತಿದ್ದರು ? ರಾಜ್ಯದಲ್ಲೇನು ಸಿಓಡಿ ಇಲ್ಲವೇ ? ಜುಡಿಶಿಯಲ್ ಎನ್‌ಕ್ವಯರಿ ಮಾಡ ಬಹುದಿತ್ತು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದ್ದರಿಂದ ಇವತ್ತು ಎಂದರೆ ಏನಾಗಿದೆ ಆ ಮನೆಯಲ್ಲಿ ಈ ವಿಷಯ ಪ್ರಸ್ತಾಪಿತವಾದಾಗ ಯಾರದೋ ಫೋಟೋ ತೋರಿಸಿ ಹಾರಿಕೆಯ ಉತ್ತರ ಕೊಟ್ಟರು. ಇದು ಯಾವುದೋ ಒಂದು ಮೂಲೆಯ ಹಳ್ಳಿಯಲ್ಲಿ ಇದು ಆಗಿದೆ ಅಲ್ಲಿ ಯಾವುದೇ ಪೋಲೀಸ್ ಇಲ್ಲ, ಕಮ್ಯುನಿಕೇಷನ್ ಇಲ್ಲ, ಪೋಲೀಸರು ಇಲ್ಲ ಅಲ್ಲಿ ಯಾವುದೇ ಆಫೀಸರುಗಳು ಇಲ್ಲವೆಂದು ಹೇಳಿದರೆ ಅದು ಬೇರೆಯಾಗುತ್ತದೆ. ಆದರೆ ಆ ರೀತಿಯಾಗದೇ ಮಾನ್ಯ ಮುಖ್ಯ ಮಂತ್ರಿಗಳು ಇರತಕ್ಕಂತಹ ಸ್ಥಳದಲ್ಲಿ ಕ್ಯಾಪಿಟಲ್‌ನಲ್ಲಿ ಒಬ್ಬ ಅಡ್ವೊಕೇಟ್‌ರವರ ಮರ್ಡರ್ ಆಗಿದೆ. ಅದು ಯಾವ ರೂಮಿನಲ್ಲಿ ಆಗಿದೆ ಎಂಬುದು ಇವತ್ತಿನ ದಿವಸ ಹೊರಗೆ ಬಂದಿದೆ, ಯಾರ ಕಾರಿನಲ್ಲಿ ಶವವನ್ನು ಟ್ರಾನ್ಸ್‌ಪೋರ್ಟ್ ಮಾಡಿ ದ್ದಾರೆಂಬುದು ಕೂಡ ಹೊರಕ್ಕೆ ಬಂದಿದೆ. ಇದು ಏಕೆ ಪೋಲೀಸರಿಗೆ ಗೊತ್ತಿಲ್ಲ ? Why police failed to detect this ? On 18th Mr. Rasheeds body was found is Salem ೧೩-೧೪ ರಂದು ಅವರು ಕಂಪ್ಲೇಂಟ್ ಕೊಟ್ಟಿದ್ದಾರೆ ೧೬ನೇ ತಾರೀಖು ಮರ್ಡರ್ ಆದರೂ ಕೂಡ ಅವರು ಎಲ್ಲಿ ಹೋಗಿದ್ದಾರೆಂಬುದನ್ನು ಪತ್ತೆ ಹಚ್ಚಲಿಲ್ಲ. ಕೆ. ವೆಂಕಟಪ್ಪ ಎಂಬುವವರು ಅರ್ಜಿ ಕೊಟ್ಟು ಇದರ ಬಗ್ಗೆ ವಿಚಾರ ಮಾಡಿದರೂ ಕೂಡ ಗೊತ್ತಿಲ್ಲವೆಂದು ಹೇಳಿದರೆ ಇದಕ್ಕೇನು ಹೇಳಬೇಕು ? ಕೊಲೆ ಯಾಗಿ ೪೮ ಗಂಟೆಗಳಾದರೂ ಕೂಡ ಅವನ ಬಾಡಿ ಎಲ್ಲಿದೆ ಯಾರು ಕೊಲೆ ಮಾಡಿದರು ಎಂಬುದನ್ನು ಹೈಡ್ ಮಾಡಿದ್ದಾರೆ ಇದಕ್ಕೆ ನಾವು ಏನು ಹೇಳಬೇಕು.ನೀವು ಆಗ ಮನಸ್ಸು ಮಾಡಿದ್ದರೆ ಈ ರೀತಿಯಾಗಿ ನಡೆಯುತ್ತಿರಲಿಲ್ಲ. ನನ್ನ ಜೀವಕ್ಕೆ ಅಪಾಯವಿದೆಯೆಂದು ರಷೀದ್‌ರವರು ಕಂಪ್ಲೈಂಟ್ ಕೊಟ್ಟಾಗ ಅವರಿಗೆ ಸೂಕ್ತ ರಕ್ಷಣೆಯನ್ನು ನೀಡಬೇಕಾಗಿತ್ತು. ಆದರೂ ಇದೆಲ್ಲಾ ಆದ ಮೇಲೂ ಕೂಡ ಏನಾಗಿದೆ ಎಂದು ಕೇಳಿದರೆ ಗೊತ್ತಿಲ್ಲವೆಂಬ ಮಾತನ್ನು ಹೇಳುತ್ತಲೇ ಬಂದಿರಿ. ಕೊನೆಗೆ ಶವ ಸಿಕ್ಕಮೇಲೆ ಕೂಡ ಇದು ಯಾರದೋ ಏನೋ ಎಂದು ಹೇಳುತ್ತಲೇ ಬಂದರು. ಸರಕಾರಕ್ಕೆ ಈ ಎಲ್ಲಾ ಘಟನೆಗಳು ಗೊತ್ತಿದ್ದರೂ ಕೂಡ ಸರಕಾರ ಟ್ರೂತ್ ಅನ್ನು ಸಪ್ರೆಸ್ ಮಾಡಿದೆ ಎಂದು ಹೇಳಬೇಕಾಗುತ್ತದೆ. You have suppressed the truth for which you are morally responsible. Mr. Jalappa should not own the responsibility, The Chief Minister should own the responsibility and get out.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ.

ವೈಸ್ ಛೇರ್ಮನ್.—ಮಾನ್ಯ ಬೊಮ್ಮಾಯಿಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—I rise to a point ot otder. ಮಾನ್ಯ ಉಪ ನಾಯಕರು ಆವೇಶದಲ್ಲಿ ಮಾತನಾಡುವಾಗ you should get out ಎಂಬ ಶಬ್ದ ಉಪಯೋಗ ಮಾಡಿದರು. ರಾಜೀನಾಮೆ ಕೇಳತಕ್ಕಂತಹ ಹಕ್ಕು ಅವರಿಗೆ ಇದೆ, ಕೇಳಲಿ. ಆದರೆ ಇಂತಹ ಶಬ್ದ ಗಳನ್ನು ಇಲ್ಲಿ ಬಳಸತಕ್ಕಂಥಾದ್ದು ಏನು ಇದೆ ಅದು ಸರಿಯಾದುದಲ್ಲ. ಅನ್‌ಪಾರ್ಲಿಮೆಂಟರಿಯಾಗು ತ್ತದೆ ಅದನ್ನು ವಾಪಸ್ ತೆಗೆದುಕೊಳ್ಳಿ.

(ಗೊಂದಲ)

SRI M. MALLIKARJUNA KHARGE.—ಅವರು ಏನು ಹೇಳುತ್ತಾರೆ ಅದಕ್ಕೆ ? Ishall abide. I say that he (Chief Minister) must resign. You can plead on behalf of him because you should not make skapegoat only to Mr. Jalappa.He (Chief Minister) should also be responsible since since he is holding the Department of General Administration.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನೂ ನಿರ್ಣಯವಾಗದೇ ಇರತಕ್ಕಂತಹ ಕೊಲೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡುವುದಾದರೆ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ರಾಜೀವ್ ಗಾಂಧಿಯವರೂ ಎಂದೋ ರಾಜೀನಾಮೆಯನ್ನು ಕೊಟ್ಟುಹೋಗಬೇಕಾಗುತ್ತದೆ,

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಇಬ್ಬರನ್ನು...

(ಗೊಂದಲ)

೪-೦೦ ಪಿ.ಎಂ.

ಛೇರ್ಮನ್.—ಮಾನ್ಯ ಖರ್ಗೆಯವರು ಮಾತನಾಡುತ್ತಿದ್ದಾರೆ, ಮಾತನಾಡಲಿ.

(ಗೊಂದಲ)

ಶ್ರೀ ಎಂ. ರಘುಪತಿ.—ಅವರ ಪ್ರಯತ್ನ ಏನು ಎಂದರೆ ಡೆಲ್ಲಿಯಲ್ಲಿ ದೊರೆಗಳು ಇದ್ದಾರೆ ಅವರನ್ನು ಮೆಚ್ಚಿಸುವುದಕ್ಕೆ ಇವರ ಭಾಷಣ ಅವರನ್ನು ಮೆಚ್ಚಿಸಲಿಕ್ಕೆ ಮೊದಲ ಸಾಲಿನಲ್ಲಿ ಪೈಪೋಟಿ.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅದು ನನಗೆ ಗೊತ್ತಿಲ್ಲವೇ ? ಎಲ್ಲ ಬಿಟ್ಟುಬಿಟ್ಟು ರಘುಪತಿಯವರು ಇದನ್ನು ಹೇಳಬೇಕೇ ? ನನಗೆ ಗೊತ್ತಿಲ್ಲವೇ ?

(ಗೊಂದಲ)

ಛೇರ್ಮನ್.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಮಾನ್ಯ ಖರ್ಗೆಯವರು ಮಾತನಾಡಲಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ರಘುಪತಿಯವರು ಮಧ್ಯೆ ಬಂದು ಹೇಳುತ್ತಿರುತ್ತಾರೆ ನನಗೆ ಗೊತ್ತಿದೆ ಎಂದು ಹೇಳಿದರು. ಈಗ ಗೊತ್ತಿರುವುದು ಒಂದೇ, ಅದೇನೆಂದರೆ ನಮ್ಮ ಎಲೆಯಲ್ಲಿ ಒಂದು ನೊಣ ಬಿದ್ದಿದ್ದರೆ ಅವರ ಎಲೆಯ ಮೇಲೆ ನೂರಾರು ನೊಣಗಳು ಬಿದ್ದಿದೆ, ಇದನ್ನು ಅವರು ಚಿಟ್ಟಾಗಿ ತಿಳಿದುಕೊಂಡು ಅವರು ಮಾತನಾಡಲಿ.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಬಂಗಾರಪ್ಪನವರು ನೊಣ ಬಿದ್ದಿದೆ ಎಂದು ಆಚೆಗೆ ಬಂದರು, ಮತ್ತೆ ಆ ನೊಣವನ್ನೇ ಎಣಿಸುವುದಕ್ಕೆ ಹೋದರು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ರಘುಪತಿಯವರ ಮಟ್ಟಕ್ಕೆ ಹೋಗುವುದಕ್ಕೆ ನನ್ನಿಂದ ಆಗುವುದಿಲ್ಲ, ನನ್ನ ಮಟ್ಟಕ್ಕೆ ನಾನು ಇರುತ್ತೇನೆ.

(ಗೊಂದಲ)

ಛೇರ್ಮನ್.—ದಯವಿಟ್ಟು ಎಲ್ಲರೂ ಕೂಡಿ, ಮಾನ್ಯ ಖರ್ಗೆಯವರೇ ಮುಂದುವರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಯಾರು ಅಪರಾಧಿಗಳು ? ಯಾರು ನಿರಪರಾಧಿಗಳು ? ಎಂದು ಇದನ್ನು ಡಿಟರ್‌ಮೈನ್ ಮಾಡತಕ್ಕಂಥ ಹಕ್ಕು ನನಗೆ ಇಲ್ಲ, ಆದರೆ ಫ್ಯಾಕ್ಟ್ಸ್ ಪ್ರಕಾರ ಇರತಕ್ಕಂಥದ್ದು ಏನು ನಮ್ಮ ಮುಂದೆ ಮಾಹಿತಿ ಇದೆ, ಆ ಮಾಹಿತಿ ಪ್ರಕಾರ ಇದನ್ನು ಸರ್ಕಾರದವರು ಇವತ್ತು ಯಾವ ರೀತಿ ಮುಚ್ಚಿಡುತ್ತಿದ್ದಾರೆ ಎಂದು ಇದರ ಬಗ್ಗೆ ಮಾತನಾಡುತ್ತಿದ್ದೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಎ. ಲಕ್ಷ್ಮೀಸಾಗರ್.—ಅವರ ಹತ್ತಿರ ಮಾಹಿತಿ ಇದೆಯೇ ? ತಾವು ವಕೀಲರು. ಇಲ್ಲಿ ಪ್ರಸ್ತಾಪ ಮಾಡಬೇಕಾದಂಥ ವಿಷಯದ ಆಯಾಮವನ್ನು ಗುರುತಿಸಿ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಇದರ ಬಗ್ಗೆ ಬೇರೆ ವಿವರಗಳನ್ನು ಎವಿಡೆನ್ಸ್ ರೂಪದಲ್ಲಿ ಕೋರ್ಟ್ ಮುಂದೆ ಹಾಜರುಪಡಿಸುವುದಕ್ಕೆ ಪ್ರಯತ್ನ ನಡೆಯುತ್ತಿದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಜಾಲಪ್ಪನವರೇ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಇದರ ಬಗ್ಗೆ ಮಾಹಿತಿ ಇದೆ. What more information you want ? Whatever material available, based on that, we are speaking.

(ಗೊಂದಲ)

ಉಪಾಧ್ಯಕ್ಷರು.—ಸ್ವಲ್ಪ ಯೀಲ್ಡ್ ಆಗಿ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ತನಿಖೆ ನಡೆಯುತ್ತಿದೆ ಅದರಲ್ಲಿ ಅಡಕವಾಗಿರತಕ್ಕಂಥ ನಿಗೂಢವಾಗಿರತಕ್ಕಂಥ ವಿಷಯಗಳ ಬಗ್ಗೆ ಸಿಬಿಐ ನವರು ತನಿಖೆಯನ್ನು ಮಾಡುತ್ತಿದ್ದಾರೆ. ಕೋರ್ಟ್ ಮುಂದೆ ಛಾರ್ಜ್‌ಷೀಟ್ ಆಗಿ ಬರುವವರೆಗೂ ಈ ಪ್ರಕರಣದ ಬಗ್ಗೆ ತಿಳಿವಳಿಕೆ ಪೇಪರ್‌ಗಳಿಂದ ಬಂದಿದೆ ಅಥವಾ ಬೇರೆಯವರಿಂದ ಬಂದಿದೆ ಎಂದು ಹೇಳಿದರೆ ಅದು ಆಗುವುದಿಲ್ಲ. ಕಾನೂನು ವ್ಯಾಪ್ತಿಯಲ್ಲಿ ಅದಕ್ಕೆ ಬೆಲೆ ಇರುವುದಿಲ್ಲ. ಇನ್ನೂ ಇನ್‌ವೆಸ್ಟಿಗೇಷನ್ ನಡೆಯುತ್ತಿರುವುದರಿಂದ ತಪ್ಪು ಯಾರಾದರೂ ಮಾಡಿರಲಿ ಕಾನೂನು ಚೌಕಟ್ಟಿನಲ್ಲಿ ಶಿಕ್ಷೆಗೆ ಒಳಗಾಗ ಬೇಕಾಗುತ್ತದೆ. ಶಿಕ್ಷೆ ವಿಧಿಸತಕ್ಕಂಥವರು ಕೋರ್ಟ್‌ನವರು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಜ್ಞಾನ ಯಾವಾಗ ಆಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ತಪ್ಪಿತಸ್ಥರನ್ನು ನೋಡಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎವಿಡೆನ್ಸ್ ಕೊಟ್ಟಿದೆ, ಪೋಲೀಸ್‌ನವರು ಗೊಂಡಾಗಳು ಎಂದು ಯಾವಾಗ ಗೊತ್ತಾಯಿತು ?

ಉಪಾಧ್ಯಕ್ಷರು.—ಉಪ ನಾಯಕರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಆದ್ದರಿಂದ ನಾನು ಮಾನ್ಯ ಖರ್ಗೆಯವರಲ್ಲಿ ಮತ್ತು ಇತರ ಸ್ನೇಹಿತ ರಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ ಕಾನೂನು ಚೌಕಟ್ಟಿನಲ್ಲಿ ಇಲ್ಲಿ ಏನು ಪ್ರಸ್ತಾಪ ಮಾಡಬಹುದೋ ಅಂತಹ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇವರು ಪ್ರಯತ್ನ ಮಾಡಲಿ, ಕಾನೂನು ಬಿಟ್ಟು ಪ್ರಯತ್ನ ಮಾಡಿದರೆ...

ಶ್ರೀ ಎಂ ಎನ್. ಅಡ್ಯಂತಾಯ.—ಯಾವುದು ಕಾನೂನು ಚೌಕಟ್ಟು ಎಂದು ಮಾನ್ಯ ಕಾನೂನು ಮಂತ್ರಿಗಳು ಹೇಳುತ್ತಾರೆ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಒಂದು ಕಳಕಳಿಯ ಬಿನ್ನಹ. ನಿಗೂಢ ಕೊಲೆ ಆಗಿದೆ, ತಪ್ಪಿತಸ್ಥರನ್ನು ಹುಡುಕಿ ಶಿಕ್ಷೆ ಕೊಡಿಸುವ ಜವಾಬ್ದಾರಿ ಪೋಲೀಸ್ ಇನ್‌ವೆಸ್ಟಿಗೇಷನ್ ಮತ್ತು ಮತ್ತು ಕಾನೂನು ಚೌಕಟ್ಟಿನಲ್ಲಿ ಮಾಡಬಹುದು. ಇದಕ್ಕೆ ಪೂರಕವಾಗಿ ಚರ್ಚೆ ಮಾಡಬೇಕೆ ವಿನಹ ಅದು ಬಿಟ್ಟು ಆರೋಪಣೆಗಳನ್ನು ಮಾಡತಕ್ಕದ್ದು ಅಲ್ಲ, ಅಥವಾ ಕಾನೂನು ಚೌಕಟ್ಟಿಲ್ಲದೆ ಪ್ರಸ್ತಾಪ ಗಳನ್ನು ಮಾಡಬಾರದು.

ಶ್ರೀ ಪಟವರ್ಧಿ ರತ್ನಾಕರ.—ಸಂಭಾವಿತರ ತರಹ ಸೋಗು ಹಾಕಿಕೊಂಡಿದ್ದಾರೆ, ಇವರು ಏನೂ ಹೇಳುವುದು ಬೇಡ...

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಕಾನೂನು ಮಂತ್ರಿ ಗಳೂ ಇದ್ದಾರೆ ಪಿಂಪ್ ಎನ್ನುವವರು ಎವಿಡೆನ್ಸ್ ಕೊಡಬಾರದು ಎಂದು ಎಲ್ಲಿದೆ.

ಉಪಾಧ್ಯಕ್ಷರು.—ಮಾನ್ಯ ಖರ್ಗೆಯವರೇ, ತಾವು ಮುಂದುವರಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ಪೋಲೀಸ್‌ನವರನ್ನು ಕರೆಯಿಸಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಪದೇ ಪದೇ ಲಾ ಮಿನಿಸ್ಟರ್‌ರವರು ಇಂಟರ್‌ಫಿಯರ್ ಮಾಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಒಂದೇ ಸಲ ಇಂಟರ್‌ಫಿಯರ್ ಮಾಡಿದ್ದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಮಾನ್ಯ ಮುಖ್ಯಮಂತ್ರಿಗಳಿಗೆ ಈಗ ನಿಮ್ಮ ಅವಶ್ಯಕತೆ ಇಲ್ಲ.

ಶ್ರೀ ಜೇಠ್ಮಲಾನಿ ಬಂದ ಮೇಲೆ ನಿಮ್ಮ ಅವಶ್ಯಕತೆ ಕಮ್ಮಿ ಆಗಿದೆ.

(ಗೊಂದಲ)

ಶ್ರೀ ಎಂ. ರಘುಪತಿ.—ನಿಮಗೆ ಬಿರ್ಲಾ ಒಂದು ಡಿಫೆಂಡ್ ಮಾಡುತ್ತಾರೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—.—ನೀವು ಹೈದರಾಬಾದ್‌ಗೆ ಹೋಗುತ್ತಿದ್ದೀರ........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳಿದ್ದುದು ಏನೆಂದರೆ ನಿಮಗೆ ನೈತಿಕ ಜವಾಬ್ದಾರಿ ಇದೆಯೇ ? ಈ ಮಾತನ್ನು ಏಕೆ ಹೇಳಿದೆ ಎಂದರೆ ಸಿನ್ಸ್ ಬಿಗಿನಿಂಗ್ ಈ ಘಟನೆ ಹಾಗೆ ನಡೆಯುತ್ತಾ ಇದೆ, ಕಂಪ್ಲೆಟ್ ಯಾರು ಕೊಟ್ಟರು ? ಪುನಃ ಪೋಲೀಸರು ಬಂದರು ಮುಖ್ಯ ಮಂತ್ರಿಗಳು ತಮ್ಮ ಹತ್ತಿರ ಬೇಕಾದ ಜಿಎಡಿ ಫೋರ್ಟ್ ಫೋಲಿಯೋ ಇಟ್ಟುಕೊಂಡು ಇಂತಹ ಘಟನೆ ಬಗ್ಗೆ ಮಾಹಿತಿ ಕೊಡುತ್ತಾರೆ. ತ್ರೂ ಔಟ್‌ದಿ ಸ್ಟೇಟ್‌ನಲ್ಲಿ, ಕಂಟ್ರಿನಲ್ಲಿ ಇದರ ಬಗ್ಗೆ ಅಜಿಟೇಷನ್ ಮಾಡಿದಾಗ ಇದರ ಬಗ್ಗೆ ಹೇಳಿಕೆಗಳು ಬಂದಾಗ, ನೀವು ಮಾಹಿತಿ ಗೊತ್ತಿಲ್ಲ ಎಂದು ಹೇಳಿದಿರಿ. ನೀವು ವಿಷಯವನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಎಲ್ಲಾ ಬಯಲಿಗೆ ಬರಲಿ. ಸಿ.ಬಿ ಐ.ಗೆ ಕೇಸ್ ಕೊಟ್ಟಿದ್ದ ಮೇಲೆ ಫುಲ್ ಕೋ ಆಪರೇಷನ್ ಮಾಡುವುದನ್ನು. ಬಿಟ್ಟು ಇವೊತ್ತಿನ ದಿವಸ ಇವರು ಅಲಿಗೇಷನ್ ಮಾಡುತ್ತಿದ್ದಾರೆ. ನಿಮ್ಮ ಅಧಿಕಾರವನ್ನು ಮಿಸ್-ಯೂಸ್ ಮಾಡುತ್ತಿದ್ದೀರಿ. ಕ್ಯಾರೆಕ್ಟರ್ ಲೆಸ್ ಫೆಲೋಸ್. ಇಂತಹ ಆಪಾದನೆಗಳನ್ನು ಮಾಡುತ್ತಿರುವುದರಿಂದ You are demoralising them. You are discouraging them. ಇದು non-co-operative attitude. ಇದರಿಂದ ನಿಮ್ಮ ಒಲವು ಇನ್ನೊಂದು ಕಡೆ ಇದೆ ಎಂದು ಹೇಳ ಬೇಕಾಗಿದೆ. ಅದಕ್ಕೋಸ್ಕರವಾಗಿ ನಾನು ಹೇಳಿದೆ ನಿಮಗೆ ಇಲ್ಲಿ ನೈತಿಕ ಹೊಣೆ ಇದೆ. ಸ್ಟೇಟ್‌ಮೆಂಟ್ ಮಾಡುವುದಕ್ಕೆ ಮುಂಚೆ ಯೋಚನೆ ಮಾಡಿ ನೋಡಬೇಕು,

ಅವರ ಜೊತೆಯಲ್ಲಿ ನೀವು ಹೋಗಬೇಕಾಗುತ್ತದೆ. ನಿಮಗೆ ಅದರ ಬಗ್ಗೆ ಈಗಾಗಲೇ ಪ್ರಿಜುಡೀಸ್ view ಇದೆ. You have formed your view. ನೀವು ಅದರ ಬಗ್ಗೆ ಈಗಾಗಲೇ ಯೋಚನೆ ಮಾಡಿ ಇಟ್ಟುಕೊಂಡಿದ್ದೀರಿ. ಸಿ.ಬಿ.ಐ. ಅಂದರೆ ಹೀಗೆ, ನಾನು ಅದಕ್ಕೆ ಕೋ ಆಪರೇಷನ್ ಮಾಡ ಬಾರದು ಎನ್ನತಕ್ಕದು ನಿಮ್ಮ ಮನಸ್ಸಿನಲ್ಲಿದೆ. ಕೇಂದ್ರಸರ್ಕಾರದ ಮೇಲೆ ದೂರುವುದು, ಸಿ.ಬಿ.ಐ. ಮೇಲೆ ದೂರುವುದು ಈ ಕೆಲಸವನ್ನು ಮಾಡುತ್ತಿದ್ದೀರಿ. ಸಿ.ಬಿ.ಐ.ನವರು ಲೋಕಲ್ ಪೋಲೀಸ್ ಕೋ-ಆಪರೇಷನ್ ಇಲ್ಲದೆ ಅವರು ಕೆಲಸ ಮಾಡುವುದಕ್ಕಾಗುವುದಿಲ್ಲ. ಪ್ರತಿಯೊಂದು ಹಂತದಲ್ಲಿಯೂ ಕೂಡ ಸಿ.ಬಿ.ಐ.ನವರಿಗೆ ಲೋಕಲ್ ಪೋಲೀಸ್ ಸಹಾಯ ಬೇಕಾಗುತ್ತದೆ. ಇನ್‌ವೆಸ್ಟಿಗೇಷನ್ ಕಂಪ್ಲೀಟ್ ಆಗಬೇಕಾದರೆ ಸತ್ಯಾಂಶ ಹೊರಗೆ ಬರಬೇಕಾದರೆ ಲೋಕಲ್ ಪೋಲಿಸ್‌ನವರ ಕೋ-ಆಪರೇಷನ್ ಇರ ಬೇಕು. ಮಾನ್ಯ ಮುಖ್ಯಮಂತ್ರಿಗಳು ಹೋಮ್ ಪೋರ್ಟ್‌ಪೋಲಿಯೋ ಇಟ್ಟುಕೊಂಡಿರುವುದರಿಂದ, ನೀವು ಈ ತರಹ ಹೇಳುತ್ತಿರುವುದರಿಂದ ಅದನ್ನು ಓದಿದ ಅವರಿಗೆ ನಮ್ಮ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಆಸಕ್ತಿಯಿಲ್ಲ. ಪುಂಡರು. ಪೋಲಿಗಳು ಎಂದು ಹೇಳುತ್ತಿದ್ದಾರೆ, ನಾವು ಏತಕ್ಕೆ ಸಿರಿಯಸ್ಸಾಗಿ ತೆಗೆದುಕೊಳ್ಳೋಣವೆನ್ನುವ ಭಾವನೆ ಒಂದು ವೇಳೆ ಅವರ ಮನಸ್ಸಿನಲ್ಲಿ ಬಂದರೆ ಇನ್‌ವೆಸ್ಟಿಗೇಷನ್ ಯಾವ ಸ್ಟೇಜ್‌ನಲ್ಲಿ ಮುಟ್ಟುತ್ತದೆ ಎನ್ನುವುದನ್ನು ನೀವೇ ಹೇಳಿ. ಆದಕ್ಕಾಗಿ ನೀವು ಇಂಪಾರ್ಶಿಯಲ್ ಎನ್‌ಕ್ವಾಯರಿ ಆಗಬೇಕೆನ್ನುವ ಇಚ್ಛೆಯಿದ್ದರೆ ಜಸ್ಟಿಫಿಕೇಶನ್ ಕೊಡಬೇಕು ಎನ್ನತಕ್ಕ ಆಸೆ ಇದ್ದರೆ ನೀವು ಖಂಡಿತವಾಗಿಯೂ ಪರ್ಮನೆಂಟಾಗಿ ಬೇಡ ಕನಿಷ್ಟ ಇನ್‌ವೆಸ್ಟಿಗೇಷನ್ ಕಂಪ್ಲೀಟ್ ಆಗುವವರೆಗೆ ನೀವು ರಾಜಿನಾಮೆ ಕೊಡಿ.

(ಗೊಂದಲ)

ನಾವು ರಾಜಿನಾಮೆಯನ್ನು ಕೇಳುತ್ತಿದ್ದೇವೆ. ರಾಜಿನಾಮೆ ಕೊಟ್ಟರೆ ಇಂಪಾರ್ಶಿಯಲ್ ಎನ್‌ಕ್ವಯರಿ ಆಗುತ್ತದೆ. ನಾನು ಯೀಲ್ಡ್ ಆಗಿಲ್ಲ, ಎನ್‌ಕ್ವಯರಿ ಸಂಪೂರ್ಣವಾಗಿ ನ್ಯಾಯಬದ್ಧವಾಗಿ ಸರಿಯಾಗಿ ಆಗಬೇಕೆಂದರೆ ರಾಜಿನಾಮೆ ಕೊಡಬೇಕು.

ಶ್ರೀ ಕೆ. ಜೆ. ಜಾರ್ಜ್.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಅಧ್ಯಕ್ಷರು.—ನಿಮ್ಮ ಕ್ರಿಯಾಲೋಪ ಏನು ?

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಕಾನನೂನು ಮಂತ್ರಿಗಳು, ಪ್ರಧಾನ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದೂ ಎಷ್ಟು ಸಾರಿ

ಶ್ರೀ ಎಂ. ರಘುಪತಿ.—ಪ್ರಧಾನ ಮಂತ್ರಿಗಳು ಬೋಫೋರ್ಸ್‌ನಲ್ಲಿ ೧೦ ಸಾರಿ ರಾಜೀನಾಮೆ ಕೊಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಾರ್ಲಿಮೆಂಟ್‌ನಲ್ಲಿ ಅದರ ಬಗ್ಗೆ ಮಾತನಾಡಲಿಕ್ಕೆ ಸಾಕಷ್ಟು ಜನರು ಇದ್ದಾರೆ ಇಲ್ಲಿ ನೀವು ಹೇಳಿ, ನೇರವಾಗಿ ಸಂಬಂಧಪಟ್ಟವರು ನೀವು ಜವಾಬ್ದಾರರಿದ್ದೀರಿ, ಇದಕ್ಕೆ ಉತ್ತರ ಕೊಡತಕ್ಕವರು ನೀವು ಅಲ್ಲಿ ಹೋಗಿ. ಇಲ್ಲಿ ಹೋಗಿ ಎಂದು ದೇಶದ ತುಂಬಾ ತಿರುಗಿಸಿ ತಿರುಗಮುರುಗ ಮಾಡಿ ಹೇಳುವುದಲ್ಲ, ಪ್ರಧಾನ ಮಂತ್ರಿಗಳು ಅದು ಮಾಡಿದರು ಅಂದರೆ ಹಿಂದಿನ ಪ್ರಧಾನ ಮಂತ್ರಿಗಳ ಮಗ ಏನು ಮಾಡಿದ್ದಾರೆ ಅದನ್ನು ಹೇಳಬೇಕೇ ?

ಶ್ರೀ ಎ. ಲಕ್ಷ್ಮೀಸಾಗರ್.—ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಹೇಳಿದಹಾಗೆ ನಾವು ಹೇಳುವುದಕ್ಕಾಗುತ್ತದೆಯೆ?

ಶ್ರೀ ಎ. ಲಕ್ಷ್ಮೀಸಾಗರ್.—ಶಿಲ್ಕು ಇಟ್ಟುಕೊಳ್ಳಬೇಡಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರ ಜೊತೆಗೆ ಮಾನ್ಯ ಜಾಲಪ್ಪನವರು ಸ್ಟೇಟ್‌ಮೆಂಟ್ ಕೊಟ್ಟರು, ಸ್ಟೇಟ್‌ಮೆಂಟ್ ಕೊಡುವಾಗ ಅದರಲ್ಲಿ ಅನೇಕ ವಿಷಯಗಳನ್ನು ಹೊಸದಾಗಿ ಪ್ರಸ್ತಾಪ ಮಾಡಿದ್ದಾರೆ. ಇನ್‌ವೆಸ್ಟಿಗೇಷನ್ ಆಗುವಾಗ ಅವೆಲ್ಲಾ ಪತ್ರಿಕೆಯಲ್ಲಿ ಬರಲಿಯೆಂದು ಹೇಳಿದ್ದಾರೆಯೇ ? ಸಿ.ಬಿ.ಐ.ನವರು ಎನ್‌ಕ್ವಯರಿ ಮಾಡತಕ್ಕದ್ದು ನಿಮಗೆ ಗೊತ್ತಿಲ್ಲವೆ ? ನೀಲಬಾಯಿ ಯಾರು, ಸದಾಶಿವ ಯಾರು, ಎಜುಕೇಶನ್ ಟ್ರಸ್ಟ್ ಯಾವುದು, ಅದಕ್ಕೆಲ್ಲಾ ಏನು ಸಂಬಂಧ ಎಂದರೆ ಇವುಗಳೆಲ್ಲಾ ಗೊತ್ತಿದ್ದು ಸ್ಟೇಟ್‌ಮೆಂಟ್ ಮಾಡಬೇಕಾದರೆ, ನಿಮಗೆ ಈ ಫ್ಯಾಕ್ಟ್ಸ್ ಎಲ್ಲಾ ಮೊದಲೇ ಗೊತ್ತಿದೆಯೆಂದು ಆಯಿತು.

ಶ್ರೀ ಎಂ. ರಘುಪತಿ.—ನಾನು ಕ್ರಿಯಾಲೋಪ ಎತ್ತುತ್ತೇನೆ.

ಉಪಾಧ್ಯಕ್ಷರು.—ಅವರು ಏನು ಹೇಳುತ್ತಾರೋ ನೋಡೋಣ. ಮಾನ್ಯ ಖರ್ಗೆಯವರೇ ತಾವು ಸ್ವಲ್ಪ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ ರಘುಪತಿ. ಯಾರಾದರೂ ರಾಜೀನಾಮೆಯನ್ನು ಕೊಟ್ಟಾಗ ಯಾವುದೋ ಒಂದು ಹೇಳಿಕೆಯನ್ನು ಕೊಡುತ್ತಾರೆ. ಕೊಟ್ಟಂತಹ ಹೇಳಿಕೆ ಚರ್ಚೆಯ ವಸ್ತು ಆಗಕೂಡದು. ರಾಜೀನಾಮೆ ಕೊಟ್ಟ ಸ್ಟೇಟ್‌ಮೆಂಟ್ ಏನಿದೆ ಅದರಲ್ಲಿರುವ ಅಂಶಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಯಾವ ವಿಧವಾದ ಅವಕಾಶವನ್ನು ನಿಯಮಾವಳಿ ಪ್ರಕಾರ ಕೊಡಕೂಡದು. ಅದನ್ನು ರೆಫರ್ ಮಾಡುವುದಕ್ಕೆ ಅವಕಾಶ ಕೊಡಕೂಡದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಯಮಾವಳಿಯ ಅರ್ಥದ ವ್ಯಾಪ್ತಿಯನ್ನು ಅವರು ಸರಿಯಾಗಿ ತಿಳಿದುಕೊಂಡಿಲ್ಲ. ಸ್ಟೇಟ್‌ಮೆಂಟ್ ಮಾಡಿದ ಹೊತ್ತಿನಲ್ಲಿ ಅದರ ಬಗ್ಗೆ ಡಿಬೇಟ್ ಇಲ್ಲ ಅಷ್ಟು ಅದರೊಳಗೆ ಇದೆ. ಸ್ಟೇಟ್‌ಮೆಂಟ್‌ನಲ್ಲಿರತಕ್ಕದ್ದನ್ನು ಕನ್ನಡಿ ಹಾಕಿಸಿ ಇಡಬೇಕೆಂದೇನೂ ಇಲ್ಲ. statement is the property of the House. It can be referred to. The

SRI M. RAGHUPATHY.—Anything can be the property of the House. All the Statements cannot be discussed. A statement on the resignation cannot be discussed on the floor of the House.

SRI K. H. SRINIVAS.—Why ?

SRI M. RAGHUPATHY.--Hon. Member can see the rules. Or can ask the Speaker.

SRI M. MALLIKARJUNA KHARGE.--According to Rule 315 he himself has given an explanation. ಡಿಬೇಟಬಲ್ ಪಾಯಿಂಟ್ ಅವರೇ ರೈಸ್ ಮಾಡಿ, ಅವರೇ ಕೊಟ್ಟಮೇಲೆ ನಾವು ರೆಫರ್ ಮಾಡಬಾರದು ಎಂದರೆ ಅದನ್ನು ಮುಚ್ಚಿಡುವುದಕ್ಕೆ ಆಗುತ್ತದೆಯೋ ?

SRI M. RAGHUPATHY.--Not about that. It is very clear. There are several conventions. It is a laid down convention. It is not a new matter which I am raising before the House. It is a laid down convention. I am not bringing a new subject or a new element.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ — ಇವರು ಹೇಳಿದ್ದುದು ಬರೀ ಅವರು ಕೊಟ್ಟ ಸ್ಟೇಟ್‌ಮೆಂಟ್‌ನಲ್ಲಿಯೇ ಅಲ್ಲ, ಎಲ್ಲಾ ಪೇಪರ್ಸ್‌ನಲ್ಲೂ ಜಗಜ್ಜಾಹೀರಾತಾಗಿದೆ. ಪೇಪರ್ ಸ್ಟೇಟ್‌ಮೆಂಟನ್ನು ಇವರು ರೆಫರ್ ಮಾಡುತ್ತಾ ಇರುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಒಂದು ವಿಧಿ ಬಿಂದುವನ್ನು ಎತ್ತಿದ ಮೇಲೆ ತಾವು ಅದರ ಬಗ್ಗೆ ನಿರ್ಣಯ ಕೊಡುವ ಮೊದಲು ಹೇಳುತ್ತೇನೆ. ಏಕೆಂದರೆ, ಈ ನಿರ್ಣಯ ಬಹಳ ಮಹತ್ತರವಾದ ಪ್ರಭಾವ ಈ ಸದನದ ಕಾರ್ಯಕಲಾಪಗಳ ಮೇಲೆ ಬೀರಬಹುದು. ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಇದರಲ್ಲಿ ಅನೇಕ ನಿಯಮಗಳಿವೆ. ಆ ನಿಯಮಗಳಿಗೆ ಸಂಬಂಧಪಟ್ಟಂತೆ ಒಂದು ಪ್ರೊಸೀಜರ್ ಇದೆ. ಈಗ ಕಾಲಿಂಗ್ ಅಟೆನ್‌ಷನ್‌ನಲ್ಲಿ ಒಂದು ಪ್ರೊಸೀಜರ್ ಇದೆ ಅಥವಾ ಷಾರ್ಟ್ ಡುರೇಷನ್ ಡಿಸ್ಕಷನ್ ಇದೆ, ಇದರಲ್ಲಿ ಇಂತಿಷ್ಟು ಗಂಟೆ ಡಿಸ್ಕಸ್ ಆಗಬೇಕು ಎಂದು ಇದೆ ಹಾಗೆಯೇ ನಿಲುವಳಿ ಸೂಚನೆಗೂ ಇರುತ್ತದೆ. ಆ ನಿಯಮಗಳಿಗೆ ಒಳಪಟ್ಟು ಒಂದು ಕಾರ್ಯಕಲಾಪ ನಡೆದಾಗ ಅಲ್ಲಿಗೆ ಅದು ಮುಕ್ತಾಯವಾಗುತ್ತದೆ. ಇನ್ನು ಬೇರೆ ಯಾವುದೇ ನಿಯಮಗಳ ಅಡಿಯಲ್ಲಿ, ಬೇರೆ ಯಾವುವೇ ಸಂದರ್ಭಗಳಲ್ಲಿ ಅದಕ್ಕೆ ಸಂಬಂಧಪಟ್ಟಂಥ ವಿಚಾರಗಳನ್ನು ಚರ್ಚಿಸಲೇ ಬಾರದು ಅಂದರೆ we will be making that particular rule to govern the rest of the rules in the rules of procedure. This is a dangerous proposition. Each rule is independent and exclusive, as far as the purview of that subject is concerned. ಆ ರೂಲ್ ಇದಕ್ಕೆ ಗವರ್ನ್ ಆಗುತ್ತದೆ. ನಿಯಮ ೧೬೭ರ ಪ್ರಕಾರ ಸನ್ಮಾನ್ಯ ಸಭಾಧ್ಯಕ್ಷರು ಪರ್ಸನಲ್ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅಪ್ಪಣೆ ಕೊಟ್ಟಮೇಲೆ ನಂತರ ಸಚಿವರು ಹೇಳಿಕೆ ಕೊಟ್ಟಮೇಲೆ ಆ ರೀತಿ ಕೊಟ್ಟಂಥ ಹೇಳಿಕೆಯ ಮೇಲೆ ಚರ್ಚೆ ಮಾಡಕೂಡದು, ಅದು ವಸ್ತು ಆಗಬಾರದು ಎಂದು ಸಬ್ಜೆಕ್ಟ್‌ನಲ್ಲಿ ಹೇಳಿದ್ದಾರೆ. ಆದರೆ ಮುಂದೆ ಯಾವುದೇ ಚರ್ಚೆಗೆ ಅದು ವಸ್ತು ಆಗಬಾರದು ಎಂದರೆ, where is the prohibition in the rules ? ಅಂತಹ ಸಿಮಿಲರ್ ರೂಲ್ಸ್‌ನ್ನು ಅನಲೈಸ್ ಮಾಡಿ ಅದರ ಬಗ್ಗೆ ತಾವು ತೀರ್ಪು ಕೊಟ್ಟು ಬಿಟ್ಟರೆ ಬಹಳ ತೊಂದರೆಯಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸ್ಟೇಟ್‌ಮೆಂಟ್ ಮಾಡಿದ ದಿವಸ ಚರ್ಚೆ ಇಲ್ಲ ಎಂದು ಹೇಳುತ್ತಾರೆ, ಮರು ದಿವಸವೂ ಚರ್ಚೆ ಇಲ್ಲವೇ ?

SRI M. VEERAPPA MOILY.—My appeal is, don't make one rule to govern the rest of Rules of procedure.

ಉಪಾಧ್ಯಕ್ಷರು.—ತಾವು ಹೇಳಿದಿರಿ. ಆದರೆ ರೂಲ್ ೧೬೭ ಸಬ್ ರೂಲ್ ೪ರ ಪ್ರಕಾರ

> "There shall be no debate on such statement, after it has been made, a Minister may make a statement pertinent thereto."

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆವೊತ್ತು ಡಿಸ್ಕಸ್ ಆಗಿಲ್ಲ.

ಉಪಾಧ್ಯಕ್ಷರು.—ಸ್ಟೇಟ್‌ಮೆಂಟ್ ಬಂದಿದೆ, ಪುರಸ್ಕಾರ ಮಾಡಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಪ್ರೆಸ್‌ನಲ್ಲಿ ಪಬ್ಲಿಷ್ ಆಗಿದ್ದನ್ನು we are referring. ರೂಲ್ ೩೧೫ ಓದಿ ಅಧ್ಯಕ್ಷರೆ.

SRI VEERANNA.—I am on a point of order.

SRI M. MALLIKARJUNA KHAGE.—Now he is an ordinary member.

MR. DEPUTY SPEAKER.—The statement made is already a statement

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ .— ನಾನು ಸ್ಟೇಟ್‌ಮೆಂಟ್‌ನಲ್ಲಿರತಕ್ಕದನ್ನು ವರ್ಡ್ ಬೈ ವರ್ಡ್ ಹೇಳುತ್ತಾ ಇಲ್ಲ ಆದರೆ ಕೆಲವು ಡೌಟ್ಸನ್ನು ಅವರು ರೈಸ್ ಮಾಡಿದ್ದಾರೆ. ಇದರ ಅರ್ಥ ಏನೆಂದರೆ, ನಾನು ಇಷ್ಟೇ ತಮ್ಮ ಗವಂನಕ್ಕೆ ತರುತ್ತಾ ಇದ್ದೇನೆ. ಇವೆಲ್ಲಾ ಘಟನೆಗಳು ಗೊತ್ತಿತ್ತು ಎನ್ನತಕ್ಕಂಥಾದ್ದು ಅಷ್ಟೆ. ಇದೆಲ್ಲ ಗೊತ್ತಿದ್ದರೂ ಕೂಡ, ಈ ವಿಚಾರವನ್ನು ಬಚ್ಚಿಡತಕ್ಕ ಪ್ರಮೇಯ ಏನು ಇತ್ತು? ಅನೇಕ ವಕೀಲರು ಈ ವಿಚಾರದಲ್ಲಿ ಚಳುವಳಿ ಮಾಡಿದರೂ ಗೊತ್ತಿಲ್ಲವೆಂದು ಹೇಳಿದಿರಿ. ಮೆಮೊರಾಂಡಮ್ ಕೊಟ್ಟರೂ ಗೊತ್ತಿಲ್ಲವೆಂದು ಹೇಳಿದಿರಿ, ಕಳೆದ ಅಧಿವೇಶನದಲ್ಲಿ ಗಮನ ಸೆಳೆಯುವ ಸೂಚನೆಯ ಮೂಲಕ ರೈಸ್ ಮಾಡಿದಾಗ, ಗೊತ್ತಿಲ್ಲವೆಂದು ಹೇಳಿದಿರಿ, ಸಿ.ಬಿ.ಐ.ನವರು ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿದಿರಿ ಇಷ್ಟೆಲ್ಲಾ ಗೊತ್ತಿದ್ದರೂ ಕೂಡ, ಇದನ್ನು ಬಚ್ಚಿಡುವಂತಹ ಪ್ರಯತ್ನ ಏತಕ್ಕೆ ಮಾಡಿದ್ದೀರಿ?

ಶ್ರೀ ಅಬ್ದುಲ್ ನಜೀರ್ ಸಾಬ್.— ಸಭಾಧ್ಯಕ್ಷರೇ, ಮಾನ್ಯ ಜಾಲಪ್ಪನವರು, ಹೇಳಿಕೆ ಕೊಟ್ಟಿದ್ದಾರೆ. ಅದರಲ್ಲಿ ಹೊಸ ಹೊಸ ವಿಷಯಗಳು ಬಚ್ಚಿಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಜಾಲಪ್ಪನವರು ಕೊಟ್ಟಂಥ ಹೇಳಿಕೆ ಚರ್ವಿತಚರ್ವಣವಾಗಿ ಸಾರ್ವತ್ರಿಕವಾಗಿ ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ಹೀಗಿರುವಾಗ ಸಂಶಯ ಬರತಕ್ಕ ರೀತಿಯಲ್ಲಿ ಬಚ್ಚಿಟ್ಟಿದ್ದಾರೆಂದು ಹೇಳುವುದು ಸರಿಯಲ್ಲ. ಯಾವ ವಿಷಯವನ್ನು ಬಚ್ಚಿಟ್ಟಿಲ್ಲ. ಯಾವ ದಿಕ್ಕಿನಲ್ಲಿ ವಿಚಾರಣೆಯಾಗಬೇಕಾಗಿತ್ತೋ ಆ ದಿಕ್ಕಿನಲ್ಲಿ ವಿಚಾರಣೆಯಾಗುತ್ತಿಲ್ಲ ಎನ್ನುವ ಸಂಶಯ ಇದೆ. ಆ ಸಂಶಯಗಳು ತಪಾಸಣೆ ಆಗಬೇಕೆಂದು ಹೇಳುವಂತಹದು ಇದು ಬಚ್ಚಿಡುವ ವಿಷಯವೇನೂ ಅಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಸದಾಶಿವನ್ ಅವರ ವಿಚಾರ ಗೊತ್ತಿಲ್ಲದ ವಿಷಯ ವೇನು?

ಶ್ರೀ ಅಬ್ದುಲ್ ನಜೀರ್ ಸಾಬ್.— ಇದರಲ್ಲಿ ಯಾವ ವಿಷಯವನ್ನು ನಾವು ಬಚ್ಚಿಡುತ್ತಿಲ್ಲ, ವಿಚಾರಣೆ ಯಾವ ದಿಕ್ಕಿನಲ್ಲಿ ಆಗುತ್ತಿದೆ ಎನ್ನುವ ಸಂಶಯವಿದೆ.

ಶ್ರೀ ಆರ್. ವೆಂಕಟರಾಮಯ್ಯ.— ನಿಯಮಾವಳಿ ೧೬೭ ಬಾರ್ ಏನೂ ಅಲ್ಲ. ರೆಫರೆನ್ಸ್ ಮಾಡ ಬಾರದು ಎನ್ನುವುದಕ್ಕೆ ಯಾವುದೂ ಇಲ್ಲ. ಡಿಬೇಟ್ ಮಾಡಬಾರದು ಎಂದು ಇದೆ.

ಶ್ರೀ ಎಂ. ಪಿ. ಪ್ರಕಾಶ್.—ನಿಯಮ ೧೬೭(೪)ರ ಕೆಳಗೆ

There shall be no debate on such Statement- after it has been made, a Minister may make a statement pertinent there to'.

(ಗೊಂದಲ)

ಅಧ್ಯಕ್ಷರು,— ಮಾನ್ಯ ವೆಂಕಟರಾಮಯ್ಯನವರೆ, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.— ಇದು ಕ್ಲಿಯರ್ ಆಗಿದೆ.

"There shall be no debate on such statement, after it has been made, a Minister may make a statement pertinent thereto"

ಆದ್ದರಿಂದ ಆ ವಿಷಯಗಳ ಕುರಿತಾಗಿ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ಮಾನ್ಯ ರಘುಪತಿಯವರು ಪ್ರಸ್ತಾಪ ಮಾಡಿದ್ದುದು, ನಿಯಮಾವಳಿಗಳಿಗೆ ಅನುಗುಣವಾಗಿ ಇರತಕ್ಕದ್ದು. ಯಾವುದೇ ಒಬ್ಬ ಮಂತ್ರಿ ತಕ್ಷಣ ರಾಜೀನಾಮೆ ಕೊಟ್ಟಾಗ ಸದನದಲ್ಲಿ ಹೇಳಿಕೆ ಕೊಡುವುದು ಚರ್ಚೆಯಾಗುವಂಥದ್ದು ಇದು ನಿಯಮಾವಳಿಗೆ ವಿರುದ್ಧವಾಗಿದೆ. ರೂಲ್ ಳನ್ನು ನೋಡಿ.

ಶ್ರೀ ಆರ್. ವೆಂಕಟರಾಮಯ್ಯ.— ತಾವು ನಿಯಮ ೭೮ರಲ್ಲಿ ಪರ್ಮಿಷನ್ ಕೊಟ್ಟಿದ್ದೀರಿ, ಅದಕ್ಕೋಸ್ಕರ ಡಿಬೇಟ್ ನಡೆಯುತ್ತಿದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಕೇಳತಕ್ಕಂತಹದು ಇಷ್ಟೆ. ಮಾನ್ಯ ಮುಖ್ಯ ಮಂತ್ರಿಗಳು ನೇರವಾಗಿ ಜಡ್ಜ್‌ಮೆಂಟ್ ಮೇಲೆ ಕಾಮೆಂಟ್ ಮಾಡತಕ್ಕಂಥಾದ್ದು ಸರಿಯಲ್ಲ. ಸಿ.ಬಿ.ಐ. ಇನ್‌ವೆಸ್ಟಿಗೇಷನ್ ಮಾಡುತ್ತಿರುವಾಗ, ಅವರಿಗೆ ಕೊ–ಆಪರೇಷನ್ ಕೊಡದೆ, ಅದರ ಮೇಲೆ ಟೀಕೆ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸ್ವಾಮಿ, ಕಾಮೆಂಟರಿ ಏತಕ್ಕೆ ಮಾಡಬೇಕು? ನಾವು ಹೇಳುವುದನ್ನು ಕೇಳುವುದಿಲ್ಲ.

ಶ್ರೀ ವೀರಣ್ಣ.— ನೀವು ಸರಿಯಾಗಿ ಹೇಳಿದರೆ ನಾವು ಕೇಳುತ್ತೇವೆ. ಅದನ್ನು ಬಿಟ್ಟು ಏನೇನೋ ಹೇಳಿದರೆ ನಾವು ಕೇಳುವುದಕ್ಕಾಗುವುದಿಲ್ಲ. ಮಾನ್ಯ ಜಾಲಪ್ಪನವರು ಏತಕ್ಕೆ ರಾಜೀನಾಮೆ ಕೊಟ್ಟರು ಎನ್ನುವ ವಿಚಾರದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಮೂರು ವಿಷಯಗಳನ್ನು ಹೇಳಿದ್ದೇನೆ. ಇನ್‌ವೆಸ್ಟಿಗೇಷನ್ ಮೇಲೆ ಪ್ರಭಾವ ಬೀರತಕ್ಕ ರೀತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುತ್ತಿದ್ದಾರೆ. ಆ ರೀತಿ ಮಾಡುತ್ತಿದ್ದರೆ ಅದು ಸರಿಯಲ್ಲ ಇದನ್ನು ಹೇಳುವುದರಿಂದ ಅವರಿಗೆ ಈಗಾಗಲೇ ಸಿಟ್ಟು ಬಂದಿದೆ. ಅವರಿಗೆ ಮಾಹಿತಿ ಗೊತ್ತಿದ್ದರೆ, ಯಾವ ಯಾವ ಮಾಹಿತಿ ಗೊತ್ತಿದ್ದನ್ನು ಸ್ಪಷ್ಟವಾಗಿ ಜನರಿಗೆ ಹೇಳಬಹುದಾಗಿತ್ತು. ಆದರೆ ಅದನ್ನು ಡಿಫೆಂಡ್ ಮಾಡುವುದಕ್ಕೆ ಇಲ್ಲಿಯವರೆಗೆ ಬಂದಿದ್ದಾರೆ. ನಿಮಗೆ ನೈತಿಕ ಜವಾಬ್ದಾರಿ ಇದ್ದರೆ ಈ ಸ್ಥಾನವನ್ನು ಬಿಡಬೇಕು. ನೀವು ಈ ರೀತಿಯ ಪ್ರಭಾವ ಬೀರುವುದರಿಂದ ನಾಳೆ ಇನ್ವೆಸ್ಟಿಗೇಷನ್ ಕೆಡಬಾರದು. ನೀವು ಹೋಂ ಮಿನಿಸ್ಟರ್ ಆಗಿದ್ದೀರಿ. ಹಾಗೂ ಜಿ.ಎ.ಡಿ. ಕೂಡ ನಿಮ್ಮ ಅಧೀನದಲ್ಲಿದೆ ಆದ್ದರಿಂದ ನಿಮ್ಮ ಈ ಸ್ಥಾನವನ್ನು ಬಿಟ್ಟು ಕೊಡ ಬೇಕು. ಇಂಪಾರ್ಷಿಯಲ್ಲಾಗಿ ವಿಚಾರಣೆಯಾಗುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ನಿರ್ದಿಷ್ಟವಾಗಿ, ಕಾನೂನುಬದ್ಧವಾಗಿ, ಅಚ್ಚುಕಟ್ಟಾಗಿ ಸಿ.ಬಿ.ಐ. ಇನ್‌ವೆಸ್ಟಿಗೇಷನ್ ಮಾಡಬೇಕಾಗಿದ್ದರೆ, ಇಲ್ಲಿ ಅದರ ಬಗ್ಗೆ ಡಿಸ್‌ಕಸ್ ಮಾಡುವಂತಹದ್ದು ನಿಯಮವಲ್ಲ ಎಂಬುದನ್ನು ನಾವು ಮೊದಲು ಒಪ್ಪಿಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಉಪಾಧ್ಯಕ್ಷರು, ನಮ್ಮ ಕಾನೂನು ಮಂತ್ರಿಗಳು...

(ಅಧ್ಯಕ್ಷರು ಸ್ಥಾನವನ್ನಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ.— ಈಗ ಪ್ರಾರಂಭ ಮಾಡಬಹುದೇ?

ಅಧ್ಯಕ್ಷರು.— ಶ್ರೀ ವೀರಪ್ಪನವರೇ ತಾವು ೧೫ ಮಿನಿಟ್ ಮಾತನಾಡಿ. ಏಕೆಂದರೆ ಮಾತ ನಾಡುವವರು ಬಹಳ ಜನ ಇದ್ದಾರೆ. ಮ್ಯಾಗ್ಸಿಮಮ್ ೧೫ ಮಿನಿಟ್ ಮಾತನಾಡಿ.

† ಶ್ರೀ ವೀರಪ್ಪ ಮೊಯಿಲಿ (ಕಾರ್ಕಳ).— ತಮ್ಮ ಆದೇಶವನ್ನು ಶಿರಸಾವಹಿಸಿ ಮಾತನಾಡು ತ್ತೇನೆ. ತಮ್ಮ ಕೃಪಾ ಕಟಾಕ್ಷದಲ್ಲಿಯೇ ನಾವು ಇದ್ದೇವೆ. ನಮ್ಮ ಕಾನೂನು ಸಚಿವರು ನಾನು ಮಾತ

ನಡುವುದಕ್ಕೆ ಪ್ರಾರಂಭ ಮಾಡುವ ಮೊದಲೇ ಕೆಲವು ಮಾರ್ಗ ಸೂಚಿಯನ್ನು ಹಾಕಿಕೊಟ್ಟಿದ್ದಾರೆ. ಅವರು ಏನು ಹೇಳಿದ್ದಾರೋ ಅದನ್ನು ೧೦೦ಕ್ಕೆ ೧೦೦ ಪಾಲೂ ನಾನು ಒಪ್ಪುತ್ತೇನೆ. ಏಕೆಂದರೆ ಇದು ಬಹಳ ಗಂಭೀರವಾದ ಒಂದು ಕೇಸು. ಒಂದು ಕೊಲೆ ಮೊಕದ್ದಮೆ. ಅದೂ ಸಿ.ಬಿ.ಐ. ತನಿಖೆ ಮಾಡುತ್ತಿರತಕ್ಕ ಒಂದು ಮೊಕದ್ದಮೆ. ಈ ವಿಚಾರದಲ್ಲಿ ನಾವು ಈ ಸದನದಲ್ಲಿ ಮಾತನಾಡುವಾಗ ಬಹಳ ಸೂಕ್ಷ್ಮವಾಗಿ ಇರಬೇಕು, ಗಂಭೀರವಾಗಿ ಇರಬೇಕು. ಅದು ನಡೆಯುತ್ತಿರತಕ್ಕ ತನಿಖೆಗೆ ಯಾವುದೇ ರೀತಿಯಾದಂಥ ಬಾಧಕ, ಪ್ರಭಾವ ಆತಂಕ ತಾರದಂತೆ ಕಾಯ್ದುಕೊಳ್ಳಬೇಕಾದುದು ತಮ್ಮದೂ ಕರ್ತವ್ಯ ಇದೆ. ಈ ಸದನದ ಕರ್ತವ್ಯವೂ ಇದೆ. ಮೊನ್ನೆ ನಾವು ನಿಲುವಳಿ ಸೂಚನೆ ತರಲಿಕ್ಕೆ ಪ್ರಯತ್ನ ಮಾಡಿದಾಗ ಏನು ನಿರೀಕ್ಷಣೆ ಮಾಡಿದೆವು ಅಂದರೆ. ಈ ಸದನದಲ್ಲಿ ಇದನ್ನು ಪ್ರಸ್ತಾಪ ಮಾಡಬೇಕು. ಏನು ಕೆಲವು ಕಾರಣಗಳಿಂದ ಈ ಪ್ರಕರಣದ ಬಗ್ಗೆ ಅದು ಕಲುಷಿತವಾಗಿತ್ತು, ಒಂದು ರೀತಿಯಲ್ಲಿ ಗೊಂದಲಮಯವಾಗಿತ್ತು, ಅದು ಈ ಸದನದ ಮೂಲಕ ತಿಳಿಯಾಗಬೇಕು, ಸಾರ್ವಜನಿಕರಿಗೆ ಯಾವುದೇ ರೀತಿಯ ಸಂಶಯ ಈ ಪ್ರಕರಣದ ಬಗ್ಗೆ, ತನಿಖೆಯ ಬಗ್ಗೆ ಬಾರದ ರೀತಿಯಲ್ಲಿ ನೋಡಿಕೊಳ್ಳಬೇಕು. ಆ ರೀತಿಯಾದ ಒಂದು ಕನ್‌ಸೆನ್‌ಸಸ್, ಈ ಸದನದ ಚರ್ಚೆಯಿಂದ ನಾವು ಈ ಒಂದು ನಿಲುವಳಿ ಸೂಚನೆಯನ್ನು ತಂದ ಮೇಲೆ, ಒಡಮೂಡಬೇಕೆಂಬ ಭಾವನೆ ಖಂಡಿತವಾಗಿಯೂ ನನಗಿತ್ತು. ನನಗನ್ನಿಸುತ್ತದೆ. ಅದು ಈ ಸದನದ ಎಲ್ಲರಿಗೂ ಇತ್ತು. ನಾವು ನಿಲುವಳಿ ಸೂಚನೆಯನ್ನು ತಂದ ಉದ್ದೇಶ ಕೂಡ ಅದೇ ಆಗಿತ್ತು. ಕಡಿಮೆ ಪಕ್ಷ ಅದು ಸಾಧ್ಯವಾಗದಿದ್ದರೆ, ತಮ್ಮ ಅನುಮತಿಯನ್ನು ಕೇಳಿದೆವು, ಬೇಡಿದೆವು. ನಿಯಮ ೬೮ರಲ್ಲಿ ಇವೊತ್ತು ಅದು ಆಗಿದೆ. ಈ ಸದನದ ಮೂಲಕ ಒಂದು ಒಮ್ಮತದ ಅಭಿಪ್ರಾಯ ಈ ಒಂದು ಗಂಭೀರವಾದ ಪ್ರಕರಣದ ಬಗ್ಗೆ, ಅದರ ತನಿಖೆಗೆ ಯಾವುದೇ ರೀತಿಯ ಬಾದಕ ಬಾರದ ರೀತಿಯಲ್ಲಿ, ಅದು ಬರಲಿ, ವಾತಾವರಣ ತಿಳಿಯಾಗಲಿ ಎಂದು ಹೇಳಿ ನಾನು ಆಶಿಸಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

೪–೩೦ ಪಿ.ಎಂ.

ಈ ಪ್ರಕರಣದ ಬಗ್ಗೆ ಅಥವಾ ಈ ಕೇಸಿನ ವಿಚಾರದ ಬಗ್ಗೆ ವಿಶ್ಲೇಷಣೆ ಮಾಡತಕ್ಕ ಇಚ್ಛೆ ಕೂಡ ನನಗಿಲ್ಲ. ಆದರೆ ಏನು ಸಾರ್ವಜನಿಕರಲ್ಲಿ ಸಂಶಯ ಬರುವ ರೀತಿಯಲ್ಲಿ, ಸಾರ್ವಜನಿಕರಲ್ಲಿ ಒಂದು ರೀತಿಯ ಶಂಕೆ, ಭೀತಿ ಬರುವ ರೀತಿಯಲ್ಲಿ ಏನು ವಾತಾವರಣ ಕದಡಿದೆ ಅದನ್ನು ತಿಳಿ ಮಾಡತಕ್ಕ ಒಂದು ಪ್ರಯತ್ನವಾದರೆ ಈ ರಾಜ್ಯದ ಮಟ್ಟಿಗೆ ಅತ್ಯುನ್ನತ ಆಗಿರತಕ್ಕ, ಇಡೀ ರಾಜ್ಯದ ಒಂದು ಕಾನೂನನ್ನು ಸಿದ್ಧಪಡಿಸತಕ್ಕ, ಈ ವೇದಿಕೆ ಮುಖೇನ ನಾವು ಬಹುಶಃ ಸಮಾಜಕ್ಕೆ, ಸಮಾಜದ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕೆ ಸಹಕಾರಿಯಾದರೆ, ಈ ಚರ್ಚೆ ಅದಕ್ಕಿಂತಲೂ ದೊಡ್ಡ ಕೊಡುಗೆ, ಈ ಸಮಾಜದ ಒಂದು ಮೌಲ್ಯದ ಶೀಲ ಸಂವರ್ಧನೆಗೆ ಮತ್ತೊಂದು ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಇಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಮೊದಲನೆಯದಾಗಿ ಸಿ ಓ.ಡಿ. ನಮ್ಮ ರಾಜ್ಯದಲ್ಲಿ ರಿಜಿಸ್ಟರ್ ಮಾಡಿದ ಕ್ರೈಮ್ ನಂ. ೪೦೫/೮೭ ದಿನಾಂಕ ೩.೯.೮೭ರಂದು ೩೦೨ ರೆಡ್‌ವಿತ್ ೨೦೧ ಐಪಿಸಿ ಪ್ರಕಾರ ಇದು ಆಗಿದೆ. ಇದನ್ನು ಮಾಡಿದಾಗ, ರಾಜ್ಯದ ಸಿಓಡಿಯವರು ತನಿಖೆ ಮಾಡಿದಾಗ ಏನಾಗಿದೆ ನೋಡಿ. ತಾವೂ ಅನುಭವ ಪಡೆದವರಿದ್ದೀರಿ. ತಾವೂ ಕೂಡಾ ಅನೇಕ ಕ್ರಿಮಿನಲ್ ಮೊಕದ್ದಮೆಗಳಲ್ಲಿ ವಿಚಾರಣೆ ನಡೆಸಿದ್ದೀರಿ. ನಾವು ಅನೇಕ ಎಫ್.ಐ.ಆರ್‌ಗಳನ್ನು ನೋಡಿದ್ದೇವೆ. ಆದರೆ ಇದು ಒಂದು ಬಹಳ ವಿಚಿತ್ರವಾದ ರೀತಿಯ ಎಫ್.ಐ.ಆರ್ ಹೈಗ್ರೌಂಡ್ಸ್ ಸ್ಟೇಷನ್‌ನಲ್ಲಿ ಸಿಓಡಿ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಇಲ್ಲಿ ಅಕ್ಯೂಸ್ಡ್ ಯಾರು ? ವಾತಾವರಣ ತಿಳಿ ಮಾಡಿ ಉತ್ತರ ಟ್ರಸರಿ ಬೆಂಚ್‌ನಿಂದ ಬರಬೇಕು. ಎಂದು ಇದನ್ನೆಲ್ಲಾ ಮಾಡುತ್ತಿದ್ದೇನೆಯೇ ಹೊರತು ಮತ್ತೇನಲ್ಲ. ಈ ನಿರ್ದಿಷ್ಟ ಒಂದು ''ಏರಿಯಾ'' ಏನಿದೆ ಅದರ ಬಗ್ಗೆ ನನಗೆ ಕ್ಲಾರಿಫಿಕೇಷನ್ ಬೇಕು. ಎಲ್ಲಾದರೂ ಅಕ್ಯೂಸ್ಡ್ ಗೊತ್ತಿಲ್ಲ ಎಂದರೆ ''ಅನ್ನೋನ್'' ಎಂದು ಹಾಕುತ್ತಾರೆ. ಹೆಸರು ಗೊತ್ತಿದ್ದರೆ ಇಂತಹವರು ಎಂದು ಹೇಳುತ್ತಾರೆ. ಅಥವಾ ಕೆಲವರು ಹೆಸರು ಗೊತ್ತಿದ್ದರೆ ಎ.ಬಿ.ಸಿ ಅಂಡ್ ಅದರ್ಸ್ ಎಂದು ಹಾಕುತ್ತಾರೆ. ಆದರೆ ಇದರಲ್ಲಿ ಬಹಳ ಆಶ್ಚರ್ಯ ಅಧ್ಯಕ್ಷರೇ, ''Number of offenders said to be concerned'' ಎನ್ನುವ ಕಾಲಂಗೆ ''ಹೈಗ್ರೌಂಡ್ಸ್ ಪೋಲೀಸ್ ಸ್ಟೇಷನ್'' ಎಂದು ಹಾಕಲಾಗಿದೆ. ಇದು ೩.೯.೮೭ರಂದು ರಿಜಿಸ್ಟರ್ ಆಗಿದೆ, ಕ್ರಿಮಿನಲ್ ಲಾಯರ್ ಆದ ನಾನು ಇಂತಹದ್ದನ್ನು ನೋಡಿಲ್ಲ, ಇರುವ ವಿಚಾರವನ್ನು ಅವರು ಬರೆದಿದ್ದಾರೆ. It is the Sub-Inspector

Head constable or SHO. But, it mentions a very vague name of High Grounds Police. The name is not mentioned.

ಶ್ರೀ ಎಸ್. ಬಂಗಾರಪ್ಪ.— ಅಕ್ಯೂಸ್ಡ್ ಹಳ್ಳಿಯವನಾಗಿದ್ದರೆ ಹಳ್ಳಿಯ ಹೆಸರನ್ನು ಬರೆಯುತ್ತಿದ್ದರು.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.— ಸಧ್ಯಕ್ಕೆ ಮಂತ್ರಿಮಂಡಲ ಎಂದು ಬರೆದುಕೊಳ್ಳಲಿಲ್ಲ.

ಶ್ರೀ ಎಂ ವೀರಪ್ಪ ಮೊಯಿಲಿ.— ಪೋಲೀಸ್ ಮಟ್ಟ ಕೆಳಕ್ಕೆ ಇಳಿದಿದೆಯೋ ? What is the Highgrounds Police Station ? It is no less than a person who is incharge of the Home Portfolio in the State, Mr. Jalappa. He himself is accused and you say now that the Congress is doing. ನಿಮ್ಮ ಪೋಲೀಸರೇ ಇದನ್ನು ಮಾಡುತ್ತಾರೆ. ನೀವು ಸರ್ಕಾರ ನಡೆಸುವವರು. ಎಫ್.ಐ ಆರ್‌ನಲ್ಲಿ ಇದನ್ನು ಹಾಕಿದ್ದೀರಿ. ಇಷ್ಟೆಲ್ಲಾ ಆದರೂ ಜಾಲಪ್ಪನವರನ್ನು ಅಕ್ಯೂಸ್ಡ್ ಮಾಡುತ್ತಿದ್ದಾರೆ ಕಾಂಗ್ರೆಸ್‌ನವರು ಎಂದು ಊರಿಡೀ ಸಾರುವುದಕ್ಕೆ ಹೋಗುತ್ತಿದ್ದೀರಿ. ಆದುದರಿಂದ ನಾನು ಇದನ್ನು ಸೂಕ್ಷ್ಮವಾಗಿ ಹೇಳಿದೆ.

It told that you are making somebody as a scapegoat: Now you want to turn the table against the Congress. Suppose Sri Jalappa is innocent, have you kept any of the police officer, who is responsible for registering such an entry, under suspension since the very beginning? If you have not kept them under suspension, that means to say, he has to own the responsibility. For the entire government you are responsible. Yes. It is because the High grounds police is not responsible, SHO is not responsible, Head Constable is not responsible, ACP is not responsible. Yes, the Home Minister is responsible.

ಶ್ರೀ ಡಿ.ಟಿ. ಜಯಕುಮಾರ್.—ಎಸ್. ಹೆಚ್. ಓ. ತಪ್ಪು ಮಾಡಿದರೆ...

(ಗೊಂದಲ)

SRI M. VEERAPPA MOILY.—It is a very serious matter.

(*Interuption*)

ಅಧ್ಯಕ್ಷರು,—ಮಾನ್ಯ ಬೊಮ್ಮಾಯಿಯವರೆ ನೀವು ಹೇಳಿ ?

SRI S. R. BOMMAI.--Hon. Member Sri Moily has got a right to make ont a point. I very much appreciate the way he made an appeal to the House that it will create an atmosphere so that investigation which is pending should be impartial. But you referring to the FIR he is stretching it too far. Many number of times police officers prepare FIR and many number of times they mention the names of persons who are not there. Then, you cannot hold the Minister responsible. In that case everyday every Home Minister has to resign. That is not the way. As a lawyer you know about FIR. If a police officer has committed the mistake action will be taken.

That is a part of investigation. CBI is investigating that also. Within 10 days of registration by COD the case is transferred to CBI.

SRI M. VEERAPPA MOILY.—That is the case. ಬಹಳ ಒಳ್ಳೆಯದು ಹೇಳಿದಿರಿ.

SRI M. P. PRAKASH.—May I add one word more? How does any comment on these things will help in the investigation? Every Member's anxiety is to see that an impartial enquiry is conducted and murderer is brought into limelight. If that is the case, will not the discussion be subjudice? Is he not casting aspersions on the investigating agency?

ಶ್ರೀ ಎನ್.ಎಂ. ಅಡ್ಯಂತಾಯ.—ಅವರು ಈಗ ಪಾಯಿಂಟಿಗೆ ಬಂದರು.

MR. SPEAKER.—It should be a healthy discussion. ಅವರು ವಕೀಲರು, ಇವರು ವಕೀಲರು, ಮಾತನಾಡಲಿ ಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ದಯಮಾಡಿ ಒಂದು ಹೇಳಿ. ಈ ತರಹ ಅಕ್ಯೂಸ್ಡ್, ಹೈಗ್ರೌಂಡ್ಸ್ ಪೋಲೀಸ್, ಬೊಮ್ಮನಹಳ್ಳಿ ವಿಲೇಜ್ ಅಂಥ ಹೇಳಿ ಯಾರಾದರೂ ಕೇಸ್ ಹಾಕಿದ್ದು ತಮ್ಮ ಅನುಭವದಲ್ಲಿ ಏನಾದರೂ ಬಂದಿದೆಯೋ ಹೇಳಿ. ಆ ಪಾಯಿಂಟನ್ನು ಬಿಡುತ್ತೇನೆ.

ಅಧ್ಯಕ್ಷರು.—ಈಗ ನನ್ನ ಅಭಿಪ್ರಾಯವನ್ನೇನು ಹೇಳುವುದಿಲ್ಲ. ಅಲ್ಲಿದ್ದರೆ ಹೇಳುತ್ತಿದ್ದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಹೇಳಿದಿರಿ, ಪೋಲಿಸರ ಮೇಲೆ ಕೇಸ್ ಹಾಕುತ್ತಾರೆ. Either it is to avoid the responsibility or to make somebody to escape and naturally to suppress it. ಆದ್ದರಿಂದ ದಯಮಾಡಿ ತಾವು ಎಲ್ಲವನ್ನು ಕೇಳಿದ ಮೇಲೆ ಉತ್ತರಿಸಿದರೆ ಒಳ್ಳೆಯದು.

ಅಧ್ಯಕ್ಷರು.—ತಾವು ಹೆಸರಾಂತ ವ್ಯಕ್ತಿಗಳು, ಅವರು ಹೆಸರಾಂತ ವ್ಯಕ್ತಿಗಳು.

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ಕೇಳಿ, ಕೋರ್ಟಿನಲ್ಲಿ ಎರಡೂ ಕಡೆಯ ವಕೀಲರು ವಾದ ಮಾಡುತ್ತಿರುತ್ತಾರೆ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ಅವರೂ ಹೆಸರಾಂತ ವ್ಯಕ್ತಿಗಳು, ಇವರೂ ಹೆಸರಾಂತ ವ್ಯಕ್ತಿಗಳು. ಉಳಿದವರು ಹೆಸರಾಂತ ವ್ಯಕ್ತಿಗಳು ಅಲ್ಲವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯಿಲಿಯವರು ಪ್ರಾರಂಭದಲ್ಲಿ ಹೇಳಿದಂತಹ ನೀತಿ ಸೂಚನೆ ಏನು ಇದೆ, ಅದನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಇವತ್ತು ಇಲ್ಲಿ ನಡೆಯುತ್ತಿರತಕ್ಕ ಚರ್ಚೆಯಿಂದ ಸಿ.ಬಿ.ಐ. ವಿಚಾರಣೆ ಏನು ಇದೆ, ಅದು ನ್ಯಾಯಬದ್ಧವಾಗಿ ನಡೆಯಬೇಕು, ಅಲ್ಲಿ ನಡೆಯುತ್ತಿರತಕ್ಕ ತನಿಖೆಯ ಮೇಲೆ ಅನುಮಾನ ಬರಬಾರದು ಎನ್ನುವ ಮಾತನ್ನು ಅವರು ಏನು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಅದನ್ನು ನಾವು ಒಪ್ಪಿಕೊಂಡೇ ಸಿ.ಓ.ಡಿ.ಯಿಂದ ಇದನ್ನು ತನಿಖೆ ಮಾಡುವುದರಿಂದ ಜಸ್ಟೀಸ್ ಸಿಗಲಿಕ್ಕಿಲ್ಲವೆಂದು ಹೇಳುವ ಅಭಿಪ್ರಾಯಕ್ಕೆ ತಲೆಬಾಗಿ ನಾವಾಗಿಯೇ ಸಿ.ಬಿ.ಐ. ತನಿಖೆಗೆ ಒಪ್ಪಿದ್ದೇವೆ. ಆದರೆ ಈ ಚರ್ಚೆಯಲ್ಲಿ ಎಫ್.ಐ.ಆರ್. ಬಗ್ಗೆ ಹೇಳುವುದು ಸರಿಯಾದುದಲ್ಲ. ಅದೇ ರೀತಿ ಹೈಗ್ರೌಂಡ್ ಪೋಲೀಸ್ ಸ್ಟೇಷನ್ ಎಂಬುದಾಗಿ ಹೇಳುವುದೂ ಕೂಡ ಸರಿಯಾದುದಲ್ಲ. ಅದನ್ನು ಯಾರು ಬರೆದಿದ್ದಾರೆ ಎಂಬುದರ ವಿವರಗಳ ಬಗ್ಗೆಯೂ ಕೂಡ ಅವರು ಇನ್‌ವೆಸ್ಟಿಗೇಷನ್ ಮಾಡುತ್ತಾರೆ. Let the CBI go into that, even that aspect of it. We will leave it to them.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಹೇಳಿದ್ದುದು ಏತಕ್ಕೆಂದರೆ how your criminal machinery, police machinery has been set into motion in the initial stage itself? How can we get at the truth ?

ಶ್ರೀ ಎನ್. ಎಂ. ಅಡ್ಯಂತಾಯ.—ತಮ್ಮ ಅಸಹಕಾರ ಚಳುವಳಿ ಏನು ಇದೆ, ಅದರ ಬಗ್ಗೆ ಮಾನ್ಯ ಮೊಯ್ಲಿಯವರು ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಿ.ಓ.ಡಿ, Crime No. 405-೧೯೮೭ರ ಪ್ರಕಾರ it is a very small FIR registered by the COD, Circle Inspector of Police, Cubbon Park Division. I will just read the FIR. I am not going to read in full. He has sustained fracture on bone...

ಶ್ರೀ ಡಿ.ಟಿ. ಜಯಕುಮಾರ್,—ಅದನ್ನು ಓದುವುದಕ್ಕೆ ಅವಕಾಶ ಕೊಡಬೇಡಿ. He cannot read the FIR here. Is he an investigating officer ?

SRI M. VEERAPPA MOILY —It is a public document, He was in Police Department. FIR is a public document ಎನ್ನುವ ಮಿನಿಮಮ್ ನಾಲೆಡ್ಜ್ ಇಲ್ಲವೇ ?

ಶ್ರೀ ಡಿ. ಟಿ. ಜಯಕುಮಾರ್.—ಅದು ಗೊತ್ತಿದೆ. ಇಲ್ಲಿ ಅಲ್ಲ ಅದನ್ನು ಓದುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಬಹಳ ಪ್ರಾಮುಖ್ಯವಾದ ಒಂದು ವಿಚಾರ ಎಂದರೆ the dead body of Rasheed was found and seen by a railway gangman on 18–8–87. Dead body of Rasheed, not a person who is known as Rasheed, his identity has not yet been questioned in the dispute by the investigation officer as on 3–9–87. This is your own police FIR. ನಮ್ಮ ಗೃಹ ಮಂತ್ರಿಗಳ ಪೋಲೀಸ್ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಪೋಲೀಸ್ ಕೊಟ್ಟಿರತಕ್ಕ ಎಫ್. ಐ. ಆರ್ ಏನು ಇದೆ. ಇದು ಬಹಳ ಮುಖ್ಯವಾದ ಪಾಯಿಂಟ್ "ಆ ವಿಚಾರ ಈ ಸದನದಲ್ಲಿ ಬಂದಾಗ ಹಾಗೂ ಹೊರಗಡೆ ಕೂಡ ಅದು ರಷೀದ್ ಹೆಣ ಅಲ್ಲ, ಅದು ಇರಲಿಕ್ಕಿಲ್ಲ". this is the doubt cast by the Chief Minister. He has misled the House and even as an today he is misleading the House. Police, at the first point, have not dispute about the dead body. It is not CBI registration.

ಶ್ರೀ ಎಸ್, ಬಂಗಾರಪ್ಪ.—ನಿಮ್ಮ ಪೋಲೀಸಿನವರು ಬರದದ್ದು.

SRI M. P. PRAKASH.—Whatever information they get it, is a complaint.

SRI M. VEERAPPA MOILY.—It is not the complaint of any one. This is the statement of a Police Officer himself.

SRI M. P. PRAKASH.—FIR need not be a complaint also. It is only an information.

SRI M. VEERAPPA MOILY.—This is the statement filed by a police officer. Suppose it is a complaint.....

M P. PRAKASH.—You said FIR.

SRI M. VEERAPPA MOILY.—This is an endorsement made under FIR by your Circle Inspector. He has specifically said it. ಎಫ್.ಐ.ಆರ್. ನಲ್ಲಿದೆ. You please go through it. So it is not a person unknown or a person......

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುವುದೇನೆಂದರೆ ಇದನ್ನು ಸಿ.ಓ.ಡಿ.ಯವರು ರಿಜಿಸ್ಟರ್ ಮಾಡಿದಾಗ, ರಷೀದನ ಬಾಡಿ ಸಿಕ್ಕಿದಮೇಲೆ ತಮಿಳ್ನಾಡು ಪೋಲೀಸರು ಇದನ್ನು ಐಡೆಂಟಿಫೈ ಮಾಡಿದ್ದಾರೆ. ಡೈರಿ ಬರೆದಿದ್ದಾರೆ. ಪತ್ರಿಕೆಯಲ್ಲಿ ಬಂದಿದೆ. ಇದು ಹೊಸದೇನೂ ಅಲ್ಲ. ಸಿ.ಓ.ಡಿ.ಯಲ್ಲಿ ರಿಜಿಸ್ಟರ್ ಆಗುವುದರೊಳಗೆ ಇದು ರಷೀದ್‌ನ ಬಾಡಿ ಎಂದು ತಮಿಳ್ನಾಡು ಪೋಲೀಸರಿಗೆ ಗೊತ್ತಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಷ್ಟೆಲ್ಲಾ ಆದಮೇಲೆ, Mahadevappa, Superintendent of Police, COD, is the complainant on behalf of the COD. He gives written complaint to the Circle Inspector of Police for registration. This is signed by not less than a person of Superintendent of Police He says that it is the body of Rasheed. There is no dispute about it.

ಶ್ರೀ ಆರ್. ವೆಂಕಟರಾಮಯ್ಯ.—ಸುಮ್ಮನೆ ಏತಕ್ಕೆ ಗಲಾಟೆ ಮಾಡುತ್ತಿದ್ದೀರಿ ? ಇದರ ಬಗ್ಗೆ ಏತಕ್ಕೆ ಸುಮ್ಮನೆ ತಕರಾರು ಮಾಡಿಕೊಳ್ಳುತ್ತಿದ್ದೀರಿ ?

SRI S. R. BOMMAI.—The police had the high morale to register the case against our own police. You must appreciate that.

ಶ್ರೀ ಎಂ, ವೀರಪ್ಪ ಮೊಯಿಲಿ.—ಹೌದು, ನಾನು ಅಪ್ರಿಸಿಯೇಷನ್ ಕೊಡುತ್ತಿದ್ದೇವೆ. ಮಾನ್ಯ ಬೊಮ್ಮಾಯಿಯವರು ಸಾವಧಾನವಾಗಿದ್ದರೆ ಇನ್ನೂ ಜಾಸ್ತಿ ಅಪ್ರಿಸಿಯೇಷನ್ ಸಿ. ಐ. ಡಿ. ಗಳಿಗೆ ಕೊಡುವುದಕ್ಕೆ ಸಹಾಯವಾಗುವಂಥ ಮೆಟೀರಿಯಲ್ಸನ್ನು ನಾನು ಕೊಡುತ್ತಿದ್ದೇನೆ. No dispute about it. On 30-8-87 on the floor of the House the Chief Minister has caste doubt about the body of Sri Rasheed.

SRI S R BOMMAI.—Still we have got doubt. Until, it is decided in the court it is doubtful.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಿಮ್ಮ ಪೋಲೀಸರು ಹೇಳಿದ್ದನ್ನೇ ನೀವು ಇಲ್ಲ ಎಂದು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಛಾರ್ಜ್ ಷೀಟಿನಲ್ಲಿರಬಹುದು. ಎವಿಡೆನ್ಸ್ ಪ್ರೂಫ್ ಆಗಬಹುದು. ಆದರೆ ಅಲ್ಲಿಯವರೆಗೂ ಇದು ಡೌಟ್‌ಫುಲ್.

ಶ್ರೀ ಆರ್. ವೆಂಕಟರಾಮಯ್ಯ.—ಅದು ಏನಿದೆಯೋ ಅದು ಬೇರೆ. ಆದರೆ ಈಗ ಎವಿಡೆನ್ಸ್ ಮಾತ್ರ ನಾವು ನೋಡಬೇಕಾಗುತ್ತದೆ. ಆ ಮೇಲೆ ಕ್ರಾಸ್ ಎಕ್ಸಾಮ್‌ಗೆ ಕೇಸ್ ಹೋಗುವಾಗ ನಾವು ಹೇಳಬಹುದು. ಆದರೆ ಈಗ ಇದು ನಿಜ, ಈಗ, ನೀವೇ ಒಪ್ಪಿಕೊಂಡಿದ್ದೀರಿ. ರಷೀದ್ ಸತ್ತಿರುವುದು ನಿಜ ಕೊಲೆಯಾಗಿರುವುದು ನಿಜ, ಎಂದು ನೀವು ಒಪ್ಪಿಕೊಂಡಿದ್ದೀರಿ ಇದು ನಾಳೆ ಹೋದರೂ ಹೋಗಲಿ, ಆಮೇಲೆ ಬೇಕಾದರೆ ಎವಿಡೆನ್ಸ್‌ನಲ್ಲಿ ಏನಾದರೂ ಆಗಲ್ಲಿ, ಆದರೆ ನಾನು ಹೇಳುವುದು ಇನ್ನೊಂದು ಸ್ಟೇಜ್.

ಶ್ರೀ ಎಂ. ಪಿ. ಪ್ರಕಾಶ್.—ಈ ರೀತಿ ನಿಮ್ಮ ಮುಖ್ಯ ಮಂತ್ರಿಗಳ ಪೋಲೀಸರು, ಗೃಹ ಮಂತ್ರಿಗಳ ಪೋಲೀಸರು, ಎಂದು ಹೇಳುವುದಾದರೆ, ನಾಳೆ ನಾವು ಕೂಡ ರಾಜೀವ್ ಗಾಂಧಿಯವರ ಪೋಲೀಸರು ಅಥವಾ ಗೃಹ ಮಂತ್ರಿ ಬೂಟಾ ಸಿಂಗ್‌ರವರ ಪೋಲೀಸರು ಎಂದು ಹೇಳಬಹುದು. ಆದರೆ ಈ ರೀತಿ ಮಾತನಾಡುವುದು ಬೇಡ, ಇದರಿಂದ ನಮ್ಮ ಇಡೀ ವ್ಯವಸ್ಥೆಯೇ ಕೆಟ್ಟು ಹೋಗುತ್ತದೆ. ಆದ್ದರಿಂದ ನಾವು ಯಾರಾದರೂ ಮಾತನಾಡಬೇಕಾದರ ನಮ್ಮ ರಾಜ್ಯದ ಪೋಲೀಸರು ಎಂದು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ.—ನೋ ದಟ್ ಈಸ್ ನಾಟ್ ದಿ ಥಿಂಗ್.

ಅಧ್ಯಕ್ಷರು —ಸಿ ಓ ಡಿ. ಪೋಲೀಸರೇ ಆಗಲಿ, ಸಿ.ಬಿ.ಐ. ಪೋಲೀಸರೇ ಆಗಲಿ, ಅವರೆಲ್ಲರೂ ನಮ್ಮ ಪೋಲೀಸರು ಎಂದು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ರಾಜ್ಯದ ಪೋಲಿಸ್ ಇಲಾಖೆಯುವರು ಒಂದು ಹೆಣವನ್ನು ಮಹಜರ್ ಮಾಡಿ ಇದು ಇಂಥವರದ್ದು ಎಂದು ಪತ್ತೆ ಹಚ್ಚಿ ಒಂದು ರಿಪೋರ್ಟ್‌ನ್ನು ಕೋರ್ಟಿಗೆ ಕಳುಹಿಸಿಕೊಟ್ಟಿದ್ದಾರೆ. ಅದು ಎಫ್.ಐ.ಆರ್.ಗೆ ಹೋಗುವುದಕ್ಕೆ ಮುಂಚೆ ಇರಬಹುದು ಅಥವಾ ಎಫ್.ಐ.ಆರ್ ಗೆ ಹೋದ ಮೇಲೆ ಅಥವಾ ಪಂಚನಾಮೆ ಎಲ್ಲಾ ಆದಮೇಲೆ ಇರಬಹುದು. ಇನ್‌ಕ್ವೆಸ್ಟ್ ಓವರ್ ದಿ ಡೆಡ್ ಬಾಡಿ ಎಲ್ಲಾ ಹೇಳಿಕೆಗಳನ್ನೂ ತೆಗೆದುಕೊಂಡ ಮೇಲೆ ಅದನ್ನು ಕಳುಹಿಸುವುದಕ್ಕೆ ಬರುತ್ತದೆ. ಈ ಬಾಡಿ ಇಂಥವರದ್ದು ಎಂದು ಹೇಳುವುದಕ್ಕೆ ಸಾಧ್ಯವಿದೆ. ಇದನ್ನು ಇಲಾಖೆಯುವರು ಒಂದು ಸಾರಿ ಕಳುಹಿಸಿರುತ್ತಾರೆ. ಅದನ್ನು ಕಳುಹಿಸಿದ್ದಾದ ಮೇಲೆ ಈಗ ನೀವು ಅಂದರೆ ಈ ಸರ್ಕಾರವನ್ನು ನಡೆಸುವವರು ಇರಬಹುದು, ಮಂತ್ರಿಗಳು ಇರಬಹುದು, ಅಥವಾ ಮುಖ್ಯ ಮಂತ್ರಿಗಳು ಇರಬಹುದು. ಅಥವಾ ಈ ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಡುವವರು ಇದು ರಷೀದ್‌ನದ್ದು ಅಲ್ಲ, ಕರಿಯಪ್ಪನ ಡೆಡ್ ಬಾಡಿ ಅಲ್ಲ, ಇದು ಮತ್ತೊಬ್ಬರದು ಇರಬಹುದು ಎಂದು ನಿಮ್ಮ ಪೋಲೀಸರು ಹೇಳಿಕೆಯನ್ನು ಕೊಟ್ಟಿದ್ದನ್ನು ಕೋರ್ಟಿಗೆ ಬರೆದ ಮೇಲೆ ಮತ್ತೆ ನೀವು ಅಲ್ಲಿ ಹೋಗಿ ಅದನ್ನು ತದ್ವಿರುದ್ಧವಾಗಿ ಮಾಡುವುದಕ್ಕೆ ಸಾಧ್ಯವೆ ? ನೀವೂ ಅಡ್ವೋಕೇಟ್, ನಾವೂ ಅಡ್ವೋಕೇಟ್ಸ್. ನೀವು ಮಂತ್ರಿಗಳಾಗಿದ್ದೀರಿ, ನಾವೂ ಮಂತ್ರಿಗಳಾಗಿದ್ದವರು, ಇಲಾಖೆಯನ್ನು ಹ್ಯಾಂಡಲ್ ಮಾಡಿ ಅನುಭವ ಇರತಕ್ಕವರು. ಕಾನೂನು ಪ್ರಕಾರ ಈ ರೀತಿ ಹೇಳಿಕೆಯನ್ನು ಕೊಡುವುದಕ್ಕೆ ಸಾಧ್ಯವೇ ? ಎಂಬುದನ್ನು ದಯವಿಟ್ಟು ವಿಚಾರ ಮಾಡಿ ನೀವೇ ಹೇಳಿ.

ಶ್ರೀ ಎಸ್ ಆರ್. ಬೊಮ್ಮಾಯಿ.—ಒಂದುಸಾರಿ ಎಫ್.ಐ.ಆರ್. ಬಂದ ಮೇಲೆ ಅದೇ ಕೊನೆ ಅಲ್ಲ ಎಂಬುದು ತಮಗೂ ಗೊತ್ತಿದೆ. FIR is a FIR. Whatever information is received at the firt stage. ಅದನ್ನು ಕಳುಹಿಸಿಕೊಡುತ್ತಿದ್ದಾರೆ, ಅದನ್ನು ರಿಜಿಸ್ಟರ್ ಮಾಡುತ್ತಿದ್ದಾರೆ. ಆ ಬಾಡಿಯ ಐಡೆಂಟಿಟಿ ಬಗ್ಗೆ ನಾನು ಹೇಳುವುದೇನೆಂದರೆ...

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಬೊಮ್ಮಾಯಿಯವರೆ, ಯಾರು ಹೊಡೆದರು , ಯಾರು ಬಿಟ್ಟರು ? ಯಾರು ಅಪರಾಧಿಗಳೆಂಬ ಪ್ರಶ್ನೆಗೆ ನಾನು ಹೋಗುತ್ತಿಲ್ಲ. Just I am referring to the question of identifying the body. ಅದು ಒಂದರ ಮಟ್ಟಿಗೆ ಮಾತ್ರ ಹೇಳುತ್ತಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ. — ಡೆಡ್ ಬಾಡಿ ರಷೀದ್‌ನದೋ ಅಥವಾ ಇಲ್ಲವೋ ಎನ್ನುವುದನ್ನು ನಾವಾಗಲಿ, ಮುಖ್ಯಮಂತ್ರಿಗಳಾಗಲಿ, ಜಾಲಪ್ಪನವರಾಗಲಿ ಕೊಶ್ಚನ್ ಮಾಡುವುದಕ್ಕೆ ಹೊರಟರೆ ನಮ್ಮದು ಪ್ರೊಜುಡೈಸ್ ಆಗುತ್ತದೆ. ಅದನ್ನು ಕೊಶ್ಚನ್ ಮಾಡತಕ್ಕಂಥವರು ಯಾರು ಎಂದರೆ ಅಪರಾಧಿಗಳು ಯಾರು ಎಂದು ನಿಗದಿ ಮಾಡುತ್ತಾರೋ ಅವರು ಬೇಕಾದರೂ ಅದನ್ನು ಮಾಡಿಕೊಳ್ಳಲಿ.ಅದನ್ನು ಬಿಟ್ಟು ನಾವು ಈಗಲೇ ಆ ಡೆಡ್ ಬಾಡಿ ರಷೀದ್ ಡೆಡ್ ಬಾಡಿ ಹೌದೋ ಅಥವಾ ಅಲ್ಲವೋ ಎಂಬುದನ್ನು ನಾವುಗಳು ಹೇಳುವುದಕ್ಕೆ ಹೋದರೆ ಈ ದೇಶದ ಜನ ನಮಗೆ ಏನೆಂದುಕೊಳ್ಳುತ್ತಾರೆ ? ಸುಮ್ಮನೆ ನಾವು ಏಕೆ ಡಿಫೆಂಡ್ ಮಾಡಿಕೊಳ್ಳುವ ಹಾಗೆ ಮಾತನಾಡುವುದು ಯಾರು ಅಪರಾಧಿಗಳಾಗುತ್ತಾರೋ, ಶ್ರೀಮಾನ್ ನಾರಾಯಣರವರಾಗಲಿ,ಅಥವಾ ಇನ್ನಿತರೆ ಅಪರಾಧಿಗಳಾಗಲಿ ಅವರನ್ನು ರಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರು ಬೇಕಾದರೆ ಹೇಳಿಕೊಳ್ಳಲಿ, ಇದು ರಷೀದ್ ಡೆಡ್ ಬಾಡಿ ಅಲ್ಲ, ಇದು ಕೊಲೆಯಾಗಿಲ್ಲ ಎಂದು. ಈಗ ನಾವು ಇಲ್ಲಿ ಸೇರಿಕೊಂಡು ಅವನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಶುರು ಮಾಡಿದರೆ ಈ ದೇಶದ ಜನ ನಮ್ಮನ್ನು ಏನೆಂದುಕೊಳ್ಳುತ್ತಾರೆ ? ನಾವು ಏಕೆ ಸುಮ್ಮನೆ ಇನ್ವಾಲ್ವ್ ಆಗಬೇಕು ? ಮಾನ್ಯ ಲಕ್ಷ್ಮೀಸಾಗರ್‌ರವರು ಇನ್ನೂ ಆ ಸ್ಟೇಜಿಗೆ ಆ ಕೇಸು ಬಂದಿಲ್ಲ. ನಾವು ಇನ್ನೂ ಪ್ರಿಲಿಮಿನರಿ ಸ್ಟೇಜ್‌ನಲ್ಲೇ ಇದ್ದೇವೆ ಈಗಲೇ ಸುಮ್ಮನೆ ಮರ್ಡರ್ ಕೇಸನ್ನು ಡಿಫೆಂಡ್ ಮಾಡುವುದಕ್ಕೋಸ್ಕರ ಕೆಲವರು, ಇಲ್ಲ ಎಂದು ಹೇಳುವುದಕ್ಕೆ ಕೆಲವರು ಆ ಹಂತಕ್ಕೆ ಹೋಗುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಡುವಾಗ ನಮ್ಮ ರಾಜ್ಯದ ಪೋಲೀಸ್‌ನವರು ಏನು ಮಾಹಿತಿಯ ಮೇಲೆ ಎಫ್.ಐ.ಆರ್. ರಿಜಿಸ್ಟರ್ ಮಾಡಿಕೊಂಡಿರುತ್ತಾರೋ ಅದನ್ನು ಗಮನದಲ್ಲಿಡಬೇಕಾಗುತ್ತದೆ, ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಡಿಬೇಟ್ ಮಾಡುವಾಗ we can argue still whether it is a dead body of Rasheed or not ಡಿಬೇಟ್‌ನಲ್ಲಿ ಆ ರೀತಿ ಹೇಳಬಹುದು.

ಯಾವ ಕಾಂಟೆಸ್ಟ್‌ನಲ್ಲಿ ಹೇಳಿದ್ದಾರೆ ಎಂಬುದು ಮುಖ್ಯ. ಕೊನೆಗೆ ಇನ್ನೂ ಆ ಬಗ್ಗೆ ಚಾರ್ಜ್‌ಷೀಟ್ ಇಲ್ಲ. ಚಾರ್ಜ್‌ಷೀಟ್ ಹಾಕುವುದರೊಳಗೆ ಎಫ್.ಐ.ಆರ್. is there. It is a very early stage.

ಶ್ರೀ ಎಸ್. ಬಂಗಾರಪ್ಪ.—ಬೇರೆಯವರು ಮಾಡಲಿ. ನೀವು ಸರ್ಕಾರದವರು ಆ ರೀತಿ ಹೇಳಬಹುದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.-ಸರ್ಕಾರದ ಪರವಾಗಿ ಮಾತನಾಡುವಾಗ ಸ್ಟಿಲ್ ಇಟ್ ಈಸ್ ಓಪನ್ ಎಂದು ಹೇಳಬಹುದು. ಅದು ಅಲ್ಲವೇ ಅಲ್ಲ ಎಂದು ಹೇಳಿಲ್ಲ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅವರ ಭಾಷಣದಲ್ಲಿ ರಷೀದ್ ಬಾಡಿ ಅಲ್ಲವೇ ಅಲ್ಲವೆಂದು ಅವರು ಹೇಳಿದ ಹಾಗೆ ಇಲ್ಲ. ಒಂದು ವೇಳೆ ಅವರು ಹೇಳಿದ್ದರೂ ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದಾರೆಂಬುದನ್ನು ಡಿಬೇಟ್ ತೆಗೆದು ನೋಡಬೇಕಾಗುತ್ತದೆ. ಅದನ್ನು ತೆಗೆದು ನೋಡೋಣ.

ಶ್ರೀ ಆರ್. ವೆಂಕಟರಾಮಯ್ಯ.—ಆ ಬಗ್ಗೆ ಹೆಚ್ಚು ವಿಸ್ತಾರವಾಗಿ ಡಿಬೇಟ್ ಮಾಡುತ್ತಿದ್ದರೆ ಅದರ ಬೋನಾಫೈಡ್ ಕೊಶ್ಚನ್ ಮಾಡಿದ ಹಾಗೆ ಆಗುತ್ತದೆ. ಅದನ್ನು ಬಿಟ್ಟು ಬಿಡಿ. ಅದರ ಬಗ್ಗೆ ಪ್ರೋಬ್ ಮಾಡುವುದು ಬೇಡ. ಯಾರೂ ಪ್ರೋಬ್ ಮಾಡುವುದು ಬೇಡ. ಅದರಿಂದ ಒಳ್ಳೆಯ ಪರಿಣಾಮವಾಗುವುದಿಲ್ಲ. ಇದರಿಂದ ನಮ್ಮ ಕರ್ತವ್ಯವನ್ನು ಲೋಪ ಮಾಡುತ್ತಿದ್ದೇವೆ, ಇನ್ನೂ ಡೀಟೈಲ್ಸ್‌ಗೆ ಹೋಗುವುದು ಬೇಡ. By that we will be definitely harming the investigation.

SRI M. VEERAPPA MOILY.—I have stated what is mentioned by the report of the SP in the COD department. The very same SP says that on the last evening of 16-8-1987 he (Rasheed) was alive and his dead body was found on 18-8-1987.

MR. SPEAKER.—Are you arguing before the Sessions Court ?

SRI. M. VEERAPPA MOILY.—No. I am telling the position.

MR. SPEAKER.—The court is there to look into all these matters. Court is there to loo into the facts.

It is a deeper question here. ಏಕೆಂದರೆ ಸಿ.ಒ.ಡಿ. ಯಿಂದ, ಸಿ.ಬಿ.ಐ.ಗೆ ಎಂಟ್ರಸ್ಟ್ ಮಾಡಿದರು. CBI registered the case on 25-9-1987. Then COD has to wind up to on this episode. But they did not wind up. They proceeded. The question is on records, even as on today, parallel criminal investigation is going on in Raheed case both by the CBI and the COD, Have you heard of it ? ಇವರು ಏನು ಸಹಕಾರ ಕೊಡುತ್ತಿದ್ದಾರೆ? It is a confrontation by the State Government. ಅದನ್ನು ಹೇಳಬೇಕು ಈಗ ನನಗೆ ಕ್ಲೋಸ್ ಮಾಡಿದ್ದೀರಿ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕು ಇವರು ಸಿ. ಬಿ ಐ ಗೆ ಎಂಟ್ರಸ್ಟ್ ಮಾಡಿದರು ಹೌದು. ಇದರ ಬಗ್ಗೆ ತಮ್ಮ ಸಹಕಾರ ಏನು? W.P. No. 16447/87-The Advocates Association has filled a case before the hon. High Court. ಸಿ, ಬಿ. ಐ. ಗೆ ಎಂಟ್ರಸ್ಟ್ ಮಾಡಿರುವುದರಿಂದ ಸಿ.ಒ.ಡಿ, ಎನ್‌ಕ್ವಾಯರಿ ಸ್ಟಾಪ್ ಮಾಡಬೇಕೆಂದು ಅಡ್ವೋಕೇಟ್ ಅಸೋಸಿಯೇಷನ್‌ರವರು ರಿಟ್ ಪಿಟಿಷನ್ ಹಾಕಿದ್ದಾರೆಯೋ? ಇವತ್ತಿನವರೆಗೆ ಅಬ್ಜೆಕ್ಷನ್ ಫೈಲ್ ಮಾಡಿಲ್ಲ. ನೀವು ಮಾಡಿದ್ದರೆ ಸಿ.ಓ. ಡಿ. ಯವರು ಇನ್‌ವೆಸ್ಟಿಗೇಷನ್ ಮಾಡುತ್ತಿರಲಿಲ್ಲ. ಈ ಕೇಸನ್ನು ಸಂಪೂರ್ಣವಾಗಿ ಸಿ. ಬಿ. ಐ. ಗೆ ಪಾಸ್ ಮಾಡಿದ್ದೀರಿ. ನಿಮಗೆ ಸಂಪೂರ್ಣವಾಗಿ ಸಹಕಾರ ಮಾಡುತ್ತೇವೆಂದು ಹೇಳಿ ಇವತ್ತಿನವರೆಗೂ ಸರ್ಕಾರ ಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಅಬ್ಜೆಕ್ಷನ್ ಹಾಕಿಲ್ಲ. ಇದಕ್ಕೆ ಜಸ್ಟಿಫಿಕೇಶನ್ ಇದೆಯೋ ಬೊಮ್ಮಾಯಿಯವರೆ? Do you call it an co-operation by the COD? Further in the case Advocates Association Vs State of Karnataka, it

included the Home Secretary, the Director General of Police and the paraphernalia. Writ Petition No is 16447/87.

ಅಧ್ಯಕ್ಷರು.—ಮಾನ್ಯ ವೀರಪ್ಪ ಮೊಯಿಲಿಯವರೇ ಕಾನೂನು ಮಂತ್ರಿಗಳು ಏನೋ ಹೇಳುತ್ತಾರೆ ಹೇಳಲಿ. ಹೆಲ್ದಿ ಡಿಸ್‌ಕಷನ್ ಆಗಲಿಯೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳುವುದು ಇಷ್ಟೆ ದೆಹಲಿಯ ಸ್ಪೆಷಲ್ ಪೋಲೀಸ್ ಎಸ್ಟಾಬ್ಲೀಶ್‌ಮೆಂಟ್ Act ಪ್ರಕಾರ ರಾಜ್ಯ ಸರ್ಕಾರದವರು ಸಿ. ಬಿ. ಐ. ಗೆ ಇಂತಹ ಪ್ರಕರಣಗಳನ್ನು CBI ನವರು ಇನ್‌ವೆಸ್ಟಿಗೇಷನ್ ಮಾಡಬೇಕೆಂದು ಒಪ್ಪಿಸಿದ ಮೇಲೆ ಕೇಂದ್ರ ಸರ್ಕಾರದವರು ಸಿ.ಬಿ.ಐ. ನವರಿಗೆ ಆದೇಶ ನೀಡಿದ ಮೇಲೆ ಅವರೊಬ್ಬರೇ ತನಿಖೆ ಮಾಡಬೇಕಾಗುತ್ತದೆ. ಪ್ಯಾರಲಲ್ ಇನ್‌ವೆಸ್ಟಿಗೇಷನ್‌ಗೆ ಸಿ. ಬಿ. ಐ ಆಕ್ಟ್‌ನಲ್ಲಿ ಅವಕಾಶವಿಲ್ಲವೆಂದು ಸ್ನೇಹಿತರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಹೇಳಿದರು can you ever imagine that parallel proceedings is going on in respect of the same incident ? He puts that question mark.

ಶ್ರೀ ಎಸ್. ಬಂಗಾರಪ್ಪ.—ನೀವು ಇದನ್ನು ಹೈಕೋರ್ಟ್‌ಗೆ ಹೇಳಬೇಕಾಗಿತ್ತು....

SRI A. LAXMISAGAR.—That is a different matter. If it is an argumant of hon. member Sri Veerappa Moily that parallel investigations are going on or they are under way, not withstandigs the fact that CBI with the consent of the State Government is investigating the alleged murder of Rasheed, If that see then the State Government or COD cannot be in the picture under the provision. They take precedence over other matter. This is my submission.

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನ ಪ್ರಶ್ನೆಗೆ ಮಾನ್ಯ ಕಾನೂನು ಮಂತ್ರಿಗಳು ಉತ್ತರ ಕೊಡುತ್ತಾರೆ, ವಾತಾವರಣ ತಿಳಿಯಾಗುತ್ತದೆಂದು ತಿಳಿದಿದ್ದೆ ಅವರು ಉತ್ತರ ಕೊಡಲಿಲ್ಲ. ಕೋರ್ಟ್‌ಗೆ ತಿಳಿಸಬೇಕಾಗಿತ್ತು, ದೆಹಲಿ ಪೋಲಿಸ್ ಎಸ್ಟಾಬ್ಲೀಶ್‌ಮೆಂಟ್ ಆಕ್ಟ್ ಪ್ರಕಾರ ತಾವು ಆಕ್ಷೇಪಣೆಯನ್ನು ಹಾಕಬೇಕಾಗಿತ್ತು, because it is serious allegation against the government You are sleeping over the matter. Your Advocate General has not done anything. Is it not a very serious matter ? how COD is conducting parallel enquiry? When a serious allegation is made against the government, is it not your duty to submit to the High Court that we have stopped investigation.? ನಾನು ಆಧಾರವಿಲ್ಲದೆ ಹೇಳುವುದಿಲ್ಲ ರಿಟ್ ಪಿಟಿಷನ್‌ನಲ್ಲಿ ಮತ್ತೊಂದು ಕಡೆ ಕ್ಲೋಸ್ ಆಫ್ ಸೆಪ್ಟೆಂಬರ್ ೧೯೮೭ ಅಥವಾ ಅಕ್ಟೋಬರ್‌ನಲ್ಲಿ ಸಿ.ಒ.ಡಿ. ಆಫೀಸರ್ ಪ್ರೆಸಿಡೆಂಟ್, ಅಡ್ವೋಕೇಟ್ಸ್ ಅಸೋಸಿಯೇಷನ್ ಹತ್ತಿರ ಹೋಗಿ the original letter presented to the then President of the Advocates Association, Bangalore was presented in person, filed in person by Rasheed on 15-8-87 ವಿಚಾರ ಮಾಡಿದ್ದಾರೆ Original was in the custody of the Advocates Association. The COD officer wanted the original of that copy. ಮಾನ್ಯ ಸಾಗರ್‌ವರೆ, ತಾವು ಆಮೇಲೆ ಹೇಳಿ, ತಮಗೆ ಅವಕಾಶವಿದೆ ಆಮೇಲೆ ಉತ್ತರ ಕೊಡಿ.

ಅಧ್ಯಕ್ಷರು.—ಅವರು ಉತ್ತರ ಕೊಡುವುದಿಲ್ಲ, ಏನು ಹೇಳುತ್ತಾರೆ ಸ್ವಲ್ಪ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಧದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿರುವುದರಿಂದ....

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಸ್ತಾಪ ಮಾಡಿದರೆ ಏನೂ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ತನಿಖೆಯಾಗತಕ್ಕಂತಹ ಕೇಸಿಗೆ ಸಹಾಯವಾಗುತ್ತದೆಯೋ ಅಥವಾ ಅದಕ್ಕೆ ಅಡ್ಡಿ ಬರುತ್ತದೆಯೋ ತಾವು ಹೇಳಿ.

5-30 P. M.

Is this Legislative Assembly is a perallel investigating agency Is it an agency for investigation ? Are we sitting in judgement ?

SRI M. VEERAPPA MOILY.—It is a question of fact.

SRI A. LAKSHMISAGAR.—Are we trying a murder case here ?

ಶ್ರೀ ಆರ್. ವೆಂಕಟರಾಮಯ್ಯ.—ಈ ಗಲಾಟೆಯಿಂದ ಸಿ. ಬಿ. ಐ. ನವರು ಚಾರ್ಜ್‌ಶೀಟ್ ಅಂತೂ ಹಾಕುವುದಿಲ್ಲ.

SRI A. LAKSHMISAGAR.—Is this House an investigating agency ? Is this House incharge of the trial of a murder case ?

SRI R. VENKATARAMAIAH.—Are we taking up positions of appering for prosecutions and defence councils ? Let us not go to the root of the problem.

(INTERRUPTION)

ಅಧ್ಯಕ್ಷರು.—ಮಾನ್ಯ ಮೊಯಿಲಿಯವರೇ, ಸ್ವಲ್ಪ ಅವರು ಹೇಳಿದ್ದುದನ್ನು ಕೇಳಿ ?

SRI A. LAKSHMISAGAR.—What is the idea in Hon. Member Sri M. Veerappa Moily quoting from so many records ? What is the central purpose ? Let us face the situation What they say is the CBI is doing its best, it is trying to investigate the matter, it is trying to stretch its long arm. It is said that the law has got a long arm and nobody can escape from that long arm. If that is the principle nobody can escape from the crime with which he is charged. If that is so what is the idea in quoting from so many records (may be from certified copies of the petition) I don't question. What is the purpose I want to ask him. How does it help a proper, effective, legal, constitutional and fair investigation into the case of alleged murder of Rasheed ? What are they trying to do ? I should ask.

SRI S. BANGARAPPA.—You are trying to show what kind of investigation you are having.

(INTERRUPTION)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದಂ ಸರಿಯಲ್ಲ.

ಅಧ್ಯಕ್ಷರು.—ಶ್ರೀ ಮೊಯಿಲಿಯವರೇ ತಾವು ಎಕ್ಸ್‌ಪರ್ಟ್ ಲಾಯರ್ ಇದ್ದೀರಿ, ನನಗೆ ಗೊತ್ತಿದೆ.

MR. SPEAKER.—Court is there to look into all these things.

SRI M. RAGHUPATHY.—Is it a court ? Can you convert th Legislature into a court ? ಪರ ವಿರೋಧ ಆರ್ಗ್ಯೂ ಮಾಡುವುದಕ್ಕೆ ಇದೇನು ಕೋರ್ಟೇ? ಇದರಲ್ಲಿ ಏನಾದರೂ ಅರ್ಥ ಇದೆಯೇ ?

MR. SPEAKER.—Please don't damage the case.

ಶ್ರೀ ಎಂ. ರಘುಪತಿ.—ಸಿ. ಬಿ. ಐ. ಪರವಾಗಿ ಹೋಗಿ ವಕಾಲತ್ತು ಮಾಡಿ, ಬೇಡವೆಂದು ಹೇಳುವುದಿಲ್ಲ, You don't convert the Legislature into a court,

(INTERRUPTION)

ಅಧ್ಯಕ್ಷರು.—ಶ್ರೀ ಮೊಯಿಲಿಯವರೇ ಮುಕ್ತಾಯ ಮಾಡಿರಿ, ಅರ್ಧಗಂಟೆ ಮೇಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮೊಯಿಲಿಯವರೇ ತಾವು ಬಹಳ ಮುಂದೆ ಹೋಗುತ್ತಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ.—ಹಾಗಾದರೆ ಸಿ. ಓ. ಡಿ. ಎನ್‌ಕ್ವೈರಿ ಇರಬಹುದೇ ?

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ ನಾವು ಜಡ್ಜ್ ಅಲ್ಲ, ಅವರು ಅಡ್ವೋಕೇಟ್ ಜನರಲ್ ಅಲ್ಲ, ಇವರು ಡಿಫೆನ್ಸ್ ಕೌನ್ಸಿಲ್ ಅಲ್ಲ. ಸಿ. ಬಿ. ಐ. ನವರು ಏನು ಮಾಡುತ್ತಾರೋ ಗೊತ್ತಿಲ್ಲ. ಇದನ್ನು ಪ್ರೋಬ್ ಮಾಡುವುದು ಬೇಡ.

ಶ್ರೀ ಎಂ. ವೀರಪ್ಪಮೊಯಿಲಿ.—ಹಾಗಾದರೆ ಸಿ. ಓ. ಡಿ. ಎನ್‌ಕ್ವೈರಿ ನಡೆಯಲೇನು ?

ಶ್ರೀ ಆರ್. ವೆಂಕಟರಾಮಯ್ಯ.—ನಡೆಯಲಿ ಎಂದು ನಾನು ಹೇಳುವುದಿಲ್ಲ......

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಯಮ ೬೮ ರಲ್ಲಿ ರೈಸ್ ಮಾಡುವವರು ನಾವು. ಮಾತ ನಾಡುವವರು ಅವರು. ಅವರ ಎಲ್ಲಾ ಪಾಂಡಿತ್ಯವನ್ನು ರಿಸರ್ವ್ ಮಾಡಿ ಇಡಲಿ.

ಅಧ್ಯಕ್ಷರು.—ಶ್ರೀ ಮೊಯಿಲಿಯವರೇ, ನಿಮ್ಮ ಪಾಂಡಿತ್ಯ ನನಗೆ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಾವು ಮಾತನಾಡಿದರೆ ಸರ್ಕಾರಕ್ಕೆ ತೊಂದರೆ ಇರಬಹುದು, ಅನಾನುಕೂಲ ಇರಬಹುದು. ಅದಕ್ಕೆ ನಾನು ಏನು ಮಾಡಲಿ ?

SRI A. LAKSHMISAGAR.—Sir, the contention appears to be that there is a parellel investigation going on. The COD enquiry which started prior to the CBI coming into the area of investigation of the alleged murder of Sri Rasheed both of them are still going on. This is not correct, both factually and also according to law. I will quote a short section from the Delhi Police Establishment Act, which says thus,

(ಗೊಂದಲ)

"The S. P. of Delhi Special Police Establishment Act shall...

(INTERRUPTION)

SRI N. M. ADYANTHAYA.-We all know about that particular Act.

(ಗೊಂದಲ)

ಅಧ್ಯಕ್ಷರು.—ನಿಮ್ಮನ್ನು ನೋಡಿ ಅವರೂ ಎದ್ದು ನಿಲ್ಲುತ್ತಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಲ್ಪ ರಿಸರ್ವ್‌ನಲ್ಲಿ ಇಡಿ.

ಅಧ್ಯಕ್ಷರು.—ಮಾನ್ಯ ವೀರಪ್ಪಮೊಯಿಲಿಯವರೇ ತಾವು ಹೇಳಿ. ಆದಷ್ಟುಬೇಗ ಮುಗಿಸಿ..

ಶ್ರೀ ವೀರಪ್ಪ ಮೊಯಿಲಿ.— ಕಾನೂನು ಸಚಿವರು ಹೇಳಿದ್ದನ್ನು ನಾನು ತತ್ವಶಃ ನೂರಕ್ಕೆ ನೂರು ಪಾಲು ಒಪ್ಪುತ್ತೇನೆ. ಹಾಗಾದರೆ ಸಿ. ಓ. ಡಿ. ಎನ್‌ಕ್ವೈರಿ ಏಕೆ ಮುಂದುವರಿಸುವುದಕ್ಕೆ ಬಿಟ್ಟಿದ್ದೀರಿ. Supposing the COD Officer has gone to the bar association and demanded the original of it even after it is entrusted to the CBI: what was the necessity. For having violated the Delhi Police Act you will have to keep him under suspension.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಬೊಮ್ಮಾಯಿಯವರು ಏಕೆ ಪದೇ ಪದೇ ಮಧ್ಯದಲ್ಲಿ ಎದ್ದು ನಿಲ್ಲಬೇಕು.

(ಗೊಂದಲ)

SRI M. VEERAPPA MOILY.—I am on my legs.

SRI S. R. BOMMAI.—On a point of order.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಎಷ್ಟುಸಾರಿ ಡಿಸ್ಟರ್ಬ್ ಮಾಡಿದ್ದಾರೆ, ಅಲ್ಲಿ ರೆಕಾರ್ಡ್ಸ್ ತೆಗೆಸಿ ನೋಡಿ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಸತ್ಯ ಹೊರಕ್ಕೆ ಬರುವುದಕ್ಕೆ ಅಬ್ಸ್ಟ್ರಕ್ಷನ್ ಮಾಡುತ್ತಿದ್ದಾರೆ.

(ಗೊಂದಲ)

SRI S. R. BOMMAI.—I rise to a point of order. I am trying to help Mr. Moily.

(INTERRUPTION)

ಅಧ್ಯಕ್ಷರು.—ಈಗ ಬೊಮ್ಮಾಯಿಯವರ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಬೇರೆ ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ Nothing will go on record. Nothing will go on record.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅನುಭವ ಇರತಕ್ಕಂಥ ಶಾಸಕರಾದ ಮೊಯಿಲಿಯವರು ಎದ್ದು ನಿಂತು ಮಾತನಾಡಬೇಕಾದರೆ ಒಂದೆರಡು ಸಲ ಕ್ಲಾರಿಫಿಕೇಷನ್ ಕೇಳಲಿ ಆದರೆ ಹೆಜ್ಜೆ ಹೆಜ್ಜೆಗೆ ತಡೆ ಮಾಡಿದರೆ ಆ ಚರ್ಚೆಗೆ ಗಂಭೀರತೆ ಬರುತ್ತದೆಯೇ...

(ಗೊಂದಲ)

ಅಧ್ಯಕ್ಷರು.—ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ ಅವರು ಹೇಳಲಿ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ತಾವು ಇವತ್ತು ಉಮರಬ್ಬ ಅವರನ್ನು ನಾಮಕರಣ ಮಾಡಬೇಕಾಗಿದೆ.

ಅಧ್ಯಕ್ಷರು.—ನೋಡಿ ಈಗ ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ನೀಲಕಂಠಪ್ಪನವರೇ ಕುಳಿತುಕೊಳ್ಳಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿರಿ.

ಶ್ರೀ ಆರ್. ವೆಂಕಟರಾಮಯ್ಯ.—ಪಾಯಿಂಟ್ ಆಫ್ ಆರ್ಡರ್. I am on a point of order.

ಅಧ್ಯಕ್ಷರು.—ಇಷ್ಟು ಹೊತ್ತಿಗೆ ಅವರ ಪಾಯಿಂಟ್ ಆಫ್ ಆರ್ಡರ್ ಮುಗಿದು ಹೋಗುತ್ತಿತ್ತು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಉಮರಬ್ಬ ಅವರು ನಮ್ಮ ಕಡೆ ಕೈಗಳನ್ನು ತೋರಿಸಿ ಪದೇ ಪದೇ ಹೀಗೆ ಮಾಡುವುದನ್ನು ನೀವು ಗಮನಿಸಬೇಕು. ತಾವು ಸುಮ್ಮನೆ ಕುಳಿತಿದ್ದೀರಿ. ಇದನ್ನು ದಯವಿಟ್ಟು ನೋಡಿ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಉಮರಬ್ಬ ಅವರು ಪ್ರಚೋದನೆ ಮಾಡುತ್ತಿದ್ದಾರೆ.

(ಗೊಂದಲ)

SRI S. R. BOMMAI.— I am raising a point of order. ಸಿ.ಬಿ.ಐ. ನವರು ಸಿ.ಓ.ಡಿ. ಯಿಂದ ಇನ್‌ವೆಸ್ಟಿಗೇಷನ್‌ಗೆ ತೆಗೆದುಕೊಂಡಿದ್ದುದು ೭-೧೦-೧೯೮೭ ರಂದು. ಆಮೇಲೆ ತಾವು ಅಡ್ವೊಕೇಟ್ಸ್ ಅಸೋಷಿಯೇಷನ್‌ಗೆ ಬರೆದಂತಹ ಪತ್ರದ ವಿಚಾರದಲ್ಲಿ ಸರಿಯಾಗಿ ತಿಳಿಸಬೇಕು. ಸಿ.ಓ.ಡಿ.ಯವರು ಕೋರ್ಟಿಗೆ, ಆ ಅರ್ಜಿಯನ್ನು ಹಾಜರು ಪಡಿಸಿದ್ದಾರೆ. ಆದರೆ ನೀವು ಈ ಮನೆಯನ್ನು ಮಿಸ್‌ಲೀಡ್ ಮಾಡುತ್ತಿದ್ದೀರಿ. ಆಮೇಲೆ The date is important. ಅದನ್ನು ತಾವು ಸರಿಯಾಗಿ ಹೇಳಬೇಕು. Every stage, they have co-operated and CBI has not complained. The date is more important here. ಸಿ.ಓ.ಡಿ.ಯವರು ಏನೇನು ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದಿರಿ, ಅದು ಸರಿಯಲ್ಲ. ಅವರು ಸಹಕಾರ ಮಾಡಿದ್ದಾರೆ. Let us not misled the House. Let us not confuse. Let us help fair investigation.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಾಗ ಈ ತರಹ ಇಂಟರ್‌ಫಿಯರೆನ್ಸ್ ಇದ್ದರೆ ಹೇಗೆ ? ತಾವೇ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಇದನ್ನು ತಪ್ಪಿಸಿ ಎಂದು ನಾನು ವಿನಂತಿ ಮಾಡುತ್ತೇನೆ. The CBI have registered the case. It was reported to them and they registered from COD on 25-9-1987 under RC 2/87 SIO 1. This is the reference. After register, they are seized of the case. That is No. 1.

No. 2 is, they have entrusted it to CBI. What right the COD has got to investigate, collect evidence ? Is it to destroy it ? Is it to fabricate it ? Is it to screen it ? Is it to make disappear ? Immediately when the Hon'ble Chief Minister announced the CBI enquiry, the duty of the local Police, the duty of the COD is to cease it investigation. That means they must have collected so many other evidences which they have not handed over, ಅವರ ಕೈಗಳನ್ನು ತೆಗೆಯಬೇಕಿತ್ತು ಅಲ್ಲಿಂದ. ಇದನ್ನು ನೀವು ಜಸ್ಟಿಫೈ ಮಾಡುತ್ತೀರಾ ? They must have screened it. They must have destroyed it or they must have removed it. We don't know. ಇದರಿಂದ ಸಂಶಯಕ್ಕೆ ಆಸ್ಪದವಾಗುತ್ತದೆ. ಸಿ.ಓ.ಡಿ.

ಯಿಂದ ಇದನ್ನು ಸಿ.ಬಿ.ಐ.ಗೆ ವರ್ಗಾವಣೆ ಮಾಡಿದ ಮೇಲೆ ಅವರದ್ದು ಅಲ್ಲಿ ಏನು ಕೆಲಸ ? ಈ ರೀತಿ ಮನಸ್ಸಿಗೆ ಬಂದಂತೆ ಮಾಡುತ್ತಾ ಹೋದರೆ ಜಡ್ಜಸ್ ವಿಚಾರಣೆ ಮಾಡುವುದಕ್ಕೆ ಬರುತ್ತದೆಯೇ ? Even the police Officer, once he is transferred, investigation is immediately slowdown ಅವರೂ ಸಹ ಮಾಡುವುದಕ್ಕಾಗುವುದಿಲ್ಲ. He will close down because it will be prejudiced.

(INTERRUPTION)

SRI M. MALLIKARJUNA KHARGE.—He is misleding the House.

SRI S. R. BOMMAI.—You are misleding the House. I never expected this from him.

(INTERRUPTION)

SRI M. MALLIKARJUNA KHARGE.—Have you permitted argument and counter-argument ?

SRI S. R. BOMMAI.—When he is misleding the House.

SRI M. VEERAPPA MOILY.—ಈಗ ಮಾನ್ಯ ಬೊಮ್ಮಾಯಿಯವರ ವಾದವನ್ನು ಒಪ್ಪಿಕೊಂಡರೂ ಕೂಡ ೭-೧೦-೧೯೮೭ ರಲ್ಲಿ ಸಿ.ಓ.ಡಿ.ಯವರು ಎನ್‌ಕ್ವೈರಿ ಮಾಡುತ್ತಿದ್ದರೆಂದು ಅರ್ಥವೇ ? According to him, it is handed over to CBI on 7-10-1987 You are damaging your own statement...

(INTERRUPTION)

SRI S. R. BOMMAI.—Let me make my statement very clear...

SRI M. VEERAPPA MOILY.—I am on my legs. I have not yielded.

ಅಧ್ಯಕ್ಷರು.—ತಾವು ಬೇಗ ಮುಗಿಸಿ.

ಶ್ರೀ ಎಂ. ವೀರಪ್ಪಮೊಯಿಲಿ.—ಏಕೆ ಅವಸರ ಮಾಡುತ್ತೀರಿ ? ನಾನು ಏನಾದರೂ ತಪ್ಪು ಹೇಳಿದನೇನು ? ಸುಮ್ಮನೆ ದಯಮಾಡಿ ಹೀಗೆ ಮಾಡಬೇಡಿ.

ಅಧ್ಯಕ್ಷರು.—ತಾವು ಬೇಗ ಮುಗಿಸಿ.

ಶ್ರೀ ಎಂ. ವೀರಪ್ಪಮೊಯಿಲಿ.—ಇದರ ಅರ್ಥ ಏನು ? ಸಿ. ಓ. ಡಿ. ಎನ್‌ಕ್ವೈರಿ ಆಗುತ್ತಿದ್ದಾಗ ಆಕ್ಷೇಪಣ ಅರ್ಜಿಯನ್ನು ಏಕೆ ಹಾಕಲಿಲ್ಲ? In the absence of that what should we construe ? ಅಧ್ಯಕ್ಷರೇ, ಬಾರ್ ಕೌನ್ಸಿಲ್‌ನವರು ಒರಿಜನಲ್ ಡಾಕ್ಯುಮೆಂಟ್‌ನ್ನು ಕೊಡಲಿಕ್ಕಾಗುವುದಿಲ್ಲವೆಂದು ಹೇಳಿ ಬರವಣಿಗೆಯಲ್ಲೇ ಕೊಟ್ಟಿದ್ದಾರೆ. They have said that "We cannot give the original document" That endorsement is with them. It is an evidence.

ಅಧ್ಯಕ್ಷರು.—ಆಯಿತು. ಒಂದು ತಾಸು ಅವಕಾಶ ಕೊಡಬೇಕೆಂದು ಇದೆ. ಈಗಾಗಲೇ ಎರಡು ತಾಸು ಆಯಿತು.

ಶ್ರೀ ಎಂ. ವೀರಪ್ಪಮೊಯಿಲಿ.—ಇನ್ನೂ ಇದೆ ಅಧ್ಯಕ್ಷರೇ.

ಅಧ್ಯಕ್ಷರು.—ಟೈಮ್ ಲಿಮಿಟ್ ಕೊಡುವುದಕ್ಕೆ ನನಗೆ ಅಧಿಕಾರ ಇದೆ. ಇನ್ನು ಹೆಚ್ಚಿಗೆ ಟೈಮ್ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಈ ಬ್ಯಾಕ್ ಗ್ರೌಂಡ್‌ನಲ್ಲಿ ಸಿ. ಬಿ. ಐ. ನವರು ಎನ್‌ಕ್ವೈರಿಯನ್ನು ಡಿಲೇ ಮಾಡಿದ್ದರು ಎಂದು ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಅದು ತಮಗೂ ಗೊತ್ತಿದೆ.

ಸೆಕ್ಷನ್ ೧೫೭ ಸಿ.ಆರ್.ಪಿ.ಸಿ. ಪ್ರಕಾರ This provision is important even from academic point of view. ಅಧ್ಯಕ್ಷರೇ ಒಬ್ಬ ಕಂಪ್ಲೇಂಟ್ ಕೊಟ್ಟರೆ ಪೋಲೀಸಿನವರು ಕೂಡಲೇ ಕೇಸ್ ರಿಜಿಸ್ಟರ್ ಮಾಡಿಕೊಂಡು ನಿರಪರಾಧಿಯನ್ನು ಅರೆಸ್ಟ್ ಮಾಡುವುದಕ್ಕೆ ಹೋಗುತ್ತಾರೆ. ಆದರೆ, preliminary enquiry will have to be held even as per Section 157 Cr. P. C. ಸೆಕ್ಷನ್ ೧೫೭ ಸಿ.ಆರ್.ಪಿ.ಸಿ. ಯನ್ನು ಪೋಲೀಸಿನವರು ಪಾಲಿಸುತ್ತಿಲ್ಲ. ಮತ್ತೊಂದು ಕಡೆ ಮಂಜುನಾಥ್‌ರಿಗೆ ತಿಂಗಳಾದರೂ ಸಿ. ಒ. ಡಿ. ಯವರು ಮುಂದುವರಿದು ಯಾರನ್ನೂ ಅರೆಸ್ಟ್ ಮಾಡಲಿಲ್ಲ. ಎವಿಡೆನ್ಸ್ ಹುಡುಕುವುದಕ್ಕೆ ಕಷ್ಟ ಇತ್ತು ನಿಜ. ಹೋಟೆಲ್‌ನಲ್ಲಿ ಫ್ಯಾನ್ ಆಗಿ ವಾಚ್‌ಮನ್ ಆಗಿದ್ದವರು ಇನ್ನೂರು ಮುನ್ನೂರು ಕಿಲೋಮೀಟರ್ ದೂರ ಇರುವ ತಮಿಳುನಾಡಿಗೆ ಓಡಿ ಹೋದರೆ We have to trace them and bring them back. That is why I have said that C.B.I. has done a commendable job. In spite of non-cooperation and in spite of an effort not to allow the C. B. I. to investigate, the C. B. I. has made honest efforts as a rightful legal investigating agency fully exercising legal right under Section 157 of Cr. P. C.

ಅಧ್ಯಕ್ಷರು.—ಮಾನ್ಯ ವೀರಪ್ಪನವರೇ ತಾವು ಬೇಗ ಮುಗಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ ಇದರಲ್ಲಿ ಮತ್ತೊಂದು ಏನಾಗಿದೆ ಎಂದರೆ ಎಫ್. ಐ. ಆರ್. ನಲ್ಲಿ ಜಾಲಪ್ಪನವರ ಮತ್ತು ಪೋಲೀಸ್ ಆಫೀಸರ್ ಹೆಸರು ಹಾಕಿಲ್ಲವೆಂದು ಹೇಳಿ ರುವುದು ತಿಳಿದು ಬಂದಿದೆ. ಅಧ್ಯಕ್ಷರೇ ತಮಗೂ ಗೊತ್ತಿದೆ. We may refer 1977 Criminal Law Journal, Page 123. Basic law has been distorted. Sir, by the persons in high authority. We should not distort. ಇದರಿಂದ ಜನಗಳಿಗೆ ಇದರ ಬಗ್ಗೆ ಸಂಶಯ ಬಂದುಬಿಟ್ಟಿದೆ. ಸನ್ಮಾನ್ಯ ಮುಖ್ಯ ಮಂತ್ರಿಯವರೂ ಲಾಯರ್ ಆಗಿದ್ದವರು, ಕಾನೂನು ಕಲಿತವರು. F. I. R. is not an encyclopaidia, according to the Supreme Court ruling. ಎಫ್.ಐ.ಆರ್. ನಲ್ಲಿ ಹೆಸರು ಇಲ್ಲದವರನ್ನು ಮೊಕದ್ದಮೆಯಲ್ಲಿ ಸೇರಿಸಬಾರದೆಂದು ಹೇಳುವ ವಾದ ಸರಿಯಲ್ಲ. ಇದು ಎಷ್ಟಕ್ಕೂ ಸರಿಯಲ್ಲ. ಅಧ್ಯಕ್ಷರೇ, ಈ ಪ್ರಸಂಗದಲ್ಲಿ ಏನಾಗಿದೆ ಎಂದರೆ ಸ್ವಲ್ಪ ಪ್ರಾದೇಶಿಕ ಭಾವನೆಗಳನ್ನೂ ಕೂಡ ನಮ್ಮ ಮುಖ್ಯ ಮಂತ್ರಿಗಳು ಕೆರಳಿಸಿದ್ದಾರೆ.

ಅಧ್ಯಕ್ಷರು.—ಈಗಾಗಲೇ ಅವರು ಹೇಳಿದ್ದಾರೆ. ನೀವು ಇಲ್ಲಿಗೆ ಮುಗಿಸಿರಿ......

ಶ್ರೀ ಎಂ. ವೀರಪ್ಪ ಮೊಯಿಲಿ.—ಕೇರಳೈಟ್ಸ್ ಆಫೀಸರ್‌ನ್ನು ತಂದಿದ್ದಾರೆ ಎಂದು ಹೇಳಿದ್ದಾರೆ. It has gone on record. So, ಬಹುಶಃ ಮುಖ್ಯಮಂತ್ರಿಗಳು ಇದಕ್ಕೆ ಒಂದು ಕ್ಲಾರಿಫಿಕೇಶನ್ ಕೊಡುವುದು ಒಳ್ಳೆಯದು. You have created a regional grudge in the police department. ಸಾರ್ವಜನಿಕ ಜೀವನದಲ್ಲಿ ಇರತಕ್ಕಂಥಹವರು ರಾಷ್ಟ್ರೀಯ ಭಾವನೆಯನ್ನು ಹೆಚ್ಚಿಸಲು ಪ್ರಯತ್ನ ಮಾಡಬೇಕೆ ಹೊರತು ಈ ರೀತಿಯಾಗಿ ಮಾತನಾಡಬಾರದು. ಈ ಸಿ.ಬಿ.ಐ. ಯಲ್ಲಿ ಬಾಲಾಜಿ ಎಂದು ಹೇಳಿ ಒಬ್ಬ ಆಫೀಸರ್ ಇದ್ದರು. He went on leave because of typhoid. ಆ ಮೇಲೆ ರಾಜಗೋಪಾಲ್ ಎನ್ನುವವರು ಬಂದರು. ಅವರೂ ಕೂಡ ತಮಿಳಿಯನ್. He was put in charge. Then very same S.P. who is Mr. Balaji C.B.I. Officer he came back from leave and he has again taken over charge. Now he is in charge. ಯಾರು ಮೊದಲಿದ್ದರೋ ಅವರೇ ಇದ್ದಾರೆ. There is a C.B.I. SP Mr. Shivakumar, he belong to Kerala but he is a Karnataka cadre officer. ಇವರೆಲ್ಲರೂ ಕರ್ನಾಟಕ ಕೇಡರ್ ಆಫೀಸರ್ಸ್. ಹೀಗಿರುವಾಗ ಕೇರಳೈಟ್ಸ್‌ನ್ನು ಹಾಕಿ ಬಿಟ್ಟಿದ್ದಾರೆ ಎಂದು ಹೇಳಿದರೆ ಹೇಗೆ ? ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಕರೆಕ್ಟ್ ಮಾಡಬೇಕು. ಇದನ್ನೆಲ್ಲಾ ಕೇಳಿ ಸಾರ್ವಜನಿಕರು ನುಂಗಿಕೊಂಡು ಕಂಳಿತುಕೊಳ್ಳುತ್ತಾರೆ ಎಂಬ ಭಾವನೆ ಯನ್ನು ನೀವು ತಾಳಿದ್ದರೆ, ಅದರಿಂದ ಬಹಳ ಅನಾಹುತವಾಗುತ್ತದೆ. You have to correct the position.' Otherwise, it gives an impression that you are pointing your accusing finger against your own Karnataka Cadre officer.

That prejudice should not be there. ಇಂಥ ಪ್ರಾಮುಖ್ಯವಾದಂಥ ವಿಚಾರಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಸಾರ್ವಜನಿಕರಿಗೆ ಸರಿಯಾದಂಥ ತಮ್ಮ ಒಂದು ಅನುಭವವನ್ನು ಕೊಡಬೇಕಾಗುತ್ತದೆ.

ಶ್ರೀ ಡಿ ಟಿ. ಜಯಕುಮಾರ್.—ಸಾರ್ವಜನಿಕರಿಗೆ ಇದು ಬೇಕಾಗಿಲ್ಲ, ನಿಮಗೆ ಬೇಕಾಗಿದೆ......

SRI M. VEERAPPA MOILY.—Then you have stated about witnesses. ಕಾಲಿಂಗ್ ವಿಟ್‌ನೆಸಸ್‌ಗೆ ಪಿಂಪ್ಸ್ ಬಂದಿದ್ದಾರೆ ಎಂದು ಹೇಳುತ್ತಾರೆ.

ಅಧ್ಯಕ್ಷರು.—ದಯವಿಟ್ಟು ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಜನಸಾಮಾನ್ಯರಿಗೂ ಕೂಡ ಈಗ ಕಾನೂನು ಗೊತ್ತಿದೆ. ವಿಟ್‌ನೆಸಸ್‌ಗೆ ಪಿಂಪ್ಸ್ ಎಂದು ಹೇಳತಕ್ಕಂಥಾದ್ದು, ಮತ್ತೊಂದು ಹೇಳತಕ್ಕಂತಾದ್ದು ಸರಿಯಲ್ಲ. ತಮಗೆ ಗೊತ್ತಿದೆ, ೧೯೮೩ ಎ. ಐ. ಆರ್. ನಲ್ಲಿ, ಸುಪ್ರೀಮ್ ಕೋರ್ಟ್‌ನಲ್ಲಿ ವಿಟ್‌ನೆಸಸ್ ಹೇಗಿರಬೇಕೆಂದು ಅವರು ಹೇಳಿದ್ದುದನ್ನು ಸ್ವಲ್ಪ ನೆನಪು ಮಾಡಿಕೊಡುತ್ತೇನೆ. It is against the spirit of the Criminal Procedure Code and Evidence Act and even it is contrary to the verdict of the Supreme Court. If a murder is committed in a brothel then pimps will be the natural witnesses. If the murder is committed in a street then the passers-by will be the natural witnesses. ಪಾಪ ಅವರಿಗೆ ಸ್ವಲ್ಪ ಕಲಿಸಿ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಬೇಸಿಕ್ ಲಾ ಮರೆತು ಬಿಟ್ಟಿದ್ದಾರೆ. ಅವರಿಗೆ ಲೇಟೆಸ್ಟ್ ಲಾ ವಿಚಾರಗಳು ಗೊತ್ತಿಲ್ಲ ಎಂದು ಕಾಣುತ್ತದೆ ಆದುದರಿಂದ ಸ್ವಲ್ಪ ನೆನಪು ಮಾಡಿಕೊಡಬೇಕಾಗಿದೆ.

ಅಧ್ಯಕ್ಷರು.—ಈಗ ಏನಾಗಬೇಕೆಂದು ಹೇಳಿ, ತಾವು ಕನ್‌ಕ್ಲೂಡ್ ಮಾಡಿ......

ಶ್ರೀ ಎಂ. ವೀರಪ್ಪಮೊಯಿಲಿ.—ಈ ವಿಚಾರದಲ್ಲಿ ನಮ್ಮ ನಾಯಕಿಯವರೂ ಕೂಡ ಹೇಳಿದ್ದಾರೆ. ಸಿ.ಬಿ.ಐ ಗೆ ಎನ್‌ಟ್ರಸ್ಟ್ ಮಾಡಿದ ಕೂಡಲೇ ಒಬ್ಬ ಉನ್ನತ ಅಧಿಕಾರಿ ಗೃಹ ಇಲಾಖೆಯಲ್ಲಿರುವವರು ಏನೋ ಹೇಳಿದ್ದಾರೆ ಎಂದು ಈ ಸದನದಲ್ಲಿ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಹೀಗೆ ಒಬ್ಬರ ಮೇಲೆ ಗೂಬೆ ಕೂಡಿಸಬಾರದು. ಅದು ಯಾವಾಗಲೂ ನಡೆಯುವುದಿಲ್ಲ. ಅದನ್ನು ನಿಲ್ಲಿಸಿದರೆ ತಮಗೇ ಒಳ್ಳೆಯದು. ತಮಗೆ ಅದೊಂದು ಚಟ ಆಗಿದೆ ಎಂದು ಕಾಣುತ್ತದೆ. ಒಂದು ವೇಳೆ ತಾವು ನಿರ್ದಿಷ್ಟವಾಗಿ ಆ ಅಧಿಕಾರಿಯ ಹೆಸರನ್ನು ಹೇಳುವುದು ಒಳ್ಳೆಯದು. You must name that officer here if you have any guts otherwise you should either withdraw your words or apologise for having uttered the name.

೫–೩೦ ಪಿ. ಎಂ.

ಇಲ್ಲದಿದ್ದರೆ ತಾವು ಜವಾಬ್ದಾರಿಯುತ ಮುಖ್ಯ ಮಂತ್ರಿ ಸ್ಥಾನದಿಂದ ಈ ಮಾತನ್ನು ಹೇಳಲಿಲ್ಲ' ಒಂದು ಹತಾಶ ಭಾವನೆಯಿಂದ ಈ ಮಾತನ್ನು ಹೇಳಿದ್ದೀರಿ, ಎಂಬ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ಕೇರಳದಲ್ಲಿ ರಾಜನ್ ಪ್ರಕರಣ ನಡೆಯಿತು. It is more relevant here. Rajan's father filed Habeas corpus petition in the Kerala High Court. Mr. Karunakaran was the Home Minister at that time. Police Officers were the respondents. Mr. Karunakaran, the respondent filed an affidavit before the High Court saying that Rajan is not in the Police custody. As he was the Home Minister and the respondent, he had to file an affidavit. The rest of the officers also filed an affidavit before the High Court of Kerala. In the meanwhile, Karunakaran became the Chief Minister.

SRI M. RAGHUPATHY.— I am on a Point of Order.

(Interruption)

SRI M. VEERAPPA MOILY.—It is a case decided and reported in the A.I.R.

(*Interruption*)

MR. SPEAKER.—I will quote the rule. "The Speaker may if he thinks fit, prescribe a time limit". Please conclude.

ಶ್ರೀ ಎಂ. ವೀರಪ್ಪ ಮೊಯಿಲಿ.—ಧನ್ಯವಾದಗಳು. ಹೈಕೋರ್ಟ್ ನ್ಯಾಯಾಧೀಶರು, ಹೇಬಿಯಸ್ ಕಾರ್ಪಸ್ ಅರ್ಜಿಯ ಮೇಲೆ, ರಾಜನ್ ಪೋಲೀಸ್ ಕಸ್ಟಡಿಯಲ್ಲಿ ಇದ್ದಾನೆಯೆಂದು. ಪ್ರೈಮಾಫೇಸಿ ಆಗಿ ಕಂಡುಬರುತ್ತದೆ. ಎಂದು ತೀರ್ಪು ಕೊಟ್ಟಮೇಲೆ He also said " file Charge-sheets against all the respondents except Mr. Karunakaran".

SRI RAMAKRISHNA HEGDE.—Including Karunakaran. I have gon the copy of the judgment.

SRI M. VEERAPPA MOILY.—Excluding Karunakarn. Take the judgment. I think you are referring to some other case.

SRI RAMAKRISANA HEGDE.—To what extent he utters lie I cannot understand.

SRI M. VEERAPPA MOILY.—I don't know how are uttering ? ಆ ತೀರ್ಪಿನ ನಂತರ ಒಂದು ನೈತಿಕ ಜವಾಬ್ದಾರಿಯ ಮೇಲೆ, ಅವರ ರಾಜೀನಾಮೆ ಕೊಟ್ಟರು. ಇಲ್ಲಿ ಏನಾಗಿದೆ ಎಂದರೆ ಮುಖ್ಯ ಮಂತ್ರಿಗಳು, ಪೋಲೀಸ್ ಇನ್‌ವಾಲ್ವ್‌ಮೆಂಟ್ ಇಲ್ಲವೆಂದು ಹೇಳಿದ್ದಾರೆ. ಜಾಲಪ್ಪನವರ, ಇನ್‌ವಾಲ್‌ಮೆಂಟ್ ಇಲ್ಲವೆಂದು ಹೇಳಿದ್ದಾರೆ. C. B. I. has stated in the Court that he has engineered the murder. What does it mean ? Today he has to take the moral responsibility.

SRI ABDUL NAZIR SAB.—So, we have to belive whatever C. B. I. says. You can believe. We don't believe.

(*Interruption*)

ಅಧ್ಯಕ್ಷರು.—ತಾವು ಈಗಾಗಲೇ ಒಂದು ಗಂಟೆ ಮಾತನಾಡಿದ್ದೀರಿ. ದಯವಿಟ್ಟು ಬೇಗ ಮುಗಿಸಿ.

ಶ್ರೀ ಎಂ. ವೀರಪ್ಪಮೊಯಿಲಿ.—ರಷೀದ್ ಮರಣದ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿ, ಅದು ರಷೀದ್ ಶವ ಅಲ್ಲ ಎಂಬ ಭಾವನೆಯನ್ನು ಕೊಟ್ಟು ಈ ಸದನವನ್ನು ಮಿಸ್‌ಲೀಡ್ ಮಾಡಿದ್ದಾರೆ. This is nothing short of shielding the offender.

(*Interruption*)

SRI A. LAKSHMI SAGAR.—Is he passing the Judgment I would like to ask him, how does he know that ?

(*Interruption*)

SRI A. LAKSHMI SAGAR.—How does he say ?

(*Interruption*)

MR. SPEAKER.—Please conclude.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಕನ್‌ಕ್ಲೂಡ್ ಮಾಡುತ್ತೇನೆ. ಇಷ್ಟು ಪರಿಣಾಮ ಕಾರಿಯಾದ ಕೇಸ್‌ನ ವಿಷಯದಲ್ಲಿ ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಅಪಾದನೆಗಳಿಗೆ, ಅಪರಾಧಿಗಳಿಗೆ ರಕ್ಷಣೆಯನ್ನು ಕೊಡತಕ್ಕಂತಹ ಕೆಲಸ ಮಾಡಿದರೆ ಹೇಗೆ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅಪರಾಧಿಗಳು ಯಾರು ಅವರು ಎಲ್ಲಿ ಇದ್ದಾರೆ ? ಇನ್ನೂ ಚಾರ್ಜ್‌ಷೀಟ್ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಚಾರ್ಜ್‌ಷೀಟ್ ಬಂದ ಮೇಲೆ ಅಪರಾಧಿಗಳು ಯಾರು ಎಂದು ಗೊತ್ತಾಗುತ್ತದೆ. ಇವರು ಯಾರು ಈಗ ಅದನ್ನು ಹೇಳುವುದಕ್ಕೆ ?

(ಗೊಂದಲ)

SRI M. VEERAPPA MOILY.—You are shielding. Even now you are shielding them.

(*Interruption*)

SRI M. VEERAPPA MOILY.—In view of the equitable moral responsibility, in the circumatsnces of the case, the Chief Minister has forfeited his right to continue the office of the Chief Minister. He must resign.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇವರಿಗೆ ಡಿಸ್ಟರ್ಬ್ ಮಾಡಬಾರದೆಂದು ನಾನು ಹೇಳಲಿಲ್ಲ. ಒಂದು ಕ್ಲಾರಿಫಿಕೇಷನ್ ಅನ್ನು ಕೊಡುತ್ತೇನೆ. The Notification was issued on 8-9-1987.

(*Interruption*)

SRI S. R. BOMMAI.—I have got every right to participate in the Debate.

(ಗೊಂದಲ)

ಅಧ್ಯಕ್ಷರು.—ಆ ಕಡೆ ಒಬ್ಬರನ್ನು ಈ ಕಡೆ ಒಬ್ಬರನ್ನು ಕರೆಯುತ್ತೇನೆ. ಈಗ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ ಅವರು ಹೇಳಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮ ೬೯ರ ಕೆಳಗೆ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ನನಗೂ ಅವಕಾಶವಿದೆ. The Notification with regard to CBI investigation was issued on 8-9-1987. The investigation was taken over on 10-9-1987. From the date of Notification, the C.O.D., has stopped the Investigation.

(ಗೊಂದಲ)

ಶ್ರೀ ಬಿ. ರಾಚಯ್ಯ.—ಈ ತರಹ ಆದರೆ ನಾವು ಏನು ಮಾತನಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಎಸ್. ಎಂ. ಅಡ್ಯಂತಾಯ್ಯ.—ಅರ್ಧಗಂಟೆ ಸಮಯಕೊಡಿ ಕೇಳಿಕೊಂಡು ಬರಲಿ......

(ಗೊಂದಲ)

SRI S. R. BOMMAI.—From the date of notification. the COD has stopped the investigation. On 8-9-1987, the Advocate General gave an undertaking to the High Court, intimating that the matter has been handed over to C. B. I., ಫ್ಯಾಕ್ಟ್ಸ್ ಗೊತ್ತಿಲ್ಲದೆ ಸಭೆಯನ್ನು ಮಿಸ್‌ಲೀಡ್ ಮಾಡ ತಕ್ಕಂಥಾದ್ದು ಸರಿಯಲ್ಲ.

(ಗೊಂದಲ)

SRI M. VEERAPPA MOILY.—I don't think the Hon'ble Minister is rightly representing the things here. Writ Petition is still pending. I am sorry, He is misleading the House.

(*Interruption*)

ಅಧ್ಯಕ್ಷರು.—ನೀವು ಅವರನ್ನು ಮಿಸ್‌ಲೀಡ್ ಮಾಡಬೇಡಿ, ಅವರನ್ನು ನೀವು ಕೂಡ ಮಿಸ್‌ಲೀಡ್ ಮಾಡಬೇಡಿ. ಮಾನ್ಯ ಯಡಿಯೂರಪ್ಪನವರೇ, ಇನ್ನು ಹತ್ತು ಮಿನಿಟ್‌ನಲ್ಲಿ ತಾವು ಮುಗಿಸಬೇಕು

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ರಷೀದ್ ಕೊಲೆ ಪ್ರಕರಣ ಬಗ್ಗೆ ಏನ. ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೋ ಅದನ್ನು ರೂಲ್ 69ರಪ್ರಕಾರ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಈ ಸದನದಲ್ಲಿ ನಡೆಯುವಂಥ ಚರ್ಚೆ ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕಂಥ ವಿಷಯವನ್ನು ಈ ರಾಜ್ಯದ ಜನ ನೋಡಿದಾಗ ಈ ರಾಜ್ಯದ ಜನ ಮಾತ್ರವಲ್ಲ, ಈ ದೇಶದ ಜನ ಸಹಾ ಸಂಶಯದಿಂದ ಈ ಪ್ರಕರಣದ ಬಗ್ಗೆ ನೋಡುವಂಥ ಒಂದು ಸಂದರ್ಭವನ್ನು ನಾವೇ ಒದಗಿಸಿದ್ದೇವೆ ಎಂದು ನನಗೆ ಅನುಮಾನ ಬರುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳುವಂಥ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ಒಂದು ಪ್ರಕರಣದ ಬಗ್ಗೆ ಸಿ. ಬಿ. ಐ. ತನಿಖೆಯಾಗಬೇಕು ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ವಿನಂತಿಯನ್ನು ಮಾಡಿಕೊಂಡಿದ್ದರೋ ಅದೇ ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ತನಿಖೆಯು ಪ್ರಾರಂಭವಾದ ಮೇಲೆ ಸಿ.ಬಿ.ಐ ತನಿಖೆಯ ರೀತಿಯ ಬಗ್ಗೆ ಕೊಟ್ಟಿರುವಂಥ ಅಭಿಪ್ರಾಯವನ್ನು ನೋಡಿದರೆ ಮನಸ್ಸಿಗೆ ತುಂಬಾ ನೋವು ಆಗತಕ್ಕಂಥ ಸಂಗತಿ. ಅವರು ಏನು ಹೇಳಿದ್ದಾರೆಂದರೆ "ಸಿ. ಬಿ. ಐ. ತನಿಖೆಯಲ್ಲೀ ರಾಜಕೀಯ, ಕೇಂದ್ರದ ಅಧಿಕಾರಿಯಿಂದಲೇ ಮುನ್ಸೂಚನೆ" ಹೆಗಡೆಯವರು ಹೇಳಿರುವಂಥ ಮಾತು. ಮೊನ್ನೆ ಮಾತನಾಡುತ್ತಾ "ರಷೀದ್ ಕೊಲೆ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಿದ್ದುದು ಸರಿಯಲ್ಲ, ಅದರಲ್ಲಿ ರಾಜಕೀಯ ಬರುತ್ತದೆಂದು ಕೇಂದ್ರದ ಗೃಹ ಖಾತೆ ಹಿರಿಯ ಅಧಿಕಾರಿಯೊಬ್ಬರು ತಮಗೆ ದೆಹಲಿಯಲ್ಲಿ ಹೇಳಿದರು ಎಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ವಿಧಾನಸಭೆಯಲ್ಲಿ ಹೇಳಿದರು" "ಆ ಅಧಿಕಾರಿ ವ್ಯಕ್ತಪಡಿಸಿದ ಶಂಕೆ ನಿಜವಾಯಿತು ಎಂದು ನನಗನ್ನಿಸುತ್ತದೆ ಎಂದು ಹೆಗಡೆ ಪ್ರತಿಪಾದಿಸಿದರು" ಇವನ್ನು ನೋಡಿದಾಗ ಏನು ಅನಿಸುತ್ತದೆ ಎಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಸಿ.ಬಿ.ಐ. ತನಿಖೆಗೆ ಕೊಡತಕ್ಕಂಥ ಸಂದರ್ಭದಲ್ಲಿ ತಮ್ಮ ಅಪೇಕ್ಷೆಗೆ ತಕ್ಕಂತೆ ಸಿ.ಬಿ.ಐ.ನವರು ವರದಿ ಕೊಡಬೇಕೆಂಬ ಅಪೇಕ್ಷೆ ತಮಗಿತ್ತೇ ? ಯಾವ ತನಿಖೆಯನ್ನು ನಂಬಿ ಕೇಂದ್ರ ಸರ್ಕಾರದ ಒಂದು ಕಂಟ್ರೋಲ್‌ನಲ್ಲಿರತಕ್ಕಂಥ ಸಿ.ಬಿ.ಐ.ಗೆ ವಹಿಸಿ ಕೊಟ್ಟಮೇಲೆ ತನಿಖೆ ಪೂರ್ಣ ಆಗುವವರೆಗೂ ಕಾಯಿದೆ ಈ ರೀತಿಯ ಒಂದು ಅಭಿಪ್ರಾಯವನ್ನು ಕೊಡುವುದರಿಂದ ಈ ತನಿಖೆಯ ರೀತಿ ಬದಲಾವಣೆ ಆಗಲಿಲ್ಲವೇ? ರಾಜ್ಯ ಸರ್ಕಾರವು ಅನೇಕ ಪ್ರಕರಣಗಳನ್ನು ಸಿ.ಓ.ಡಿ.ಗೆ ಕೊಡುತ್ತೇವೆ. ಆ ರೀತಿ ಸಿ.ಓ.ಡಿ. ತನಿಖೆ ಆಗತಕ್ಕಂಥ ಸಂದರ್ಭದಲ್ಲಿ ಈ ಸದನದಲ್ಲಿ ಶಾಸಕರೇ ಇರಬಹುದು, ವಿರೋಧ ಪಕ್ಷದ ನಾಯಕರು ಬೇರೆ ಯಾರೇ ಇರಬಹುದು, ಈ ರೀತಿ ತನಿಖೆಗೆ ಒಪ್ಪಿಸಿದ ಮೇಲೆ ಅವರಿಗೆ ಅನುಕೂಲಕರವಾದ ರೀತಿಯಲ್ಲಿ

ಮಾಡುತ್ತಿದ್ದಾರೆ ಎಂದು ಜನ ಹೇಳುವುದಿಲ್ಲವೇ ? ಈ ರೀತಿ ಆದರೆ ಜನಗಳಿಗೆ ಸಿ.ಓ.ಡಿ. ಮತ್ತು ಸಿ.ಬಿ.ಐ. ತನಿಖೆಯ ಬಗ್ಗೆ ಈ ರಾಜ್ಯದ ಜನತೆಗೆ ನಂಬಿಕೆ ಬರುತ್ತದೆಯೇ ? ಈ ಒಂದು ಪ್ರಯತ್ನವನ್ನು ತಾವು ಮಾಡಿರುವುದರಿಂದಲೇ ಈ ತನಿಖೆಗೆ ಬೇರೆ ದಿಕ್ಕನ್ನು ಕೊಟ್ಟಿದ್ದೀರಿ ಎಂಬ ಅನುಮಾನ ಸಹಜವಾಗಿ ಬರುತ್ತದೆ. ಇನ್ನು ೧೦-೫-೧೯೮೮ರಲ್ಲಿ "ಡೆಕನ್ ಹೆರಾಲ್ಡ್" ಪತ್ರಿಕೆಯಲ್ಲಿ ಒಂದು ವಿಷಯ ಬಂದಿದೆ. It is stated in Deccan Herald dated 10-5-1988. Advocate wants CM in Court. The application said Mr. Hegde had been quoted in a local evening newspaper dated 31-8-1987 as saying that he was aware of the material evidence in connection with the case. ಇಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಕೇಸ್‌ಗೆ ಸಂಬಂಧಪಟ್ಟ ಹಾಗೆ ಎವಿಡೆನ್ಸ್ ತಮಲ್ಲಿದ್ದರೆ ಸಿ.ಬಿ.ಐ.ಗೆ ಬೇಕಾದಂಥ ಮಾಹಿತಿಗಳನ್ನು ಒದಗಿಸಿಕೊಟ್ಟು, ಈ ರೀತಿ ವಿನಾಕಾರಣ ಬೇರೆ ಬೇರೆ ದಿಕ್ಕಿನಲ್ಲಿ ಬೇರೆ ಬೇರೆ ಅಪರಾಧಿಗಳಾಗತಕ್ಕಂಥ ಒಂದು ನಿರೀಪ ಸಂದರ್ಭ ಏನು ಬಂದಿದೆ, ಅದನ್ನು ತಡೆಯುವುದಕ್ಕೆ ನಿಮಗೆ ಸಾಧ್ಯವಾಗುತ್ತಿತ್ತು. ಈ ರೀತಿ ಯಾವುದೇ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡದೆ ಸಿ.ಬಿ.ಐ. ತನಿಖೆಯ ರೀತಿಯ ಬಗ್ಗೆ ನೀವು ಪ್ರಶ್ನೆಯನ್ನು ಮಾಡತಕ್ಕಂಥ ಒಂದು ಸಂದರ್ಭ ಒದಗಿಸಿರತಕ್ಕಂಥದ್ದು ಈ ರಾಜ್ಯದ ದೇಶದ ದುರ್ದೈವ ಎಂದು ನಾನು ಭಾವಿಸುತ್ತೇನೆ. ಮತ್ತು ಎರಡನೆಯದು ಇವತ್ತು ಯಾವುದೇ ಫ್ಯಾಕ್ಟ್ ಇರಲಿ, ಈ ಸದನದಲ್ಲಿ ಚರ್ಚೆಯಾಗುತ್ತಿದೆ ತುಂಬಾ ಗಂಭೀರವಾಗಿ ಇದು ಚರ್ಚೆಯಾಗಬೇಕು. ಇದು ನ್ಯಾಯವಾಗಿ ತನಿಖೆಯಾಗಬೇಕು ; ಅಪರಾಧಿಗಳಿಗೆ ಶಿಕ್ಷೆಯಾಗಬೇಕು ಎನ್ನುವ ಕಳಕಳಿ ಏನಾದರೂ ನಿಮ್ಮಲ್ಲಿ ಇದ್ದಿದ್ದರೆ ಈ ರಾಜ್ಯದ ಮುಖ್ಯ ಮಂತ್ರಿಗಳು ಈ ರೀತಿಯ ಅಭಿಪ್ರಾಯವನ್ನು ಕೊಡುವಂಥ ಪ್ರಸಂಗ ಬರುತ್ತಿರಲಿಲ್ಲ. ಯಾವುದೇ ಉನ್ನತ ಅಧಿಕಾರಿ ಇರಬಹುದು. ಈ ರಾಜ್ಯದ ಮಂತ್ರಿ ಇರಬಹುದು, ಕಾನೂನಿಗೆ ಯಾರು ದೊಡ್ಡವರಲ್ಲ. ಈ ತನಿಖೆಯ ವರದಿ ಬರುವವರೆಗೂ ಕಾಯಬೇಕಾಗಿತ್ತು. ಆ ರೀತಿ ಮಾಡದೇ ಬೇರೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಈ ರೀತಿ ಆದರೆ ಈ ದೇಶದ ರಾಜ್ಯದ ಜನತೆಗೆ ಬರುವ ದಿವಸದಲ್ಲಿ ಸಿ.ಬಿ.ಐ. ಬಗ್ಗೆ ಅವರಿಗೆ ಸಂಶಯ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. "ಜಾಲಪ್ಪನವರು ಇಂದಿರಾಗಾಂಧಿಯವರಿಗೆ ಮಾಡಿದ ಉಪಕಾರವನ್ನಾದರೂ ನೆನಸಿ" ಇದು ಏನು ಅರ್ಥ ? ಈ ಮಾತು ಯಾವ ಅರ್ಥಕ್ಕೆ ಬರಬಹುದು. ತಾವೇ ದಯಮಾಡಿ ಯೋಚನೆ ಮಾಡಬೇಕು ಡಿ.ಸಿ.ಪಿ.ಯವರನ್ನು ಅರೆಸ್ಟ್ ಮಾಡಿದ್ದಾರೆ, ಅವರ ಬಗ್ಗೆ ಸರ್ಟಿಫಿಕೇಟ್ ಕೊಡತಕ್ಕಂಥ ಅಗತ್ಯ ಇಲ್ಲ, ಸಿ.ಬಿ.ಐ ನವರು ಸ್ವತಂತ್ರವಾಗಿ ತನಿಖೆ ಮಾಡತಕ್ಕಂಥ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿ ಯಾವುದೇ ಮಟ್ಟದ ಅಧಿಕಾರಿ ಇದ್ದರೂ ಕೂಡಾ ಅವರನ್ನು ಅರೆಸ್ಟ್ ಮಾಡಿರತಕ್ಕಂಥ ಸಂದರ್ಭದಲ್ಲಿ ಸತ್ಯ ಹೊರಗಡೆ ಬರುವುದಕ್ಕಿಂತ ಮುಂಚೆ ಅವರನ್ನು ಡಿಫೆಂಡ್ ಮಾಡಿಕೊಳ್ಳತಕ್ಕಂಥ ಪ್ರಯತ್ನ ಈ ರಾಜ್ಯ ಸರ್ಕಾರದ ಮೂಲಕ ಆದರೆ. ಈ ರೀತಿ ಆದರೆ ಸತ್ಯ ಹೊರಗಡೆ ಹೇಗೆ ಬರುತ್ತದೆ ? ಇವತ್ತು ಯಾವನೇ ವ್ಯಕ್ತಿ ಇರಬಹುದು ಅವರನ್ನು ಅಪರಾಧಿ ಎಂದು ಹಿಡಿಯುವಂಥ ಸಂದರ್ಭದಲ್ಲಿ ಕೋರ್ಟಿನಲ್ಲಿರತಕ್ಕಂಥ ಪದ್ಧತಿಯಲ್ಲಿ ಈ ರೀತಿ ಎಲ್ಲಾ ಆದರೆ ಅವರ ಹಿನ್ನೆಲೆ ಏನು ಎನ್ನುವ ಬಗ್ಗೆ ಯೋಚನೆಯನ್ನು ಮಾಡುತ್ತಾರೆ. ಸ್ವಾಭಾವಿಕವಾಗಿ ಇರತಕ್ಕಂಥ ಸಂಗತಿ ಇದು. ಡಿ.ಸಿ.ಪಿ. ನಾರಾಯಣ್ ಬಗ್ಗೆ ಕ್ರಾಂತಿ ಪತ್ರಿಕೆಯ ಸಂಪಾದಕರಾದ ಸಿದ್ಧರಾಮೇಶ್ವರ ಕೊಲೆಯ ಬಗ್ಗೆ ಅನೇಕ ಆರೋಪಗಳು ಬಂದಿರುವ ವಿಷಯಗಳನ್ನು ನಾವು ಕೇಳಿದ್ದೇವೆ. ಇವತ್ತು ಸನ್ಮಾನ್ಯ ಜಾಲಪ್ಪನವರು ಈ ಒಂದು ಸಂದರ್ಭದಲ್ಲಿ ದೆಹಲಿಗೆ ಗೃಹಸಚಿವರಾಗಿ ಹೋದರು.

ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಈ ಸದನದಲ್ಲಿ ಆಗ್ರಹ ಮಾಡುತ್ತೇನೆ. ಈ ಒಂದು ಹಿನ್ನೆಲೆಯಲ್ಲಿ ದೆಹಲಿಗೆ ಹೋದ ಸಂದರ್ಭದಲ್ಲಿ ಯಾರನ್ನು ಭೇಟಿ ಮಾಡಿದ್ದರು. ಕೇಂದ್ರ ಸರ್ಕಾರದ ಗೃಹ ಮಂತ್ರಿಗಳನ್ನು, ಅಥವಾ ಅಲ್ಲಿನ ಪ್ರಮುಖರನ್ನು ಭೇಟಿ ಮಾಡಿದ್ದರೋ ? ಏಕೆಂದರೆ ಅಲ್ಲಿಂದ ಬರುತ್ತಿದ್ದ ಹಾಗೆಯೇ ಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಸಿ.ಬಿ.ಐ. ರಿಮ್ಯಾಂಡ್ ಅರ್ಜಿಯಲ್ಲಿ ಸ್ಪಷ್ಟವಾಗಿ ಒಂದು ಮಾತು ಹೇಳಿದ್ದಾರೆ. ಡಿ.ಸಿ.ಪಿ. ನಾರಾಯಣ್ ಬಗ್ಗೆ ಉದ್ದೇಶ ಪೂರ್ವಕವಾಗಿ ರಷೀದ್ ಕೊಲೆ ಬಗ್ಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ದಾಖಲೆಯನ್ನು ಸೃಷ್ಟಿಸಿ ಸತ್ಯವನ್ನು ಬಚ್ಚಿಡಲು ಪ್ರಯತ್ನ ಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ರಿಮ್ಯಾಂಡ್

ಅಪ್ಲಿಕೇಶನ್ ಹಾಕಿದ್ದಾರೆ. ಹೀಗಿರುವಂತಹ ಸಂದರ್ಭದಲ್ಲಿ ಸಿ.ಬಿ.ಐ. ಅಧಿಕಾರಿಗಳು ನಾರಾಯಣ್‌ರವರ ಮನೆಯನ್ನು ಶೋಧಿಸಿದಾಗ ಸಂಜಯಗಾಂಧಿ ಶಿಕ್ಷಣ ಸಂಸ್ಥೆಗೆ ಸಂಬಂಧಪಟ್ಟ ಸದಾಶಿವನ್‌ರವರ ಪರ ಪಡೆದಂತಹ ಇನ್‌ಜನ್‌ಕ್ಷನ್ ಆರ್ಡರ್ ಕಾಪಿ ಅಲ್ಲಿ ಸಿಕ್ಕಿದೆ. ಆದ್ದರಿಂದ ಈ ಒಂದು ಕೇಸ್‌ನಲ್ಲಿ ಯಾವ ರೀತಿ ಹೊಸ ಹೊಸ ತಿರುವುಗಳನ್ನು ಪಡೆಯುತ್ತಿದೆ ಎಂದು ನೋಡಬಹುದು. ಇದರಿಂದ ಏನು ಅರ್ಥ ಆಗುತ್ತದೆ ಅಂದರೆ ಯಾವುದೋ ಒಂದು ಕೋರ್ಟ್‌ಗೆ ಸಂಬಂಧಪಟ್ಟ ಆರ್ಡರ್ ಇದ್ದರೆ, ಪೋಲೀಸ್ ಅಧಿಕಾರಿಗೆ ಸಂಬಂಧಪಟ್ಟ ಫೈಲ್ ಇದ್ದರೆ ಅಡ್ಡಿ ಇಲ್ಲ. ಅಲ್ಲಿ ಸಂಜಯಗಾಂಧಿ ಶಿಕ್ಷಣ ಸಂಸ್ಥೆಗೆ ಸಂಬಂಧ ಪಟ್ಟ ಫೈಲ್ ಇದ್ದು ಆರ್ಡರ್ ಕಾಪಿ ಇತ್ತು, ಆದರಿಂದ ಅನೇಕ ಸಂಶಯಕ್ಕೆ ಕಾರಣವಾಗುತ್ತದೆ. ಆದ್ದರಿಂದ ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಸಿ.ಬಿ.ಐ. ತನಿಖೆಗೆ ಹೆದರುವ ಅಗತ್ಯ ಏನು ? ಸ್ಪಷ್ಟವಾಗಿ ತನಿಖೆಯಾಗುವುದಕ್ಕೆ ಬಿಡಿ. ಯಾವುದೇ ಮಂತ್ರಿ ಇರಬಹುದು ಅಥವಾ ಯಾವುದೇ ಪೋಲೀಸ್ ಉನ್ನತ ಅಧಿಕಾರಿ ಇರಬಹುದು, ಈ ಕೊಲೆ ಮೊಕದ್ದಮೆಯಲ್ಲಿ ಸಿಲುಕಿಕೊಂಡಿದ್ದರೆ ಶಿಕ್ಷೆ ಆಗುತ್ತದೆ. ಇನ್ನೂ ತೀರ್ಮಾನ ಆಗಿಲ್ಲ. ಯಾರು ಅಪರಾಧಿ ಗಳು ಅಲ್ಲ ಎನ್ನುವುದರ ತೀರ್ಮಾನಕ್ಕೆ ಅವಕಾಶ ಇದೆ. ಇಂತಹ ಸಂದರ್ಭದಲ್ಲಿ ಆದೇ ರೀತಿಯಾಗಿ ಚರ್ಚೆಗೆ ಅವಕಾಶವಾಗುವಂತಹ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಎದ್ದು ನಿಂತು ಅದನ್ನು ಡಿಫೆಂಡ್ ಮಾಡುವಂತಹ ಪ್ರಯತ್ನವೇ ಈ ರಾಜ್ಯದ ಜನತೆಗೆ ಸಂಶಯ ಬರುವಂಥಾದ್ದಾಗಿದೆ. ಇದರಿಂದ ರಾಜ್ಯದ ಜನತೆಗೆ ಸಂಶಯ ಮೂಡತಕ್ಕ ಪ್ರಯತ್ನ ಆಗಬಹುದು. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ, ಏನೆಂದರೆ ದಯಮಾಡಿ ಇದರ ಬಗ್ಗೆ ಸತ್ಯಾಸತ್ಯ ಹೊರ ಬರುವುದಕ್ಕೆ ಅವಕಾಶ ಮಾಡಿ ಕೊಡಿ. ಇಲ್ಲಿ ಒಂದು ಸಂಶಯ ಬರುತ್ತದೆ. ರಷೀದ್ ಕೊಲೆ ಆದ ಮೇಲೆ ಅವೊತ್ತು ಶವವನ್ನು ಯಾವ ಕಾರಿನಲ್ಲಿ ಸಾಗಿಸಿದರು, ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆ ಇವೆಲ್ಲಾ ಪ್ರಶ್ನೆ ಮುಂದೆ ಬರುತ್ತದೆ. ನಾನು ಮೆರಿಟ್ ಆಫ್ ದಿ ಕೇಸ್‌ಗೆ ಹೋಗುತ್ತಿಲ್ಲ.

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಜಡ್ಜ್‌ಮೆಂಟ್ ಬಂದ ಮೇಲೆ ಓದಿ ಕೊಳ್ಳಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಹೇಳುತ್ತಿರುವುದು......

(ಗೊಂದಲ)

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ತಾವು ಮುಕ್ತಾಯ ಮಾಡಿ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಸಿ.ಬಿ.ಐ.......

(ಗೊಂದಲ)

ಶ್ರೀ ಬಿ. ಎನ್. ಬಚ್ಚೇಗೌಡ.—ಮಾನ್ಯ ಯಡಿಯೂರಪ್ಪನವರು ಸದನವನ್ನು ಕೋರ್ಟ್ ಹಾಲ್ ಪರಿವರ್ತನೆ ಮಾಡುತ್ತಿದ್ದಾರೆ,

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ......

ಶ್ರೀ ವೇದಾಂತ ಹೆಮ್ಮಿಗೆ.—ಕರ್ನಾಟಕದಲ್ಲಿ ಪೋಲೀಸರು ಏನಾದರೂ ಪ್ರತಿನಿತ್ಯ ವ್ಯವಹಾರ ಮಾಡುವಾಗ, ಇವರು ಪೋಲೀಸರ ಬಗ್ಗೆ ಅಪನಂಬಿಕೆ ವ್ಯಕ್ತಪಡಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ದಯಮಿಟ್ಟು ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.—ಸಿ.ಬಿ ಐ. ನವರು ದೇವಲೋಕದಿಂದ ಬಂದಿಲ್ಲ. ಕರ್ನಾಟಕದ ಪೋಲೀಸರಲ್ಲಿ ನಿಮಗೆ ನಂಬಿಕೆ ಇಲ್ಲ,

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತಿರುವುದು ಇಲ್ಲಿನ ಪೋಲೀಸರಲ್ಲಿ ನಂಬಿಕೆ ಇದ್ದ ಮೇಲೆ ಸಿ.ಓ.ಡಿ. ಬಿಟ್ಟು ಸಿ.ಬಿ.ಐ. ಗೆ ಕೊಟ್ಟಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಕರ್ನಾಟಕದ ಪೋಲೀಸರಲ್ಲಿ......

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಉತ್ತರ ಕೊಡಬೇಕಾಗಿಲ್ಲ. ನೀವು ಕೊಡಬೇಕಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ನೀವು ಕರ್ನಾಟಕದ ಪೋಲೀಸರನ್ನು ಟೀಕೆ ಮಾಡಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಪ್ರಸ್ತಾಪ ಮಾಡುವುದಕ್ಕೆ ಒಂದು ಉದ್ದೇಶ ಏನು ಅಂದರೆ, ನಾನು ಆ ಕಡೆ ಕೆಲವು ಶಾಸಕರನ್ನು ಭೇಟಿ ಮಾಡಿದಾಗ ಮಾಜಿ ಗೃಹ ಸಚಿವರು ತಬ್ಬಿಬ್ಬಾಗಿದ್ದಾರೆ, ಇನ್ನೂ ಕೆಲವು ಸಂಗತಿಗಳು ಇದ್ದು, ಇನ್ನೂ ಕೆಲವು ಮಂತ್ರಿಗಳು ಇದರಲ್ಲಿ ಸೇರಿರುವಂತಹ ಸಂದರ್ಭಗಳು ಇವೆ. ಕೆಲವರ ಕೈವಾಡ ಇದೆ. ಇದೆಲ್ಲಾ ಬೆಳಕಿಗೆ ಬರುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಆದ್ದರಿಂದ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳು, ಪುರಾವೆಗಳನ್ನು ಬಹಿರಂಗ ಮಾಡದೆ ಇದ್ದರೆ ಮುಂದೆ ಬರುವ ದಿವಸಗಳಲ್ಲಿ ಯಾವ ರೀತಿ ಕೇರಳ ಮುಖ್ಯಮಂತ್ರಿಗಳಾದ ಕರುಣಾಕರನ್ ರಾಜನ್ ಕೊಲೆ ಪ್ರಕರಣದಲ್ಲಿ ರಾಜೀನಾಮೆ ಕೊಟ್ಟ ಹಾಗೆ ನೀವು ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಯಡಿಯೂರಪ್ಪನವರೂ ಸೇರಿದ್ದಾರೆಂದು ಹೇಳಿದರೆ. can you beleive it ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರೇ ಮುಕ್ತಾಯ ಮಾಡಿ, ಕಾಂಟ್ರೊವರ್ಸಿ ಮಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ದೆಹಲಿಯಲ್ಲಿರುವ ಒಬ್ಬ ಉನ್ನತ ಮಟ್ಟದ ಅಧಿಕಾರಿ ಈ ಕೇಸ್‌ನ್ನು ಸಿ.ಟಿ.ಬಿ.ಗೆ ವಹಿಸಬಾರದಾಗಿತ್ತು ಎಂದು ತಮಗೆ ಹೇಳಿದರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಗೆ ಕೊಟ್ಟಿರುವುದರ ಅರ್ಥವಾದರೂ ಏನು? ಇದರ ಹಿನ್ನೆಲೆ ಆದರೂ ಏನು? ಈ ಮಾತನ್ನು ಹೇಳಿದಂಥ ಆ ಉನ್ನತಮಟ್ಟದ ಅಧಿಕಾರಿ ಯಾರು ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಒಟ್ಟಿನಲ್ಲಿ ಈ ಒಂದು ಕೇಸ್‌ನಲ್ಲಿ ಅನೇಕ ರೀತಿಯ ಸಂಶಯಗಳು ಬರುತ್ತಿವೆ.

ಶ್ರೀ ಎಂ ರಘುಪತಿ.—ಈ ಕೇಸ್‌ನಲ್ಲಿ ಇನ್ನೂ ಕೆಲವು ಮಂತ್ರಿಗಳು ಶಾಮೀಲಾಗಿದ್ದಾರೆಂದು ಕೆಲವು ಸದಸ್ಯರು ತಮಗೆ ಹೇಳಿದರೆಂದು ಇವರು ಹೇಳುತ್ತಿದ್ದಾರೆ. ಹಾಗಿದ್ದರೆ ತಾವು ಅವರುಗಳ ಹೆಸರುಗಳನ್ನು ಹೇಳುತ್ತೀರಾ?

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಕೇಸ್‌ನ್ನು ಸಿ.ಬಿ.ಐ.ಗೆ ವಹಿಸಬಾರದಾಗಿತ್ತು ಎಂದು ದೆಹಲಿಯಲ್ಲಿ ಮುಖ್ಯಮಂತ್ರಿಗಳಿಗೆ ಹೇಳಿದಂಥ ಅಧಿಕಾರಿ ಯಾರು ಎಂಬುದನ್ನು ನೀವು ಹೇಳಿದರೆ, ಈ ಒಂದು ಪ್ರಕರಣದಲ್ಲಿ ಮತ್ತೆ ಬೇರೆ ಯಾವಯಾವ ಮಂತ್ರಿಗಳು ಶಾಮೀಲಾಗಿದ್ದಾರೆಂದು ನನಗೆ ಯಾವ ಶಾಸಕರು ಹೇಳಿದರು ಎಂಬುದನ್ನು ನಾನು ತಮಗೆ ಹೇಳುತ್ತೇನೆ. ಆದ್ದರಿಂದ ನಿಮಗೆ ಧೈರ್ಯವಿದ್ದರೆ ಆ ಅಧಿಕಾರಿಯ ಹೆಸರನ್ನು ಹೇಳಿ?

ಶ್ರೀ ಎಂ. ರಘುಪತಿ.—ನಮಗೆ ಧೈರ್ಯವಿಲ್ಲ. ನಿಮಗೆ ಧೈರ್ಯವಿದ್ದರೆ ಹೇಳಿ?

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ರಷೀದ್ ಕೊಲೆ ಪ್ರಕರಣದಲ್ಲಿ ಹೈಕೋರ್ಟಿನ ವಕೀಲ ವೃಂದದವರು ವಿಧಾನಸೌಧದ ಮುಂದೆ ಧರಣಿ ಮಾಡದಿದ್ದರೆ ಸತ್ಯ ಸಂಗತಿ ಹೊರಗಡೆ ಬರುತ್ತಿರಲಿಲ್ಲ

ಆದ್ದರಿಂದ ಅವರು ತಮ್ಮ ಹೋರಾಟವನ್ನು ಮುಂದುವರೆಸಬೇಕು. ಯಾವ ಪಕ್ಷದ ಸರ್ಕಾರವೇ ಅಧಿಕಾರದಲ್ಲಿರಲಿ, ಕೊಲೆ ಪ್ರಕರಣಗಳು ನಡೆದಾಗ ಪ್ರಾಮಾಣಿಕವಾದಂಥ ತನಿಖೆಯನ್ನು ಮಾಡಿಸುವುದಿಲ್ಲವೆಂದು ವಕೀಲರುಗಳು ಭಾವಿಸಿಕೊಂಡು ಈ ಕೊಲೆ ಪ್ರಕರಣದಲ್ಲಿ ಹೋರಾಟ ನಡೆಸಲು ಮುಂದೆ ಬಂದಿದ್ದಾರೆ, ಆದಕ್ಕಾಗಿ ನಾನು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಂತಹ ಕೊಲೆ ಪ್ರಕರಣಗಳು ನಡೆದಾಗ, ಇಂತಹ ಗಂಭೀರ ಸನ್ನಿವೇಶಗಳು ಬಂದಾಗ ಸದನದ ಒಳಗಡೆ ಇರುವಂತಹ ಚುನಾಯಿತ ಸದಸ್ಯರಾದಂಥ ನಾವುಗಳು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾಗುತ್ತದೆ. ಈ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಿದ ಮೇಲೆ ಉನ್ನತ ಮಟ್ಟದಲ್ಲಿರುವ ಮಾನ್ಯ ಮುಖ್ಯ ಮಂತ್ರಿಗಳು ಅವರ ತನಿಖೆಯ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಬಾರದಾಗಿತ್ತು. ಈ ರೀತಿ ಸಂಶಯ ವ್ಯಕ್ತಪಡಿಸಿದರೆ ಇಂತಹ ಪ್ರಕರಣಗಳು ನಡೆದಾಗ ಉನ್ನತ ಮಟ್ಟದ ಅಧಿಕಾರಿಗಳು ಯಾರೂ ತನಿಖೆ ಮಾಡಲು ಮುಂದೆ ಬರುವುದಿಲ್ಲ. ಈಗಲಾದರೂ ದಯಮಾಡಿ ಇದರ ತನಿಖೆಯನ್ನು ಸ್ವತಂತ್ರವಾಗಿ ನಡೆಸಲು ಸಿ.ಬಿ.ಐ.ನವರಿಗೆ ಬಿಡಿ. ಅವರ ತನಿಖೆಯ ಬಗ್ಗೆ ಭಯ ಪಡುವ ಅಗತ್ಯ ಇಲ್ಲ. ಈ ಪ್ರಕರಣದಲ್ಲಿ ಯಾರು ಯಾರು ತಪ್ಪಿತಸ್ಥರೆಂದು ಸಾಭಿತಾಗುತ್ತದೆಯೋ? ಅವರೆಲ್ಲರೂ ಮನೆಗೆ ಹೋಗುತ್ತಾರೆ. ಆದ್ದರಿಂದ ಅವರು ಸ್ವತಂತ್ರವಾಗಿ ತನಿಖೆ ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಡಿ. ಜವಾಬ್ದಾರಿ ಸ್ಥಾನದಲ್ಲಿರುವವರು ಅವರ ತನಿಖೆಯ ಬಗ್ಗೆ ಇಂತಹ ಮಾತುಗಳನ್ನು ಹೇಳಬಾರದಾಗಿತ್ತು. ಇಷ್ಟು ಹೇಳಿ ನನಗೆ ಈ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಮಾಡಿಕೊಟ್ಟ ತಮಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಲು).—ಮಾನ್ಯ ಅಧ್ಯಕ್ಷರೇ, ಈ ರಷೀದ್ ಕೊಲೆ ಮೊಕದ್ದಮೆ ಪ್ರಕರಣ ಏನಿದೆ, ಇದು ದಿನನಿತ್ಯವೂ ಪತ್ರಿಕೆಗಳಲ್ಲಿ ಬರುತ್ತಿರುವುದರಿಂದ, ಇದಕ್ಕೆ ಹೆಚ್ಚಿನ ಒಂದು ಪ್ರಚಾರ ಸಿಕ್ಕಿ, ಈ ಕೊಲೆ ಪ್ರಕರಣ ಮತ್ತಷ್ಟು ನಿಗೂಢವಾಗುತ್ತಿದೆ. ಮುಂದೆ ಇವರಲ್ಲಿ ಮತ್ತೆ ಯಾರು ಯಾರು ತಗಲಿ ಹಾಕಿಕೊಳ್ಳುತ್ತಾರೋ ಗೊತ್ತಿಲ್ಲ, ಒಟ್ಟಿನಲ್ಲಿ ಇದೊಂದು ಅಮಾನವೀಯ ಮತ್ತು ಅಮಾನುಷ ಕೃತ್ಯವೆಂದು ಹೇಳಬಹುದು. ರಷೀದ್ ಎಂಬ ವಕೀಲರು ಕೇರಳಾದಿಂದ ಬೆಂಗಳೂರಿಗೆ ಶ್ರೀ ಸದಾಶಿವನ್ ಅವರ ಪರವಾಗಿ ವಕಾಲತ್ತು ವಹಿಸಲು ಬಂದು ಸತ್ತಿದ್ದಾರೆ ಈ ಒಂದು ಅನ್ಯಾಯದ ವಿರುದ್ಧ ಬೆಂಗಳೂರಿನಲ್ಲಿರುವಂತಹ ವಕೀಲ ವೃಂದದವರೆಲ್ಲರೂ ಸೇರಿಕೊಂಡ. ಒಂದು ದೊಡ್ಡ ಹೋರಾಟವನ್ನೇ ನಡೆಸಿದರು.

ಶ್ರೀ ಜೆ.ಎಚ್ ಪಟೇಲ್.—ವಕೀಲರೊಬ್ಬರು ಸತ್ತರೆ ಅಮಾನುಷ ಕೃತ್ಯವಾಗುತ್ತದೆ, ರೈತರು ಸತ್ತರೆ ಅಮಾನುಷ ಕೃತ್ಯವಾಗುವುದಿಲ್ಲವೋ ?

ಶ್ರೀ ಆರ್. ವೆಂಕಟರಾಮಯ್ಯ.—ಈ ನಮ್ಮ ಸಮಾಜದಲ್ಲಿ ಇಂತಹ ದುರ್ಘಟನೆಗಳು ಎಷ್ಟು ನಡೆದಿವೆಯೋ ನನಗೆ ಗೊತ್ತಿಲ್ಲ. ಇಂತಹ ಅನೇಕ ಪ್ರಕರಣಗಳು ಬೆಳಕಿಗೆ ಬರುವುದಿಲ್ಲ. ಇಲ್ಲಿ ವಕೀಲರೊಬ್ಬರು ಸತ್ತಿದ್ದಾರೆ. ಆದ್ದರಿಂದ ವಕೀಲ ವೃಂದದವರು ಸರಿಯಾದ ತನಿಖೆಯಾಗಬೇಕೆಂದು ಹೋರಾಟ ನಡೆಸಿದರು. ಸಾವಿರಾರು ಜನ ನೆಕ್ಸಲೈಟ್ಸ್ ಸತರು, ಆದರೆ ಅವೆಲ್ಲಾ ಬೆಳಕಿಗೆ ಬರಲಿಲ್ಲ ? ಆದರೆ ಕೇರಳಾದಲ್ಲಿ ರಾಜನ್ ಪ್ರಕರಣ ಮಾತ್ರ ಬಹಳ ಪ್ರಾಮುಖ್ಯತೆಯನ್ನು ಪಡೆಯಿತು. ಆದರಂತೆ ಇಲ್ಲಿ ವಕೀಲರೊಬ್ಬರು ಸತ್ತಿದ್ದರಿಂದ ಇದಕ್ಕೆ ಇಷ್ಟೊಂದು ಪ್ರಾಮುಖ್ಯತೆ ಬಂದಿದೆ. ಈಗ ಕರ್ನಾಟಕ ರಾಜ್ಯದಲ್ಲಿರುವ ಸಿ. ಒ. ಡಿ, ಜನತಾ ಪಕ್ಷದ್ದು ಮತ್ತು ಕೇಂದ್ರದಲ್ಲಿರುವಂತಹ ಸಿ.ಬಿ.ಐ. ಕಾಂಗ್ರೆಸ್ ಪಕ್ಷದ್ದು ಎಂಬತಕ್ಕಂಥ ಪ್ರೆಜ್ಯುಡಿಸ್ ಅನ್ನು ಇಟ್ಟುಕೊಂಡು ನಾವು ಮಾತನಾಡುವುದು ಸರಿಯಲ್ಲ.

ಇನ್ನೊಂದು ದಿವಸ ಇನ್ನೊಂದು ಪಾರ್ಟಿ ಬರಬಹುದು ಆಗ ನಾವು ಸುಮ್ಮನೆ ಅವರನ್ನು ಅಕ್ಯೂಸ್ ಮಾಡುವುದು ಬೇಡ, ಇದು ಪೂರ್ತಿ ಫ್ರೀಯಾಗಿ ಇರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ರಾಜ್ಯಭಾರದಲ್ಲಿ ಅವರೂ ಒಂದು ಅಂಗವಾಗಿರುವುದರಿಂದ ಯಾರು ಯಜಮಾನರು ಇರುತ್ತಾರೋ ಅವರ ಮಾತು ಕೇಳುವ ದುರಾದೃಷ್ಟ ಕಾಲ ಬಂದಿದೆ. ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೂ ಕೂಡ ನಾವು ಒಂದು ಯೋಚನೆ ಮಾಡಬೇಕು. ಈಗ ಇದರ ಬಗ್ಗೆ ನಾವು ಸುಮ್ಮನೆ ಚರ್ಚೆ ಇಲ್ಲಿ ಮಾಡುವಾಗ ಕಾಂಗ್ರೆಸ್ ಸ್ನೇಹಿತರು ಮತ್ತು ನಮ್ಮ ಲಾಯರ್ ಸಂಘಗಳು ಕೂಡ ಮತ್ತು ಪ್ರತಿಯೊಬ್ಬರೂ ಕೂಡ ಡಿಮ್ಯಾಂಡ್ ಮಾಡಿದರು. ಸದಾಶಿವನ್ ವಿರುದ್ಧ ಜಾಲಪ್ಪನವರಿಗೆ ವಿಶ್ವೇಶ್ವರಯ್ಯ ಎಜುಕೇಷನ್ ಟ್ರಸ್ಟ್, ಸಂಜಯ ಎಜುಕೇಷನ್ ಟ್ರಸ್ಟ್ ವರ್ಸಸ್ ದೇವರಾಜ ಎಜುಕೇಷನ್ ಟ್ರಸ್ಟ್‌ಗೂ ಕೇಸುಗಳು ನಡೆಯುತ್ತಿತ್ತು. ಆ ಟೈಮಿಗೆ ಸರಿಯಾಗಿ ಡಿಸಿಪಿ. ನಾರಾಯಣ್ ಯಾರಿದ್ದಾರೆ

ಅವರು ಇವರ ಜಾತಿಗೆ ಸೇರಿದವರು. ಆದ್ದರಿಂದ ಅವರನ್ನು ದುರುಪಯೋಗ ಮಾಡಿಕೊಂಡು ಈ ಕೃತ್ಯ ನಡೆಯಿತು ಎಂದು ಆಪಾದನೆ ಮಾಡಿದರು. ಈಗ ಇದಕ್ಕೆ ಮಾನ್ಯ ಜಾಲಪ್ಪನವರು ರಾಜೀನಾಮೆ ಕೊಟ್ಟು ಆಗಿದೆ. ನಮ್ಮ ಆಪೋಸಿಷನ್ ಮಿತ್ರರು ಮೆಹಿವೆಂಟಾಗಿ ಏನು ಅವರ ಒಂದು ಬೇಡಿಕೆ ಇಟ್ಟು ಆ ಬೇಡಿಕೆಯನ್ನು ಈಗಾಗಲೇ ಪೂರೈಸಲಾಗಿದೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಸಾಮಾಜಿಕ ಸಂಪ್ರದಾಯ ಕೂಡ ಪೂರ್ತಿಯಾಗಿದೆ. ಒಪ್ಪಿಕೊಳ್ಳೋಣ. ನಮ್ಮ ಸ್ನೇಹಿತರು ಹೇಳಿದರು, ಒಪ್ಪಿಕೊಳ್ಳೋಣ. ನಾವು ಸುಮ್ಮನೆ ಇದರ ಬಗ್ಗೆ ವಿಪರೀತ ಪ್ರೋಬ್ ಮಾಡುವುದಕ್ಕೆ ಹೋದರೆ ನಿಜವಾಗಿಯೂ ಕೂಡ ವಿಚಾರ ಬೇರೆ ರೀತಿಯಾಗುತ್ತದೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಸ್ವಲ್ಪ ದಯವಿಟ್ಟು ಕುಳಿತುಕೊಳ್ಳಿ. ಪೋಲೀಸರ ಬಗ್ಗೆ ಮಾತು ಹೇಳಿದರೆ ಸಾಕು ನಿಮ್ಮ ಬಹಳ ಕೋಪ ಬರುತ್ತದೆ. ಏಕೆಂದರೆ ಇವರು ಹಳೆಯ ಪೋಲೀಸರು.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಈ ಕಡೆ ದಯವಿಟ್ಟು ಒಂದು ನಿಮಿಷ, ನನ್ನ ಹೆಸರನ್ನು ಅವರು ಮೆನ್ಷನ್ ಮಾಡಿದ್ದಾರೆ. ಈಗ ನಾನು ಅದಕ್ಕೆ ಎಕ್ಸ್‌ಪ್ಲನೇಷನ್ ಕೊಡಬೇಕಾಗುತ್ತದೆ. I request him to yield for a minute,

ಶ್ರೀ ಆರ್. ವೆಂಕಟರಾಮಯ್ಯ.—ಈಗ ಅವರಲ್ಲಿ ನಾನು ಏನೂ..... ....

ಶ್ರೀ ಆರ್. ಎಲ್. ಜಾಲಪ್ಪ.—ಕುಳಿತುಕೊಳ್ಳಿ, ಇವೆಲ್ಲ ನಾಟಕ ಬೇಡ. ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳುವುದು ದುರಾದೃಷ್ಟ ಎಂದು.... ....

ಶ್ರೀ ಆರ್. ಎಲ್. ಜಾಲಪ್ಪ.—ಅವರು ಮಾತನಾಡುವಾಗ ಒಂದು ವಿಷಯ ಹೇಳಿದರು. ಏನೆಂದರೆ ಜಾಲಪ್ಪನವರು ಅವರ ಜಾತಿಯವರನ್ನು ಕರೆದುಕೊಂಡು ಬಂದು ಸದಾಶಿವನಿಗೂ ಟ್ರಸ್ಟ್‌ಗಳಿಗೂ ಜಗಳ ಇದ್ದುದರಿಂದ ಅವರ ಮೂಲಕ ಮಾಡಿಸಿದರು ಎಂದು ಮಾತನಾಡಿಕೊಳ್ಳುತ್ತಾ ಇದ್ದಾರೆ ಎಂದು. ಈ ತರಹ ಪ್ಲಾಟ್‌ಫಾರಂ ಭಾಷಣ ಇಲ್ಲಿ ಮಾತನಾಡುವುದು ಜವಾಬ್ದಾರಿ ಅಲ್ಲ ಇದು. ನಾರಾಯಣ ಕೇರಳದಲ್ಲಿ ಮರ ಕಟ್ಟುವ ಜಾತಿಗೆ ಸೇರಿದವನು. ನಾನು ಬೆಂಗಳೂರಿನಲ್ಲಿ ಕರ್ನಾಟಕದಲ್ಲಿ ಮರ ಕಟ್ಟುವ ಜಾತಿಗೆ ಸೇರಿದವನು, ಇದು ಏನು ಜಾತಿಯೋ He is a Keralian. ಅವನಿಗೂ ನನಗೂ ಏನು ಸಂಬಂಧ? ಹಿ ಈಸ್ ಎನ್ ಎಫಿಷಿಯಂಟ್ ಆಫೀಸರ್ ಎಂದು, ಬೆಂಗಳೂರಿನ ಜನ ಸರಿಯಾಗಿ ನಿದ್ದೆ ಮಾಡಲಿ ಎಂದು ಇಲ್ಲಿ ತಂದು ಹಾಕಿದ್ದುದು ರಷೀದನನ್ನು ಕೊಲೆ ಮಾಡಿಸುವುದಕ್ಕೆ ಅಲ್ಲ ನಾನು ತಂದು ಹಾಕಿದ್ದು ಆತನನ್ನು ದಯವಿಟ್ಟು ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಲಿ ಎಂದು ಅವರಲ್ಲಿ ನನ್ನ ಭಿನ್ನಹ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಾನು ಜವಾಬ್ದಾರಿಯಿಂದ ಮಾತನಾಡುತ್ತಾ ಇದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಿಮಗೆ ಜವಾಬ್ದಾರಿ ಇದೆಯೋ, ಜವಾಬ್ದಾರಿ ಇಲ್ಲ ಅವರಿಗೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನನಗೆ ಆಪಾದನೆ ಮಾಡಬೇಕು ಎಂದು ಮನಸ್ಸಿನಲ್ಲೇ ಇಲ್ಲ. ಜಾಲಪ್ಪನವರ ಬಗ್ಗೆ ಆಪಾದನೆ ಮಾಡಬೇಕು ಎಂದು ನನ್ನ ಮನಸ್ಸಿನಲ್ಲೇ ಇಲ್ಲ. ಈ ಪಿಜಿಆರ್. ಸಿಂಧ್ಯ ಕೂಗಾಡುವುದಕ್ಕೆ ಯಾರೂ ಕೇರ್ ಮಾಡುವುದಿಲ್ಲ. ಇವರು ಸುಮ್ಮನೆ ಕೂಳಿತಿರಬೇಕು. ಜಾಲಪ್ಪನವರ ಬಗ್ಗೆ ನಿಜವಾಗಿಯೂ ಕೂಡ ಸುಮ್ಮನೆ ಆಪಾದನೆ ಮಾಡಬೇಕು ಎಂದು ನನಗೆ ಆಸೆಯೇ ಇಲ್ಲ, ಸುಮ್ಮನೆ ಕೂಗಾಡುತ್ತಾ ಇದ್ದೀರಿ, ನಾನು ಅಂಥಾದ್ದು ಯೋಚನೆಯನ್ನೇ ಮಾಡಿಲ್ಲ. ಪೇಪರಿನಲ್ಲಿ ಬಂದಿದೆ ಎಂದು ಹೇಳಿದರೆ ಅದಕ್ಕೆ ಕೂಗಾಡಿದರೆ ಹೇಗೆ? ನಮಗೆ ಬೇಕಾಗಿರುವುದು ನಿಷ್ಪಕ್ಷಪಾತವಾದ ಎನ್‌ಕ್ವೈರಿ ಆಗಬೇಕು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಮಗೆ ನಿಷ್ಪಕ್ಷಪಾತವಾದ ಎನ್‌ಕ್ವೈರಿಬೇಕು. ನಾನು ಹೇಳುವುದು ಏನೆಂದರೆ, ದಯವಿಟ್ಟು ಯಾರೂ ಇಂಟರ್‌ಫಿಯರ್ ಆಗುವುದು ಬೇಡ. ಈ ಸ್ಟೇಟ್ ಕಾಂಗ್ರೆಸ್ ಪಾರ್ಟಿಯವರು, ಏನೋ ಎಲ್ಲಿಂದಲ್ಲೋ ಇನ್‌ವಾಲ್ವ್‌ಮೆಂಟ್ ಇದೆ ಅವರನ್ನು ಬಲಿ ಹಾಕಿ ಎಂದು ಇವರು ಕೇಳುವುದು ಆಗಲಿ : ಆ ಕಡೆಯವರು ಇವರೇನೋ ಕೇರಳದವರು ಯಾರೋ ಇದ್ದಾರೆ, ಇಲ್ಲಿ ಒಬ್ಬರು ಇದ್ದಾರೆ ಎನ್ನುವ ಒಂದು ಪ್ರಿಜುಡೀಸ್ ಇಟ್ಟುಕೊಂಡು ಮಾತನಾಡುವುದು ಬೇಡ. ಏಕೆಂದರೆ, ಪ್ರಪಂಚಕ್ಕೆ ಸತ್ಯಾಸತ್ಯ ಗೊತ್ತಾಗಬೇಕು. ಅದನ್ನು ಬಿಟ್ಟು ಬಿಟ್ಟು ನಾವು ಈಗಾಗಲೇ ವಿಪರೀತ ಪ್ರೋಬ್ ಮಾಡುವುದಕ್ಕೆ ಹೋದರೆ ಏನಾಗುತ್ತದೆ ನಮ್ಮ ಗತಿ, ಎನ್‌ಕ್ವೈರಿ ಆಫೀಸರ್ ಗತಿ ಏನಾಗುತ್ತದೆ ಎಂದು ಯೋಚನೆ ಮಾಡಬೇಕು. ಅವನೂ ಒಬ್ಬ ಐಪಿಎಸ್ ಆಫೀಸರ್ ಎಂದು ನನಗೆ ಗೊತ್ತು. ನಾನು ಮೊನ್ನೆ ಗಂಗಾವತಿಗೆ ಹೋಗಿದ್ದೆ. ಅಲ್ಲಿ ಹೇಳುತ್ತಾ ಇದ್ದರು, ಆಫೀಸರ್ಸ್ ಇಂಟರ್‌ಫಿಯರ್ ಆಗುತ್ತಾರೆ, ಸುಮ್ಮನೆ ಡೆಲಿಗೇಷನ್ಸ್ ಹೋಗುತ್ತಾರೆ, ಅವರನ್ನು ಸೇವ್ ಮಾಡಿ, ಇವರನ್ನು ಸೇವ್ ಮಾಡಿ ಎಂದು ಹೋಗುತ್ತಾರೆ. ಅಂಥಾದ್ದೆಲ್ಲಾ ಆಗಬಾರದು, ನಿಜ. ಅವರು ಎನ್‌ಕ್ವೈರಿ ಮಾಡಲಿ, ಅವರನ್ನು ಬಿಟ್ಟುಬಿಡಿ. ಈಗ ನಾನೇ ನೋಡಿದೆ. ಇಷ್ಟು ಹೊತ್ತು ಪೇಪರ್ ಓದುತ್ತಿದ್ದೆ. ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಕೆಲವು ಆಫೀಸರ್ಸ್ ಜೊತೆಯಲ್ಲಿ ಡಿಸ್ಕಸ್ ಮಾಡಿದೆ. ಅವರು ಹೇಳುತ್ತಾ ಇದ್ದರು, ಏನೂ ಇಲ್ಲ, ಯಾರ ಬಗ್ಗೆ ಏನೂ ಇಲ್ಲ ಎಂದು ಹೇಳುತ್ತಾ ಇದ್ದರು. ಇವತ್ತು ಪೇಪರಿನಲ್ಲಿ ನೋಡಿದರೆ ಕಮೀಷನರ್ ಬಾಲಕೃಷ್ಣರಾಯರೇ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಆ ಸ್ಟೇಟ್‌ಮೆಂಟ್ ಪ್ರಕಾರ ಡಿಸಿಪಿ. ನಾರಾಯಣ್ ಕೆಲವು ಮಾಹಿತಿಗಳನ್ನು ಬಚ್ಚಿಟ್ಟಿದ್ದಾರೆ, ಅದರಿಂದ ಅವರನ್ನು ಇನ್‌ವಾಲ್ವ್ ಮಾಡಬೇಕಾಗಿದೆ ಎಂದು ಈ ರೀತಿ ಲಂಕೇಷ್ ಪತ್ರಿಕೆಯನ್ನು ಕೈಯಲ್ಲಿ ಇಟ್ಟುಕೊಂಡು ಹೇಳುತ್ತಾ ಇದ್ದೇನೆ ಸ್ವಾಮಿ.

೬-೦೦ ಪಿ.ಎಂ.

ಈಗ ಪರಿಸ್ಥಿತಿ ಹೇಗೆ ಇದೆ.

ಅಧ್ಯಕ್ಷರು.—ಆಯಿತು, ನೀವು ಮುಕ್ತಾಯ ಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ನಾನು ಹೇಳುವುದು ದಯವಿಟ್ಟು ಉಪಮುಖ್ಯರೂ ಮುಖ್ಯಮಂತ್ರಿಗಳಾಗಲೀ, ಇನ್ನೊಬ್ಬರಾಗಲೀ, ಇನ್‌ಕ್ವೈರಿ ಆಗುತ್ತಿರುವುದರಿಂದ ಇದರಲ್ಲಿ ಇಂಟರ್‌ಫಿಯರ್ ಆಗುವುದು ಬೇಡ, ಇದರ ಬಗ್ಗೆ ಮಾತನಾಡುವುದು ಬೇಡ. ಅವರಷ್ಟಕ್ಕೆ ಅವರನ್ನು ಬಿಡಿ, ಅವರು ಏನಾದರೂ ಮಾಡಿಕೊಳ್ಳಲಿ, ತಪ್ಪಿತಸ್ಥರು ಎಂದು ಹೇಳುವುದಕ್ಕೆ ಅವರದ್ದೇ ಏಜನ್ಸಿ ಇದೆ. ಸೆಸೆನ್ಸ್ ಜಡ್ಜಸ್ ಇದ್ದಾರೆ. ನಾವು ಈಗಲೇ ಅವರನ್ನು ತಪ್ಪಿತಸ್ಥರು ಎಂದು ಹೇಳುವುದು ಬೇಡ. ನಮ್ಮ ಡಿಬೇಟ್ ಸ್ಕೋಪನ್ನು ಲಿಮಿಟ್ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ಕೇಳಿ ನಾನು ಅಕಸ್ಮಾತ್ ಇದನ್ನು ನಿಲುವಳಿ ಸೂಚನೆ ಎಂದು ಅಲೋ ಮಾಡಿದ್ದರೆ ಎರಡು ತಾಸು ಕೊಡಬೇಕಾಗಿತ್ತು.

> "The Speaker may, if he is satisfied that there has been adequate debate, put the question at 5 P.M. or at such other hour not being less than two hours from the time of commencement to the debate."

ಅಡ್ಜರ್ನ್‌ಮೆಂಟ್ ಮೋಷನ್ ಆಗಿದ್ದರೆ, ಎರಡು ತಾಸಿನಂತೆ ಹೆಚ್ಚಿಗೆ ಕೊಡುವುದಕ್ಕೆ ಬರುತ್ತಿರಲಿಲ್ಲ, ನಾನು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಟ್ಟಿಲ್ಲ. ನಾನು ನಿಯಮ ೬೮ರ ಪ್ರಕಾರ ಅವಕಾಶ ಕೊಟ್ಟಿದ್ದೇನೆ, ಅದರ ಪ್ರಕಾರ,

> "The Speaker may allot two sittings in a weak on which such matters may be taken up for discussion and allow such time for discussion not exceeding one hour at or before the end of the sitting as he may consider."

ಆದುದರಿಂದ ಇದಕ್ಕೆ ಒಂದು ತಾಸು ಕೊಡಬೇಕಾಗುತ್ತದೆ. ಆದರೂ ಕೂಡ ಎರಡೂವರೆ ತಾಸು ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಈಗ ಬಂಗಾರಪ್ಪನವರು ಇಲ್ಲ ಅವರ ಬದಲಿಗೆ ಶ್ರೀನಿವಾಸ್ ಅವರು 10 ನಿಮಿಷ ಮಾತನಾಡಲಿ. ನಂತರ ಮುಖ್ಯಮಂತ್ರಿಗಳು ಬಂದ ಕೂಡಲೇ ರಿಪ್ಲೈ.

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ, ತಾವು ರೂಲ್ಸ್ ಪ್ರಕಾರ ಹೋಗಬೇಕಾಗುತ್ತದೆ.

ಶ್ರೀ ಕೆ.ಬಿ. ಶಾಣಪ್ಪ.—ಸ್ವಾಮಿ ನಾನು ಈ ಅಧಿವೇಶನದಲ್ಲಿ ಮಾತನಾಡಬೇಕೋ ಬೇಡವೋ? ನಾನು ಮೊದಲಿನಿಂದಲೂ ಕೇಳುತ್ತಿದ್ದೇನೆ. ನೀವು ರೂಲ್ಸ್ ಬಿಟ್ಟು ಹೋಗುತ್ತಿದ್ದೀರಿ.

ಅಧ್ಯಕ್ಷರು.—ನಾನು ರೂಲ್ಸ್ ಬಿಟ್ಟು ಹೋಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಈಗ ಶ್ರೀನಿವಾಸ್ ಅವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಿ.ಪಿ.ಐ. ನವರಿಗೂ ಅವಕಾಶ ಕೊಡಬೇಕು.

ಶ್ರೀ ಯು. ಭೂಪತಿ.—ನಾವು ಕೂಗಾಡುವುದಿಲ್ಲವೆಂದು ನಮಗೆ ಇಂಪಾರ್ಟೆನ್ಸ್ ಕೊಡದೇ ಇದ್ದರೆ ತಪ್ಪಾಗುತ್ತದೆ. ತಾವು ನಮಗೆ ಅವಕಾಶ ಕೊಡದೇ ಇದ್ದರೆ. ನಾವು ಕೂಗಾಡಬೇಕಾಗುತ್ತದೆ.

ಅಧ್ಯಕ್ಷರು.—ನಿಮಗೂ ಕೊಡುತ್ತೇನೆ

ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ತುಂಬ ಗಂಭೀರವೂ ಹಾಗೂ ಸೂಕ್ಷ್ಮವೂ ಆದ ಒಂದು ವಿಚಾರದ ಬಗ್ಗೆ ನಾವು ಮಾತನಾಡುತ್ತಿದ್ದೇವೆಂಬ ಪ್ರಜ್ಞೆಯಿಂದ ನಾನು ತಮ್ಮ ಮುಂದೆ ನಿಂತಿದ್ದೇನೆ ನಾನು ಪೂರ್ವಭಾವಿಯಾಗಿ ಒಂದು ವಿಷಯವನ್ನು ಸ್ಪಷ್ಟಪಡಿಸಲಿಕ್ಕೆ ಬಯಸುವುದೇನೆಂದರೆ, ನಾವು ಪ್ರಾಸಿಕ್ಯೂಟರ್ಸ್ ಅಲ್ಲ ಅಥವಾ ಸಿ. ಬಿ. ಎ. ವಕೀಲರೂ ಅಲ್ಲ ಅಥವಾ ಕೇಂದ್ರ ಸರ್ಕಾರದ ಪ್ರತಿನಿಧಿಗಳೂ ಅಲ್ಲ ಇಲ್ಲಿ ಬೇರೆ ಬೇರೆ ಆಗಿ ಹೋದ, ಇರುವ ಸರ್ಕಾರದ ಪ್ರತಿನಿಧಿಗಳೂ ಅಲ್ಲ ನಾವೆಲ್ಲರೂ ಕೂಡ ಕರ್ನಾಟಕ ಜನತೆಯಿಂದ ಆರಿಸಲ್ಪಟ್ಟಿರತಕ್ಕ ಪ್ರತಿನಿಧಿಗಳು ಅವರ ಭಾವನೆಗಳನ್ನು ವಿಚಾರಗಳನ್ನು ಪ್ರತಿಬಿಂಬಿಸಿ ಮಾತನಾಡುತ್ತಿದ್ದೇವೆಯೇ ಹೊರತು, ಯಾರ ಪರವಾಗಿ. ಯಾರ ವಿರುದ್ಧವಾಗಿಯೂ ಮಾತನಾಡತಕ್ಕ ಪ್ರಶ್ನೆ ಇಲ್ಲ. ಇಲ್ಲಿ ನಡೆಯುತಕ್ಕ ಚರ್ಚೆಯನ್ನು ಎರಡು ಭೂತಗಳು ಕಾಡುತ್ತಿವೆ. ರಶೀದ್‌ನ ಸಾವನ್ನು ಅಸ್ವಾಭಾವಿಕ ಸಾವು ಎಂದು ಕರೆಯಿರಿ, ಕೊಲೆ ಎಂದು ಕರೆಯಿರಿ, ಅವನ ಸಾವು ಚರ್ಚೆಯನ್ನು ಬಾಧಿಸುತ್ತದೆ ಕಾಡುತ್ತೆ. ಅದರ ಮೇಲೆ ಚರ್ಚೆ ಇಲ್ಲ, ಯಾವುದೂ ಇಲ್ಲ, ನೀವು ರೂಲ್ಸ್ ತೆಗೆದುಕೊಳ್ಳಿ, ಕಾನ್‌ಸ್ಟಿಟ್ಯೂಷನ್ ತೆಗೆದುಕೊಳ್ಳಿ ಏನೇ ತೆಗೆದುಕೊಂಡರೂ ಮಾನ್ಯ ಶ್ರೀ ಜಾಲಪ್ಪನವರು ಇಲ್ಲಿ ಕೊಟ್ಟಿರತಕ್ಕ ಹೇಳಿಕೆ ಕೂಡ ಈ ಚರ್ಚೆಯನ್ನು ಕಾಡಿಯೇ ಕಾಣುತ್ತದೆ. ಏನೇ ಮಾಡಿದರೂ ಈ ಚರ್ಚೆಯಿಂದ ಅದಕ್ಕೆ ಸಂಪೂರ್ಣವಾದ ಬ್ರೇಕ್ಸ್ ಕೊಡುವುದಕ್ಕೆ ಯಾರಿಂದ ಎಷ್ಟೇ ಶಕ್ತಿ ಇದ್ದರೂ ಸಾಧ್ಯವಾಗುವುದಿಲ್ಲ. ಆದರೆ ಈ ಮನೆಯಲ್ಲಿ ವ್ಯಕ್ತಪಡಿಸಿರತಕ್ಕ ಭಾವನೆಗಳನ್ನು ಗೌರವಿಸಿ ಅದರ ಕಡೆಗೆ ಕಣ್ಣನ್ನು ಹಾಯಿಸದೆ ನನ್ನ ವಿಚಾರಗಳನ್ನು ಇಡುವುದಕ್ಕೆ ಬಯಸುತ್ತೇನೆ. ಈ ಚರ್ಚೆಯ ಉದ್ದೇಶ, ನಮಗೆ ಈ ಸದನದಲ್ಲಿ ಎರಡು ಕಾಳಜಿ ಬಹಳ ಮುಖ್ಯವಾಗಿರಬೇಕು, ಒಂದು ಇದು ಯಾವುದೇ ಕಾರಣ ಅಂತ ಹೇಳಿ ಕೊಲೆ ಅಂತ ಕರೆಯಿರಿ, ಜನರ ಮನಸ್ಸಿನಲ್ಲಿ ದೊಡ್ಡ ಶಂಕೆ ಉತ್ಪನ್ನವಾಗಿದೆ. ಆ ದೃಷ್ಟಿಯಿಂದ ವೈಯಕ್ತಿಕವಾಗಿ ಈ ಪ್ರಕರಣದಲ್ಲಿ ಸತ್ಯ ಏನು ಎಂಬುದು ಹೊರಗೆ ಬರಬೇಕು. ಸಾಧಾರಣವಾಗಿ ಇಂತಹ ಕೊಲೆಗಳು ನಮ್ಮ ಆಸುಪಾಸಿನಲ್ಲೇ ಆದರೆ ನಮ್ಮ ಮನಸ್ಸು ಏನು ಹೇಳುತ್ತದೆ ಎಂದರೆ ಕೊಲೆ ಯಾರು ಮಾಡಿದರು ಎಂದು ಗೊತ್ತಾಗಬೇಕು. ಕೊನೆಗೆ ಶಿಕ್ಷೆ ಆಗುವುದು ಬಿಡುವುದು ಯುಕ್ತ ಸ್ಥಿತಿ ಕೊನೆಗೆ ನಾವೇ ಹೋಗ್ಲೀ ಬಿಡ್ಲೀ ಅಂತ ಹೇಳಬಹುದು. ಆದರೆ ಯಾರು ಮಾಡಿದರು ? ಹೇಗೆ ಆಯಿತು ಎಂಬುದನ್ನು ಮನುಷ್ಯನಾದವನನ್ನು ಬಾಧಿಸತಕ್ಕ ವಿಚಾರ. ಯಾರೇ ಆಗಲಿ ಇದರಿಂದ ಬಿಡುಗಡೆಯಾಗುವುದಕ್ಕೆ ಸಾಧ್ಯವಿಲ್ಲ, ಆದ್ದರಿಂದ ಎಲ್ಲಿಯವರೆಗೆ ಈ ಪ್ರಕರಣದ ಸತ್ಯಾಂಶವನ್ನು ಹೊರಗೆಡುವುದಿಲ್ಲವೋ ಅಲ್ಲಿಯವರೆಗೆ ನಾವು ಶಾಸಕರಾಗಿ ಸರ್ಕಾರವಾಗಿ ಜನತೆಗೆ ನಾವು ಮಾಡಬೇಕಾದ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ನಮ್ಮಿಂದ ಲೋಪವಾಗುತ್ತದೆ, ನಮ್ಮ ಶಕ್ತಿ ಸಾಲದೆಯೂ ಇರಬಹುದು. ಅಥವಾ ಉದ್ದೇಶವೂ ಇರಬಹುದು. ದುರುದ್ದೇಶವೂ

ಇರಬಹುದು. ಒಟ್ಟಿನಲ್ಲಿ ದೊಡ್ಡ ಲೋಪವಂತೂ ಆಗುತ್ತದೆ. ಅತಿಮುಖ್ಯವಾದ ಕಾಳಜಿ ಏನು ಎಂದರೆ, ಕೊಲೆಯಾಗಲಿ, ಸುಲಿಗೆ ಆಗಲಿ ಏನೇ ಆಗಲಿ, ಅದನ್ನು ನೋಡಿಕೊಳ್ಳುವುದಕ್ಕೆ ಸರ್ಕಾರ ಇದೆ, ಪತ್ತೆ ಮಾಡುವುದಕ್ಕೆ ಸಹ ಪೋಲೀಸ್ ಇದೆ. ಒಂದು ಪೋಲೀಸ್ ಇಲ್ಲದಿದ್ದರೆ ಇನ್ನೊಂದು ಪೋಲೀಸ್ ಇದೆ. ಲೋಕಲ್ ಪೋಲೀಸ್ ಇಲ್ಲದಿದ್ದರೂ ಸಿ. ಒ. ಡಿ. ಇದೆ. ಸಿ.ಒ.ಡಿ. ಇಲ್ಲದಿದ್ದರೂ ಸಿ.ಬಿ.ಐ ಇದೆ. ಇದರ ಬಗ್ಗೆ ಸಮಾಜದ ಹಾಗೂ ಜನರ ಸ್ವಯತ್ತತೆಯನ್ನು ಕಾಪಾಡುವುದಕ್ಕಿಂತ ಮುಖ್ಯವಾಗಿ ಈ ಪ್ರಕರಣ ಪತ್ತೆಯಾಗುವಂಥಹದ್ದು ಬಹಳ ಮುಖ್ಯವಾದ ವಿಚಾರ. ಜಗತ್ತಿನಲ್ಲಿ ೧೦೦ಕ್ಕೆ ೧೦೦ ಕೇಸುಗಳು ಪತ್ತೆಯಾಗುವುದೇ ಇಲ್ಲ. ಒಂದೊಂದು ಸಾರಿ ಕೇಸುಗಳು ಪತ್ತೆಯಾದರೂ ಶಿಕ್ಷೆ ಕೊಡುವುದಕ್ಕೆ ಸಾಧ್ಯ ಇಲ್ಲದಂತಾಗುತ್ತದೆ ಆ ರೀತಿ ಕೇಸುಗಳು ಕೋರ್ಟಿನಲ್ಲಿ ಬೇಕಾದಷ್ಟು ಬರುತ್ತವೆ. Where a Judge is morally convinced legally there will be no proof. ಇವನೇ ಕೊಲೆ ಮಾಡಿದ್ದಾರೆಂದು ಜಡ್ಜಿಗೆ ಅನ್ನಿಸಿದರೂ ಅವನಿಗೆ ಶಿಕ್ಷೆಯಾಗುವುದಕ್ಕೆ ಬೇಕಾದಂತಹ ಪುರಾವೆಗಳು ಇಲ್ಲದೇ ತಪ್ಪಿತಸ್ಥನಿಗೆ ಶಿಕ್ಷೆಯಾಗದಿರುವ ಕೇಸುಗಳು ಎಷ್ಟೋ ಇವೆ. ಅದೇ ರೀತಿ Where the Judge is legally convinced that he is a murderer and there is overwhelming proof, he is not morally convinced. ಇವನು ಮಾಡಿಲ್ಲವೆಂದು ಅನ್ನಿಸಿದರೂ, when there is over whelming proof. ಏನೂ ಮಾಡುವುದಕ್ಕಾಗುವುದಿಲ್ಲ. ಇದು ನಮ್ಮ ಇಡೀ ವ್ಯವಸ್ಥೆಯಲ್ಲಿ ಕಾನೂನಿನಲ್ಲಿರತಕ್ಕ ಮೂಲಭೂತ ದೋಷ. ಇದಕ್ಕಿಂತ ಹೆಚ್ಚಿನದನ್ನು ಇನ್ನೂ ಯಾರೂ ತಯಾರೂ ಮಾಡಿಲ್ಲ, ಮೆಕಾಲೆಯವರಿಗಿಂತ ಉತ್ತಮವಾದ ಸಿಸ್ಟಂನ್ನು ಕೊಡುವಂತಿದ್ದರೆ ನಾವು ಅದಕ್ಕೆ ಹೋಗಬಹುದಿತ್ತು. ಆದರೆ ನಾವು ಇದೇ ಕಾನೂನನ್ನು ಇಟ್ಟುಕೊಂಡೇ ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡೇ ಚರ್ಚೆ ಮಾಡುತ್ತಿದ್ದೇನೆ. ನಿಜ ಜಾಲಪ್ಪನವರು ರಾಜೀನಾಮೆ ಕೊಟ್ಟ ಮೇಲೂ ಇಲ್ಲಿ ಚರ್ಚೆ ಮಾಡತಕ್ಕ ಅಗತ್ಯ ಬೀಳುತ್ತಿರಲಿಲ್ಲ. ಯಾವಾಗ ಬೀಳುತ್ತಿರಲಿಲ್ಲ. ಮಾನ್ಯ ವೆಂಕಟರಾಮಯ್ಯನವರು ಮತ್ತು ಮಾನ್ಯ ಯಡಿಯೂರಪ್ಪನವರು ಹೇಳಿರುವ ಮಾತು ನಿಜ. ನಾವು ಇವತ್ತು ಇಲ್ಲಿ ಯಾವುದೋ ಪ್ರಾಸಿಕ್ಯೂಟರ್ ತರಹ ಮಾತನಾಡುವುದಕ್ಕೆ ಮೊದಲು ಪ್ರಾರಂಭ ಮಾಡಿದ್ದು ಅಲ್ಲಿ ಯಾರಿಗೆ ಜವಾಬ್ದಾರಿ ಇದೆಯೋ ಅವರೇ ಡಿಫೆನ್ಸ್ ಕೌನ್ಸಿಲ್ ತರಹ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ, ಬೇರೆಯವರು ಎಲ್ಲರೂ ಪ್ರಾಸಿಕ್ಯೂಟರ್ಸ್ ಆಗಿಬಿಡುತ್ತಾರೆ, ಏನೂ ಮಾಡುವುದಕ್ಕಾಗುವುದಿಲ್ಲ. ಒಬ್ಬರು ಒಂದು ವೇಷ ಹಾಕಿಬಿಟ್ಟರೆ ಉಳಿದವರು ಹಾಕೇ ಬಿಡುತ್ತಾರೆ, ಏನು ಮಾಡುವುದಕ್ಕಾಗುವುದಿಲ್ಲ. ಇದು ಒಂದು ಅಸ್ತಿತ್ವದ ದೌರ್ಬಲ್ಯ. ಒಬ್ಬರು ಒಂದು ಆಗಿಬಿಟ್ಟರೆ, ಇನ್ನೊಬ್ಬ ಅಪೇಕ್ಷೆ ಪಡಲಿ, ಬಿಡಲಿ, ಇನ್ನೊಬ್ಬ ಹಾಕೇಬಿಡುತ್ತಾನೆ. ನೀವು ಸರ್ಕಾರ ಆಗಿಬಿಟ್ಟರೆ ನಾವೊಬ್ಬರೆ ಅಪೋಜಿಸನ್. ಅವರು ಸರ್ಕಾರವಾದದ್ದು ಏನು ತಪ್ಪು ? ನಾವು ಅಪೋಜಿಸನ್ ಆದದ್ದು ಏನು ತಪ್ಪು? ಅವರು ಮೊದಲು ಹೇಳಿದ್ದರಿಂದ ಕೆಲವು ವಿಚಾರಗಳು, ಕೆಲವು ಸ್ವರೂಪಗಳು ಪ್ರಾಪ್ತವಾಗುತ್ತವೆ. ನಮಗೆ ಬೇಕಾಗಿಯೇ ಇರಲಿಲ್ಲ. ಜಾಲಪ್ಪನವರು ಯಾವ ಮಾತುಗಳನ್ನು ಹೇಳದೇ ಹೋಗಿದ್ದಿದ್ದರೆ, ಅದಕ್ಕಿಂತ ಮುಖ್ಯವಾಗಿ ಜಾಲಪ್ಪನವರು ಕೆಲವು ಮಾತುಗಳನ್ನು ಹೇಳಿದರೂ, ನಾವು ಅದರ ಬಗ್ಗೆ ಹೆಚ್ಚು ಹಿಸುಕುವುದಕ್ಕೆ ತಯಾರಾಗಿಲ್ಲ. ಒಬ್ಬ ಮನುಷ್ಯ ತಪ್ಪು ಮಾಡಿರಲಿ, ತಪ್ಪು ಮಾಡಿಲ್ಲದೇ ಇರಲಿ ಇವತ್ತು ಅವರು ಇರುವ ಪರಿಸ್ಥಿತಿಯಲ್ಲಿ ಒಳಗೆ ಗೊಂದಲ ಉಂಟಾಗತಕ್ಕಂತಹದ್ದು ಸಹಜ ಒಂದು ಮಾತನ್ನು ಹೆಚ್ಚು ಹೇಳಬಹುದು. ಒಂದು ಮಾತನ್ನು ಕಡಿಮೆ ಹೇಳಬಹುದು. ಅದನ್ನೇ ದೊಡ್ಡದು ಮಾಡುವುದಕ್ಕೆ ನಾವು ತಯಾರಿಲ್ಲ. ಆದರೆ ಅವರಿಗಿಂತ ಹೆಚ್ಚು ಜವಾಬ್ದಾರಿಯನ್ನು ಹೊತ್ತಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳು ಕೆಲವಾರು ಮಾತುಗಳನ್ನು ಏನು ಹೇಳಿದ್ದಾರೆ ? ನಾವು ಇವತ್ತು ನಿಷ್ಪಕ್ಷಪಾತವಾಗಿ ತನಿಖೆಯಾಗಲಿ ನಾವೆಲ್ಲ ಹೇಳುತ್ತಿದ್ದೇವೆ, ಅದು ಆಗುವ ಸಾಧ್ಯತೆಯನ್ನು ತೀರ ಕಡಿಮೆ ಮಾಡಿವೆ. ಅಥವಾ ಅದಕ್ಕೆ ನಾವು ಆತಂಕವನ್ನು ಒಡ್ಡಿದ್ದೇವೆಂದಾಗುತ್ತದೆ. ಆದರೆ ಸಿ.ಬಿ.ಐ.ನವರು ಇದನ್ನು ವಿಚಾರಿ ಸತ್ಯವನ್ನು ಕಂಡು ಹಿಡಿಯಬಹುದು. ಅವರು ಯಾವ ದಯಾ ದಾಕ್ಷಿಣ್ಯದಲ್ಲಿಲ್ಲ, ಅದೊಂದು ಸ್ವತಂತ್ರ ಸಂಸ್ಥೆ. ಆದರೆ ನಮಗೆ ಈ ಸದನದಲ್ಲಿ ಒಂದು ಜವಾಬ್ದಾರಿ ಇದೆ. ಸರ್ಕಾರದಲ್ಲಿ ಜವಾಬ್ದಾರಿ ಸ್ಥಾನವನ್ನು ಹೊತ್ತಿರತಕ್ಕ ಜನಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದ್ದಾರೆಯೋ ಅಥವಾ ಇಲ್ಲವೋ ಅಂತ ಕೇಳತಕ್ಕ ಅಧಿಕಾರ ಈ ದನಕ್ಕಿದೆ, ನನಗೂ ಇದೆ, ನಿಮಗೂ ಇದೆ. ಅದಷ್ಟೇ ಜವಾಬ್ದಾರಿಯನ್ನು ನಾವು ನಿರ್ವಹಿಸುವುದಕ್ಕಾಗಿ ಈ ವಿಷಯವನ್ನು ಕೇಳುತ್ತಿದ್ದೇವೆಯೋ ಹೊರತು, ಇಲ್ಲಿಗೆ ಜಾಲಪ್ಪನವರು ರಾಜೀನಾಮೆ ಕೊಟ್ಟಮೇಲೂ ಕೆಳಕ್ಕೆ ಬಿದ್ದವರ ಮೇಲೆ ಕಲ್ಲು ಹೊಡೆಯಬೇಕು ಎಂಬ ಮನೋ

ವಿಕಾರದಿಂದಲ್ಲ. ನಮಗೆ ಆ ಇಚ್ಛೆಯೂ ಇರಲಿಲ್ಲ. ಅವರು ರಾಜೀನಾಮೆ ಕೊಟ್ಟಿದ್ದಾರೆ, ಬಿಟ್ಟುಬಿಡೋಣ ಎಂಬುದಾಗಿ ಇವತ್ತೂ ನಮ್ಮ ಮನಸ್ಸಿನಲ್ಲಿ ಈ ನಿಮಿಷದಲ್ಲೂ ಇತ್ತು. ಆದರೆ ಇದಕ್ಕಾಗಿಯೇ ನಮ್ಮ ಕರ್ತವ್ಯವನ್ನು ಲೋಪ ಮಾಡುವುದಕ್ಕಾಗುವುದಿಲ್ಲ. ಯಾರು ಇದರ ಹೆಸರು ತಂದವರು ? ಇದರಲ್ಲಿ ರಾಜಕೀಯ ಆಯಾಮಗಳನ್ನು ಆರೋಪಿಸಿದವರು ಯಾರು ? ಇದರಲ್ಲಿ ಕೇಂದ್ರ ಸರ್ಕಾರದ ರಾಜಕೀಯ ಇದೆ ಎಂಬುದಾಗಿ ಹೇಳಿದವರು ಯಾರು ? ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀಮಾನ್ ಬೂಟಾಸಿಂಗ್‌ರವರ ಹೆಸರನ್ನು ತಂದವರು ಯಾರು ? ಅದನ್ನು ತಂದಿರತಕ್ಕವರು ನಾವಲ್ಲ. ಸಿ.ಬಿ.ಐ.ನವರಿಗೆ ಇಂಪಾರ್ಷಿಯಾಲಿಟಿ ಇಲ್ಲ ಎಂದು ಹೇಳಿದವರು ಯಾರು ? ಈ ರೀತಿ ಹಲವಾರು ರೀತಿಯಲ್ಲಿ ಒಂದೊಂದೇ ಹೆಜ್ಜೆಯನ್ನು ಇಟ್ಟುಕೊಳ್ಳುತ್ತಾ ಬಂದಿದ್ದಾರೆ. ಇನ್ವೆಸ್ಟಿಗೇಷನ್ ಆಫೀಸರ್‌ನ್ನು ಚೇಂಜ್ ಮಾಡಿದರು ಎಂದು ಹೇಳಿದ್ದಾರೆ. ಮಾಡುತ್ತಾರೆ. ಏಕೆ ನೀವು ಮಾಡುವುದಿಲ್ಲವೆ? ಭದ್ರಾವತಿಯ ನೂರ್‌ಜಹನ್ ಪ್ರಕರಣದಲ್ಲಿ ತಪ್ಪು ಎದುರಿಗೇ ಇಲ್ಲಿ ನಾನು ಗಲಾಟೆ ಮಾಡಿದ ಮೇಲೆ ಸಿ.ಓ.ಡಿ. ವಿಚಾರಣೆಗೆ ಹೋಯಿತು. ಅದು ಇವತ್ತಿಗೂ ಏನೂ ತೀರ್ಮಾನ ಹೊರಗೆ ಬರಲಿಲ್ಲ. ಒಬ್ಬ ಅಧಿಕಾರಿಗೆ ೫ ತಿಂಗಳು ಇನ್ವೆಸ್ಟಿಗೇಷನ್ ಕೆಲಸ ಮಾಡಿದರು. ಅವರನ್ನು ಬದಲಾವಣೆ ಮಾಡಿದ್ದಾರೆ. ಏಕೆ ಮಾಡಿದಿರಿ ಅಂತ ನಾನು ಕೇಳಿದೆ. ಅದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ಇನ್ನೊಬ್ಬ ಅಧಿಕಾರಿ ಬಂದು ಅವನೇನು ಕಡಿದಿಲ್ಲ. ಅದರೂ ಕೂಡ ನಾನು ಬೋನಫೈಡಿಯನ್ನು ಕೊಶ್ಚನ್ ಮಾಡುವುದಕ್ಕೆ ತಯಾರಿಲ್ಲ. ಅಧಿಕಾರಿಗಳನ್ನು ಹಲವಾರು ಸಾರಿ ಬದಲಾವಣೆ ಮಾಡಬಹುದು. ಎಲ್ಲಿ ಅಧಿಕಾರಿಗಳ ಮೇಲೆ ಅನುಮಾನ ಬಂದಾಗ ಬದಲಾವಣೆ ಮಾಡಬಹುದು. ಒಬ್ಬ ಅಧಿಕಾರಿಯ ಮೇಲೆ ಈ ಪ್ರಕರಣವನ್ನು ತನಿಖೆ ಮಾಡುವ ಯೋಗ್ಯತೆ ಇಲ್ಲ ಎಂಬುದಾಗಿ ಕಂಡು ಬಂದಾಗ ಬದಲಾವಣೆ ಮಾಡಬಹುದು. ಅಥವಾ ಅಧಿಕಾರಿಗಳಿಗೆ ಈ ಪ್ರಕರಣದಲ್ಲಿ ಇನ್ವೆಸ್ಟಿಗೇಷನ್ ಮಾಡುವುದಕ್ಕೆ ಯೋಗ್ಯತೆ ಇಲ್ಲವೆಂದು ಗೊತ್ತಾದಾಗ ಅವನನ್ನು ಆಗ ಬದಲಾವಣೆ ಮಾಡಬಹುದು. ಈ ರೀತಿ ಯಾವುದೋ ಕಾರಣಕ್ಕಾಗಿ ಬದಲಾವಣೆ ಮಾಡಿದ್ದಾರೆ. ಆ ರೀತಿ ಮಾಡಿದ ಕೂಡಲೇ ಇಂತಹದ್ದೇ ಕಾರಣಕ್ಕಾಗಿ ಮಾಡಿದ್ದಾರೆಂದು ಕೇರಳ, ಕನ್ನಡ ಇದನ್ನೆಲ್ಲಾ ತರತಕ್ಕಂತಹದ್ದು ಸರಿಯಲ್ಲ. ಸರ್ಕಾರಕ್ಕೆ ಇದು ಭೂಷಣ ತರತಕ್ಕ ವಿಚಾರವೂ ಅಲ್ಲ. ಅದೇ ರೀತಿ ಎವಿಡೆನ್ಸ್. ಸಿ.ಓ.ಡಿ ಪಿಂಪ್ಸ್, ಡಾಕುಗಳು ಇಂತಹವರನ್ನೆಲ್ಲಾ ಪ್ರಶ್ನೆ ಮಾಡಿ ಎವಿಡೆನ್ಸ್ ತೆಗೆದುಕೊಳ್ಳುತ್ತಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಮರ್ಡರ್ ಮಾಡತಕ್ಕಂತಹವರೆಲ್ಲಾ ಸಂಭಾವಿತರೆ, ಅವರು ಪಂಚಾಯಿತಿ ಇಟ್ಟುಕೊಂಡು ಮರ್ಡರ್ ಮಾಡುತ್ತಾರೆಯೇ ? ಇಲ್ಲಿ ನಾನೂ ಜೆ. ಹೆಚ್. ಪಟೇಲ್‌ರವರು ಹೋಗಿ ಎವಿಡೆನ್ಸ್ ಕೊಡಬೇಕು ಅಂದರೆ ಕೊಡುವುದಕ್ಕಾಗುತ್ತದೆಯೇ, ಗೊತ್ತಿದ್ದರೆ ತಾನೆ ಎವಿಡೆನ್ಸ್ ಕೊಡುವುದು. ಇಲ್ಲದಿದ್ದರೆ ಹೇಗೆ ಎವಿಡೆನ್ಸ್ ಕೊಡುವುದಕ್ಕಾಗುತ್ತದೆ ? ಇಲ್ಲಿ ಯಾರ್ಯಾರು ಸಂಬಂಧಪಟ್ಟಿದ್ದಾರೋ ಅವರೂ ಮಾತ್ರ ಅದಕ್ಕೆ ಬರುತ್ತಾರೆ. ಈಗ ಎಷ್ಟೋ ಮರ್ಡರ್ ಕೇಸುಗಳಲ್ಲಿ ಎವಿಡೆನ್ಸ್ ಕೊಟ್ಟಿರುವವರೆಲ್ಲಾ ಬಹಳ ಸಂಭಾವಿತರು ಎಂದು ಹೇಳಬಹುದೆ ? ಸುಮ್ಮನೆ ಏಕೆ ಹೇಳಬೇಕು ? ಇದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿಲ್ಲವೆ ? ಬೇಕಾದಷ್ಟು ಗೊತ್ತಿದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅದನ್ನು ಅವರನ್ನೇ ಕೇಳಬೇಕು.

ಒಬ್ಬ ಮಾನ್ಯ ಸದಸ್ಯರು.—ಅವರು ಈಗ ಸದನದಲ್ಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ಅವರು ಇಲ್ಲ. ಅವರೇ ಬರುತ್ತಾರೆ. ಹೇಳುತ್ತಾರೆ. ಮರ್ಡರ್ ಕೇಸುಗಳು ಯಾವ ರೀತಿ ಇನ್ವೆಸ್ಟಿಗೇಷನ್ ಆಗುತ್ತವೆ ಎಂಬುದು ತಮಗೂ ಗೊತ್ತಿರಬಹುದು. ೫ ತಿಂಗಳು ಏಕೆ ಸುಮ್ಮನೆ ಕುಂತುಕೊಂಡರು ? ತಮಗೆ ಗೊತ್ತಿದ್ದ ಹಾಗೆ ಒಂದೊಂದು ಸಾರಿ ಏನೂ ಎವಿಡೆನ್ಸ್ ಸಿಕ್ಕುವುದಿಲ್ಲ. ಕೊನೆಯವರೆಗೂ ಈ ಕೇಸ್‌ನಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲವೆಂಬ ತೀರ್ಮಾನಕ್ಕೆ ಬಂದು ಹೋಟೆಲ್‌ನಲ್ಲಿ ಕಾಫಿ ಕುಡಿಯುತ್ತಾ ಕುಳಿತುಕೊಂಡಿರುವಾಗ ಒಂದು ಕ್ಲೂ ಸಿಕ್ಕುತ್ತದೆ. ಅಲ್ಲಿಂದ ಎಳೆಯುತ್ತಾ ಎಳೆಯುತ್ತಾ ಎಲ್ಲಿಗೋ ಹೋಗಿ ನಿಲ್ಲುತ್ತದೆ. ಈಗ ನಮ್ಮಲ್ಲಿ ವರ್ತಕರು ಕೆಲವರು ಏನು ಹೇಳುತ್ತಾರೆಂದರೆ, ನನ್ನ ಹತ್ತಿರ ಒಂದು ರೂಪಾಯಿ ಇದ್ದರೆ ಒಂದು ಲಕ್ಷ ರೂಪಾಯಿಗಳನ್ನಾಗಿ ಹೇಗೆ ಮಾಡಬಹುದು ಎಂಬುದು ಗೊತ್ತಿದೆ. ಆದರೆ ಒಂದು ರೂಪಾಯಿ ಸಿಕ್ಕದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಏನೇ ಪ್ರಯತ್ನ ಮಾಡಿದರೂ ಒಂದು ರೂಪಾಯಿ ಕೂಡ ಇಲ್ಲದಿದ್ದರೆ ಏನು ಮಾಡುವುದಕ್ಕಾಗುವುದಿಲ್ಲ. ಹಾಗೇ ಒಂದು ಕ್ಲೂ ಸಿಕ್ಕಿದರೆ ಅದರಿಂದ ಹತ್ತಾರು ಕ್ಲೂಗಳು ಸಿಕ್ಕುತ್ತವೆ. Criminals will have

knowingly or unknowingly committed a lot of defaults. Crimes haunts them. ಎಷ್ಟೇ ಸಫೋಸ್ಟಿಕೇಟೆಡ್ ಆಗಿ ಮಾಡಿದರೂ ಕೂಡ they are bound to commit some mistake. The only thing is that we may not be able to discover that, ಆದ್ದರಿಂದ to have a clue ಒಂದೊಂದು ಸಾರಿ ೫ ತಿಂಗಳಾಗುತ್ತವೆ. ೬ ತಿಂಗಳಾಗುತ್ತವೆ. ೭ ತಿಂಗಳೂ ಆಗುತ್ತವೆ. ಏನು ಮಾಡುವುದಕ್ಕಾಗುತ್ತದೆ, ಏನೂ ಕ್ಲೂ ಸಿಕ್ಕದಿದ್ದರೆ ತೆಪ್ಪಗೆ ಕೊಳಿತಿರಬೇಕಾಗುತ್ತದೆ. ಕೊನೆಗೆ ಯಾವುದೋ ಕ್ಲೂ ಸಿಕ್ಕುತ್ತ ಅದನ್ನು ಎಳೆಯುತ್ತಾ ಎಳೆಯುತ್ತಾ ಅದು ಇಲ್ಲಿಯವರೆಗೆ ಬಂದಿವೆ. ಅದು ಎಲ್ಲಿಯವರೆಗೆ ಹೋಗುತ್ತದೆಯೋ ನಮಗೆ ಗೊತ್ತಿಲ್ಲ. ನಾನು ಈ ಸಂದರ್ಭದಲ್ಲಿ ಇನ್ನೂ ಚಾರ್ಜ್ ಷೀಟನ್ನು ಸರಿಯಾಗಿ ಫೈಲ್ ಆಗದೇ ಇರುವ ಹಂತದಲ್ಲಿ ಆ ಕೇಸು ಹೀಗೇ ಆಗುತ್ತದೆ, ಹಾಗೇ ಆಗುತ್ತದೆ ಅಂತ ಹೇಳಿ ಯಾವುದೋ ಒಂದು ತೀರ್ಮಾನಕ್ಕಾಗಲಿ, ಅಥವಾ ಹೀಗೇ ಆಗುತ್ತದೆಂದು ಜೊಲ್ಲು ಸುರಿಸುವುದಕ್ಕೆ ತಯಾರಿಲ್ಲ. ನಮಗೆ ಅದರ ಅಗತ್ಯವೂ ಇಲ್ಲ. ಅಥವಾ ಯಾರಾದರೊಬ್ಬರೆ ಹೋಗಿಬಿಟ್ಟರೆ ಆಕಾಶ ಕಳಚಿ ಬೀಳುತ್ತದೆ ಎನ್ನುವ ಭಾವನೆಯನ್ನು ಮಾಡಿಕೊಳ್ಳುವುದಕ್ಕೂ ನಾನು ತಯಾರಿಲ್ಲ. ಆದರೆ ಪ್ರಶ್ನೆ ಏನು ? ಅನವಶ್ಯಕವಾಗಿ ಎಲ್ಲೆಲ್ಲಿಯದೋ ವಿಚಾರಗಳು ತೆಗೆದುಕೊಂಡು ಬಂದು ಅವರು ೫ ತಿಂಗಳು ಏಕೆ ಸುಮ್ಮನೆ ಕುಳಿತು ಕೊಂಡಿದ್ದರು ? ೬ ತಿಂಗಳು ಏಕೆ ಸುಮ್ಮನೆ ಕುಳಿತುಕೊಂಡಿದ್ದರು ? ಡಿ.ಸಿ.ಪಿ.ಯನ್ನು ನಮ್ಮ ಪಾರ್ಟಿ ಮೀಟಿಂಗ್ ನಡೆಯುವ ದಿವಸವೇ ಏಕೆ ಅರೆಸ್ಟ್ ಮಾಡಿದರು ? ಇದು ಒಳ್ಳೆಯ ಕಥೆಯಾಯಿತು. ನಿಮ್ಮ ಪಾರ್ಟಿ ಮೀಟಿಂಗ್ ಪಂಚಾಂಗವನ್ನು ಬರೆದು ಸಿ.ಬಿ.ಐ.ನವರಿಗೆ ಕೊಟ್ಟಿದ್ದೀರಾ ? ಅವರಿಗೆ ಏನು ಗೊತ್ತು ? ನೀವು ಯಾವಾಗ ಮುಹೂರ್ತ ಇಟ್ಟುಕೊಳ್ಳುತ್ತೀರಿ ? ಯಾವಾಗ ಮದುವೆಯಾಗುತ್ತೀರಿ ? ಯಾವಾಗ ಡೈವರ್ಸ್ ಮಾಡಿಕೊಳ್ಳುತ್ತೀರಿ ಎಂದು ಅವರಿಗೆ ಏನು ಗೊತ್ತಿದೆ. ಅಥವಾ ಡಿ.ಸಿ.ಪಿ. ನಾರಾಯಣ್‌ಗೂ ಜನತಾ ಪಾರ್ಟಿ ಮೀಟಿಂಗ್‌ಗೂ ಯಾವ ಸಂಬಂಧ ? ಅವರೇನು ನಿಮ್ಮ ಪಾರ್ಟಿ ಮೆಂಬ್ರು, ಅಥವಾ ಅವನನ್ನು ಅರೆಸ್ಟ್ ಮಾಡಿದ್ದರಿಂದ ನಮ್ಮ ಮೆಜಾರಿಟಿ ಕಡಿಮೆಯಾಯಿತು ಅಂತ ಹೇಳುವುದಿದ್ದರೆ, ನೀವು ಆ ರೀತಿ ಹೇಳುವುದು ಸರಿಯೇ ? ಸುಮ್ಮನೆ, ಏಕೆ ಬೇಕಾದ್ದು, ಬೇಡವಾದ್ದು ಎಲ್ಲವನ್ನೂ ಸೇರಿಸಿ ಸಿ.ಬಿ.ಐ.ನ ಮೇಲೆ ಆರೋಪ ಮಾಡುವುದರಿಂದ ಏನು ಪ್ರಯೋಜನ ? ಸಿ.ಬಿ.ಐ.ಗೆ ತನ್ನದೇ ಆದ ರೆಪ್ಯುಟೇಷನ್ ಇದೆ. ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಕ್ರೈಮ್ಸ್‌ಗಳು ದಿನೇ ದಿನೇ ಅತ್ಯಂತ ಸಫೋಸ್ಟಿಕೇಟೆಡ್ ಆಗುತ್ತಿವೆ. ಅದನ್ನು ಪತ್ತೆ ಮಾಡುವುದಕ್ಕೆ ಬೇಕಾದ ತಜ್ಞತೆ ಅವರಲ್ಲಿದೆ. ಅವರು ನಮ್ಮ ಆರ್ಡಿನರಿ ಸಿ.ಒ.ಡಿ. ಪೋಲೀಸಿನವರ ಹಾಗೆ ಅಲ್ಲ. ನಾವು ಏನು ಮಾಡುತ್ತಿದ್ದೇವೆಂಬುದು ಎಲ್ಲರಿಗೂ ಗೊತ್ತಿದೆ. ಯಾರೂ ಇನ್‌ಫ್ಲೂಯನ್ಸ್ ಇಲ್ಲದ ಆಫೀಸರ್ ಇರುತ್ತಾನೋ ಅಂತಹವನನ್ನು ತೆಗೆದುಕೊಂಡು ಹೋಗಿ ಸಿ.ಒ.ಡಿ.ಗೆ ಹಾಕುತ್ತೇವೆ. ಇದು ನಮ್ಮ ಪದ್ಧತಿ ಅದು ಗೊತ್ತಿದೆ. ಸಿ.ಒ.ಡಿ.ಗೆ ಯಾರು ತಜ್ಞರು ಇದ್ದಾರೆ, ಯಾರು ಇಂಟಲಿಜೆನ್ಸ್ ಆಗಿ ಇದ್ದಾರೆ ಅವರನ್ನು ಹಾಕುವುದಿಲ್ಲ. ಇನ್‌ಫ್ಲೂಯನ್ಸ್ ಇಲ್ಲದೇ ಇರುವಂತಹವರನ್ನು ಮಾತ್ರ ಸಿ.ಒ.ಡಿ.ಗೆ ಹಾಕುತ್ತೇವೆ.

ಆದರೆ ಸಿಬಿಐ ಮಾತ್ರ ಮೆಟಿಕ್ಯುಲಸ್ ಆಗಿ they have tried to build up a sort of autonomous investigation. May be, it has also a lot of defects. ಮನುಷ್ಯರು ಎಲ್ಲೆಲ್ಲಿ ಕೆಲಸ ಮಾಡುತ್ತಾರೆ ಅಲ್ಲಿ ದೌರ್ಬಲ್ಯಗಳು ಇರುತ್ತವೆ ಇರುವುದಿಲ್ಲವೆಂದು ಹೇಳುವುದಿಲ್ಲ. ಸಿಬಿಐ.ಗಿಂತ ಬೆಟರ್ ಏಜೆನ್ಸಿ ಯಾವುದಾದರೂ ಈ ದೇಶದಲ್ಲಿದೆಯೇ? ನಿರ್ದಿಷ್ಟವಾಗಿ ದೋಷಗಳು ಕಂಡು ಬಂದರೆ ಮುಖ್ಯಮಂತ್ರಿಗಳು ಹೋಂ ಮಿನಿಸ್ಟರ್ ಒಡನೆ ಮಾತನಾಡುವುದಕ್ಕೆ ಅವಕಾಶ ಇದೆ. ಈ ರೀತಿ ಅನ್ಯಾಯವಾಗುತ್ತಿದೆ ಎಂದು ಪಬ್ಲಿಕ್‌ನಲ್ಲಿ ಹೇಳುವುದಕ್ಕಿಂತ ಮುಂಚೆ ಜವಾಬ್ದಾರಿ ಬೇಕು. ಮುಖ್ಯಮಂತ್ರಿಗಳ ಗಮನಕ್ಕೆ ಲೋಪ ದೋಷಗಳು ಕಂಡು ಬಂದರೆ ಅದನ್ನು ಹೇಳುವುದಕ್ಕೆ ಅವರಿಗೆ ಶಕ್ತಿ ಇಲ್ಲವೆ? ರಾಜ್ಯದ ಮುಖ್ಯಮಂತ್ರಿಗಳು ಹೇಳಿದರೆ ಬೆಲೆ ಬರುವುದಿಲ್ಲವೆ? ರಸ್ತೆ ಮೇಲೆ ಜನರು ಮಾಡಿದ ರೀತಿಯಲ್ಲಿ ಆಪಾದನೆ ಮಾಡಿ ಸಿಬಿಐ.ನ ಘನತೆಗೆ, ಅದರ ಇಂಪಾರ್ಷಿಯಾಲಿಟಿಗೆ ಧಕ್ಕೆ ತಂದಿದ್ದಾರೆ. ಈಗಾಗಲೇ ಅನೇಕ ಮಾನ್ಯ ಮಿತ್ರರು ಹಲವಾರು ಫ್ಯಾಕ್ಟ್ಸ್ ಅನ್ನು ತಮ್ಮ ಮುಂದೆ ಪ್ರಸ್ತಾಪ ಮಾಡಿದ್ದಾರೆ. ಆದನ್ನೆಲ್ಲ ಮತ್ತೆ ಮತ್ತೆ ಪ್ರಸ್ತಾಪ ಮಾಡಬೇಕೆಂಬ ವಿಚಾರ ನನ್ನಲ್ಲಿ ಇಲ್ಲ. ಇವತ್ತು ಇವರು ಸಿಬಿಐ. ಮೇಲೆ ಹೇಳುತ್ತಾರೆ, ಲೋಕಲ್ ಕೋರ್ಟ್‌ನವರು ಕೆಲವು ಅಬ್ಸರ್ವೇಷನ್‌ಗಳನ್ನು ಜನಜನಿತವಾಗಿ ಮಾಡಿದ್ದಾರೆ. ನೀವು ಪ್ರಸ್ತಾಪ ಮಾಡಿ, ಮಾಡದೆ ಇರಿ ಜನರು ಅವುಗಳನ್ನೆಲ್ಲ ಓದಿದ್ದಾರೆ. ಸಿಬಿಐ. ಬಗ್ಗೆ ನೀವು ಹೇಳಿದ ಮಾತು ಇಲ್ಲ ಎಂದು ಸೆಟ್ ಅಸೈಡ್ ಮಾಡಿದರೆ ಮಾತ್ರ ಒಪ್ಪೋಣ, ಎಲ್ಲಿಯವರೆಗೆ ಸೆಟ್ ಅಸೈಡ್ ಆಗುವುದಿಲ್ಲ ಅಲ್ಲಿಯವರೆಗೆ ನಾವು

ಒಪ್ಪುವುದಕ್ಕೆ ತಯಾರಿಲ್ಲ. Mr. Judge has said that he is convinced that CBI has no motive. I do not think you are going to set aside it in an appeal. That judgement very much there. They have clearly stated that they have no motivation. They are proceeding with all dexterity and utmost devotion to duty. ಸಿಬಿಐ.ನವರು ಯಾರ ಹಂಗಿನಲ್ಲೂ ಇಲ್ಲ. ಕೇಂದ್ರ ಸರ್ಕಾರದ ಹಂಗಿನಲ್ಲೂ ಇಲ್ಲ. ರಾಜ್ಯ ಸರ್ಕಾರದ ಹಂಗಿನಲ್ಲೂ ಇಲ್ಲ. ಇಲ್ಲಿ ಇರುವವರ ಹಂಗಿನಲ್ಲಿ ಇರಬೇಕು. ಕೇಂದ್ರ ಸರ್ಕಾರದ ಹಂಗಿನಲ್ಲಿರುವುದಕ್ಕೆ ಸಾಧ್ಯವಿಲ್ಲ. ಇಂಥ.ಸಂದರ್ಭದಲ್ಲಿ ಸಿಬಿಐ. ಮೇಲೆ ಈ ರೀತಿಯ ಮಾತನ್ನು ಮುಖ್ಯಮಂತ್ರಿಗಳು ಹೇಳಿದರೆ ಇದರ ಅರ್ಥವೇನು? ಬಾಲಪ್ಪನವರು ಆ್ಯಂಟಿಸಿಪೇಟರಿ ಬೇಲ್‌ಅನ್ನು ಏತಕ್ಕೆ ತೆಗೆದುಕೊಳ್ಳಬೇಕಾಗಿತ್ತು! ಕೋರ್ಟ್‌ನವರ ಏನು ಹೇಳಿದರೂ ಅದಕ್ಕೆ ಅವಕಾಶ ಮಾಡಿಕೊಟ್ಟರು. ಆದರೂ ಮಾಡುವುದಿದ್ದರೆ ಒಂದು ಕೆಲಸ ಮಾಡ ಬೇಕಾಗಿತ್ತು. ಮೊದಲು ಗೃಹ ಸಚಿವರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ನಂತರ ಆ್ಯಂಟಿಸಿಪೇಟರಿ ಬೇಲ್ ಕೇಳಬೇಕಾಗಿತ್ತು. ಅದು ಬಿಟ್ಟು ಹೋಂ ಮಿನಿಸ್ಟರ್‌ಆಗಿ ಬೇಲ್ ಕೇಳಿ ಒಂದು ಹಿಸ್ಟರಿಯನ್ನು ಕ್ರಿಯೇಟ್ ಮಾಡಿದ್ದಾರೆ,

(ವಿರೋಧ ಪಕ್ಷದ ಮಾನ್ಯ ಸದಸ್ಯರು ಷೇಂ ಷೇಂ ಅಂದರು)

It is a disgrace to the Home Ministership. It compromises the dignity of the Home Ministership, seriously and CM has also compromised to dignity of his own government and his own position as Chief Minister by making all these assertion and costing asperstions against the CBI. ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದ್ದನ್ನು ಒಪ್ಪುತ್ತೇನೆ. ಸಿಬಿಐ,ನವರು ಇನ್‌ವೆಸ್ಟಿಗೇಷನ್ ಮಾಡಿಕೊಂಡು ಹೋಗಿದ್ದಾರೆ. ತಮಗೆ ಏನು ಬೇಕೋ ಹಾಗೆ ಮುಖ್ಯಮಂತ್ರಿಗಳು ಹೇಳಿರುವ ಹೇಳಿಕೆಯನ್ನು ಹೇಗೆ ಸರಿಪಡಿಸುತ್ತೀರಿ? ನೀವು ಬುದ್ಧಿವಂತರಾಗಿ ಇನ್ನೊಂದು ಹೇಳಿಕೆಯನ್ನು ಕೊಡಿಸಿ, ಕೊಟ್ಟಿರುವ ಹೇಳಿಕೆಯನ್ನು ವಾಪಸ್ಸು ತೆಗೆಸಿ.

SRI A. LAKSHMISAGAR.—He will meet your point here and now.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದು ಆಗಬಹುದು. ಅವರು ಈಗಾಗಲೇ ಮಾಡಿರುವ ಡ್ಯಾಮೇಜನ್ನು ರಿಪೇರಿ ಮಾಡಿದರೆ ಸಂತೋಷ. ಡಾಮೇಜ್ ಮಾಡಿದ್ದಾರೆ ಮಾಡಿಲ್ಲವೆಂದು ಬೇಳಬೇಡಿ. ಅದನ್ನು ರಿಪೇರಿ ಮಾಡಿ. ವಿತ್‌ಡ್ರಾ ಮಾಡಬಹುದೆಂದು ಯಾರನ್ನು ಹೆದರಿಸುತ್ತೀರಿ? ನಿಮಗೆ ಕರೇಜ್ ಇದ್ದರೆ ವಿತ್‌ಡ್ರಾ ಮಾಡಿ. ಕರೇಜ್ ಅಂದರೆ ಧೈರ್ಯವೆಂದು ಅಲ್ಲ. ಕರೇಜ್ ಅಂದರೆ Courage of conviction. ಸಿಬಿಐ. ರಾಜಕೀಯವಾಗಿ ಸರ್ಕಾರವನ್ನು ಉರುಳಿಸುವುದಕ್ಕೆ ಮಾಡುತ್ತಿದೆ ಎಂದು ಮುಖ್ಯಮಂತ್ರಿಗಳು ಹೇಳುವುದು ಸರಿಯಲ್ಲ. ಕರೇಜ್ ಆಫ್ ಕನ್‌ವಿಕ್ಷನ್ ಇದ್ದರೆ He is duty bound to withdraw this case from the CBI and face the people. Where he has no courage of conviction then he should not make even the wild threat.

ಈ ತರಹ ಮಾತನಾಡುವುದು ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಏನು ಬಹಳ ಜೋರು?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಜೋರು ಅಲ್ಲ. ನೀವು ಹೊರಗಡೆ ಇದ್ದೀರಿ, ಕೇಳಲಿ ಎಂದು ಹೇಳಿದೆ. ಅವರು ಇಲ್ಲದಿದ್ದಾಗ ಹೇಳಿದರು ಎಂದು ಆಗುತ್ತದೆ. ಮುಖ್ಯಮಂತ್ರಿಗಳಿಗೆ ಇರತಕ್ಕದ್ದು ಎರಡು ದಾರಿ. ತಪ್ಪು ದಾರಿಯನ್ನು ರಿಪೇರಿ ಮಾಡಿ ತಿದ್ದಿಕೊಳ್ಳಬೇಕು, ಇಲ್ಲದಿದ್ದರೆ ಇದು ಮುಖ್ಯ ಮಂತ್ರಿಗಳ ಪದವಿಗೆ ಭೂಷಣವಲ್ಲ. ಸತ್ಯ ಇದ್ದರೆ ಬೇರೆ ಮಾರ್ಗಗಳು ಇವೆ, ಇಲ್ಲದೇ ಇದ್ದರೆ if he has that courage of conviction to say that CBI is only witch-hunting then he is duty bond to withdraw it and expiain it to the public. Public may agree with you or may not agree with you.

ನೀವೇ ಸತ್ಯವಂತರಾದರೂ ಜನರು ಒಪ್ಪದೆ ಹೋಗಬಹುದು. ಸತ್ಯವಂತರು ಯಾವಾಗಲೂ ಸತ್ಯವಂತರೇ. ನೀವು ಇದನ್ನು ದೃಢಪಡಿಸಿ. ಸರ್ಕಾರವನ್ನು ಉರುಳಿಸುವುದಕ್ಕೆ ಮಾಡುತ್ತಿದ್ದಾರೆಂದು ಪ್ರತಿಯೊಂದು ವಿಷಯಕ್ಕೂ ತರಬೇಡಿ. ಪ್ರತಿಯೊಂದು ವಿಷಯಕ್ಕೂ ಸರ್ಕಾರವನ್ನು ಉರುಳಿಸುವುದಕ್ಕೆ ಮಾಡುತ್ತಿದ್ದಾರೆಂದರೆ ಸರ್ಕಾರವನ್ನು ಉರುಳಿಸುವುದಕ್ಕೆ ಏನು ಇದೆ. There is hardly any government here. If there is any government, with all humility, with all emphasis at my command, I tell the Chief Minister, "your government is already dead. It is only awaiting a decent burial." ಇದು ಕೊಲೆಯೋ, ಆತ್ಮಹತ್ಯೆಯೋ, ಅಸ್ವಾಭಾವಿಕ ಮರಣವೋ ಅಥವಾ ಸ್ವಾಭಾವಿಕವಾದ ಮರಣವೋ ಎಂಬುದು ಸಮಯವಾದ ನಂತರ ಗೊತ್ತಾಗುತ್ತದೆ. We have no government here to topple. We will be very happy to limit ourselves to our own functions. ನಾವು ನಿಮ್ಮ ಸುದ್ದಿಗೆ ಬರುವುದಿಲ್ಲ. ನೀವು ನಿಮ್ಮನ್ನು ಉಳಿಸಿಕೊಳ್ಳಿ, ಪ್ರತಿಯೊಂದು ಸಂದರ್ಭಕ್ಕೂ ಇದನ್ನೇ ಹೇಳುತ್ತಾ ಹೋದರೆ ಹೇಗೆ ಸಾಧ್ಯ? ಅದರ ಕರೆನ್ಸಿ ಹೋಯಿತು. ಎಷ್ಟು ದಿವಸ ನಮ್ಮ ಹೆಸರನ್ನು ಹೇಳಿಕೊಳ್ಳುತ್ತಾ ಜನರ ಹತ್ತಿರ ಹೋಗುತ್ತೀರಿ? ಅದು ಸಾಧ್ಯವಿಲ್ಲ. ಈ ಪ್ರಕರಣದಲ್ಲಿ ದಯಮಾಡಿ ಹೇಳಬೇಡಿ. ಈಗ ಮಾಡಿರುವ ಡ್ಯಾಮೇಜನ್ನು ಹೇಗೆ ಸರಿಪಡಿಸಿಕೊಳ್ಳಬೇಕೋ ಸರಿಪಡಿಸಿ. ನನಗೆ ಕಂಡ ಚಾಯ್ಸನ್ನು ಹೇಳಿದ್ದೇನೆ. This choice is very limited, but the choice is very much yours.

† ಶ್ರೀ ಕೆ. ಬಿ. ಶಾಣಪ್ಪ (ಷಹಬಾದ್) — ಮಾನ್ಯ ಅಧ್ಯಕ್ಷರೇ, ಈ ರಷೀದ್ ಕೊಲೆ ಪ್ರಕರಣ ಸುಮಾರು ೮ ತಿಂಗಳಿಂದ ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಪೇಪರ್‌ನಲ್ಲೂ ಬಂದಿದೆ. ಹೋದ ವರ್ಷ ಕೂಡ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಿದಾಗ ಅಂದು ಇಂತಹ ಪರಿಸ್ಥಿತಿ ಇರಲಿಲ್ಲ. ರಷೀದ್ ಮರ್ಡರ್ ಬೇರೆ ಕಡೆಗೆ ಹೋಗುತ್ತದೆಂಬುದು ೧೯೮೭ ರಲ್ಲಿ ಗೊತ್ತಿರಲಿಲ್ಲ. ಆಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಸಿ. ಬಿ. ಐ.ಗೆ ಒಪ್ಪಿಸುತ್ತೇನೆಂದು ಹೇಳಿ ಅದನ್ನು ಸಿ. ಬಿ. ಐ.ಗೆ ಒಪ್ಪಿಸಿದರು. ಅದರ ಬಗ್ಗೆ ಈಗ ಕೋರ್ಟಿನಲ್ಲಿ ನಡೆದಂತಹ ಚರ್ಚೆಯ ಮೆರಿಟ್-ಡೀ ಮೆರಿಟ್ಸ್ ಬಗ್ಗೆ ಮಾತನಾಡುವುದಿಲ್ಲ. ಎವಿಡೆನ್ಸ್ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಆ ವಿಷಯವನ್ನು ಮಾನ್ಯ ಮೊಯಿಲಿ ಮಿತ್ರರು ಮಾತನಾಡಿದ್ದಾರೆ. ಒಂದು ವಿಷಯವನ್ನು ಹೇಳುತ್ತೇನೆ. ಇದು ಎಲ್ಲದಕ್ಕೂ ಸೆಂಟರ್ ಪಾಯಿಂಟ್ ಕೆ. ನಾರಾಯಣ್ ಅದಕ್ಕೋಸ್ಕರ ಅವರನ್ನು ಕಿರಿಕಿರಿ ನಾರಾಯಣ್ ಅಂತಹ ಬಹಳ ಫೇಮಸ್ ಆಗಿದ್ದರು ನಮ್ಮಲ್ಲಿದ್ದಾಗ. ಅವರು ಬಿಜಾಪುರದಲ್ಲಿದ್ದಾಗಲೂ ಕೂಡ there were some problems with him. ಅವರ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ. ೩ ವರ್ಷಗಳ ಕಾಲ ನಮ್ಮ ಗುಲ್ಬರ್ಗದಲ್ಲಿದ್ದರು. ಪ್ರಶ್ನೆ ಏನೆಂದರೆ, ಈ ಕೇಸಿನಲ್ಲಿ ಸಿ. ಬಿ. ಐ. ನವರು ಮಾಡಿದ್ದು ತಪ್ಪು ಅಂತ ಮಾನ್ಯ ಮುಖ್ಯ ಮಂತ್ರಿಗಳು ಹೇಳಲಿಕ್ಕೂ ಕೂಡ ಆಗುವುದಿಲ್ಲ. ಆ ಎಜುಕೇಷನ್ ಇನ್ಸ್ಟಿಟ್ಯೂಷನ್ ಏನು ಇದೆ ಅದು ಇದಕ್ಕೆ ಸೆಂಟರ್ ಪಾಯಿಂಟ್, ಮಾನ್ಯ ಜಾಲಪ್ಪನವರು ಅದಕ್ಕೆ ಅಧ್ಯಕ್ಷರು. ಅವರು ಮಾಡಿದ್ದಾರೆ ಎಂದರೂ ನಾವು ಒಪ್ಪುವುದಿಲ್ಲ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಅವರು ಅಂಟಿಸಿಪೇಟರಿ ಬೇಲ್ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿದೆ. ಮಾನ್ಯ ಶ್ರೀನಿವಾಸ್ ಅವರು ಹೇಳಿದ ಹಾಗೆ is it necessary? ಹೋಮ್ ಮಿನಿಸ್ಟರ್ ಆಗಿ ರಾಜ್ಯದ ಜನರಿಗೆ ಸಂರಕ್ಷಣೆಯನ್ನು ಕೊಡಬೇಕಾದಂತಹವರು ನೀವು ಕೋರ್ಟಿನ ಮೊರೆ ಹೊಕ್ಕಿಕೊಂಡು ಕುಳಿತುಕೊಂಡರೆ ನಮ್ಮನ್ನು ಯಾರು ರಕ್ಷಣೆ ಮಾಡುತ್ತಾರೆ? ಕೋರ್ಟಿನ ಮೊರೆ ಹೊಕ್ಕಿಕೊಂಡು ನಮ್ಮನ್ನು ಅರೆಸ್ಟ್ ಮಾಡುತ್ತಾರೆ ಅಂತ ಹೇಳುತ್ತಿದ್ದರೆ, ನಮ್ಮ ಗತಿ ಏನಾಗಬೇಕು? ಅಥವಾ ಅವರು ರಾಜೀನಾಮೆ ಕೊಟ್ಟ ಮೇಲೆ ಸಿ. ಬಿ. ಐ. ನವರು ಹಿಡಿದುಕೊಂಡು ಹೋಗಬಹುದೆಂಬ ಅಪೆತೆಟಿಕಲ್ ಆಗಿ ಯೋಚನೆ ಮಾಡಿಕೊಂಡು ಇದ್ದೀರಿ. ಮುಖ್ಯ ಮಂತ್ರಿಗಳು ನೀವು ರಾಜೀನಾಮೆ ಕೊಡಕೂಡದು ಅಂತ ಹೇಳಿದರು. ಆದರೆ ಇಲ್ಲಿ ಪರಿಸ್ಥಿತಿಯನ್ನು ನೋಡಿದರೆ ನನಗನ್ನಿಸಿದ ಮಟ್ಟಿಗೆ ಒಂದು ಗೊಂದಲಮಯ ವಾತಾವರಣ ಉಂಟಾಗಿ ಸರ್ಕಾರದ ಮೇಲೆ ಜನರಿಗೆ ಸಂಶಯ ಪ್ರಾರಂಭವಾಗಿದೆ. ಸರ್ಕಾರದ ಮಟ್ಟದಲ್ಲಿ ಬೇಡವೆಂದರೂ ಪ್ರತಿಯೊಂದು ಪತ್ರಿಕೆಯೂ ರಾಜ್ಯ ಸರ್ಕಾರದ ಮೇಲೆ ಹೇಳುವುದಕ್ಕೆ ಪ್ರಾರಂಭ ಮಾಡಿವೆ. ಪೊಲೀಸರ ಕೈವಾಡ ಇದೆ ಎಂದು ಪ್ರತಿಯೊಂದು ಪತ್ರಿಕೆ

ಯಲ್ಲೂ ಅದೇ ರೀತಿ ಹೇಳುತ್ತಿದ್ದಾರೆ, ಪ್ರತಿಯೊಂದು ಪತ್ರಿಕೆಯಲ್ಲೂ ಇದರಲ್ಲಿ ಯಾವುದೇರೀತಿಯ ಸರ್ಕಾರದ ಕೈವಾಡ ಇಲ್ಲ. ಅಥವಾ ಪೊಲೀಸ್ ಇಲಾಖೆಯ ಕೈವಾಡ ಇಲ್ಲ ಅಂತ ಯಾವ ಪತ್ರಿಕೆಯಲ್ಲೂ ಹೇಳಲಿಲ್ಲ. ಕೊಲೆಯಂತು ನಿಜವಾಗಿ ನಡೆದಿದೆ. ರಷೀದ್ ಸತ್ತೇ ಇಲ್ಲವೆಂದು ಈಗ ತಾನೆ ಶ್ರೀಮಾನ್ ಜಯಕುಮಾರ್ ಮತ್ತಿನ್ನಾರೋ ಹೇಳಿದರು ಅಥವಾ ಶ್ರೀಮಾನ್ ಬೊಮ್ಮಾಯಿಯವರು ಹೇಳಿದರು. ಕೋರ್ಟಿನಲ್ಲಿ ತೀರ್ಮಾನವಾಗುವವರೆಗೂ ಅವರದ್ದೇ ಬಾಡಿ ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ ವೆಂದು ಹೇಳಿದರು ರಷೀದ್ ಸತ್ತೇ ಇಲ್ಲವೆಂದು ಹೇಳಿದರು ಡೆಡ್ ಬಾಡಿ ಅವರದೆಯೋ ಅಥವಾ ಇಲ್ಲವೋ ಎಂಬುದನ್ನು ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದರು.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನು ಆ ರೀತಿ ಹೇಳಲಿಲ್ಲ. ಡಿಬೇಟ್ ಸಲುವಾಗಿ ಹೇಳ ಬಹುದೆಂದು ಹೇಳಿದೆ ಅಷ್ಟೆ.

ಶ್ರೀ ಕೆ. ಬಿ. ಶಾಣಪ್ಪ.— ನೀವು ಆ ರೀತಿ ಹೇಳಿದಿರಿ. ಕೆ. ನಾರಾಯಣ್ ಮತ್ತು ಜಾಲಪ್ಪನವರು ಮತ್ತು ಸರ್ಕಾರದ ಕೈವಾಡ ಇದೆ ಎಂಬುದಾಗಿ ನಾವ್ಯಾರೂ ಹೇಳಿಯೇ ಇಲ್ಲ. ಯಾರು ಮಾಡಿದರು ಎಂಬುದನ್ನು ಕಂಡುಹಿಡಿಯಬೇಕಾಗಿತ್ತು. ಕೊಲೆಯಾಗಿ ೮ ತಿಂಗಳಾಯಿತು ರಷೀದ್ ಮರ್ಡರ್ ಮಾಡಿದವರು ಯಾರು ಇದರ ಹಿಂದೆ ಯಾರ ಕೈವಾಡ ಇದೆ ಎಂಬುದನ್ನು ಕಂಡುಹಿಡಿಯಬೇಕಾಗಿತ್ತು, ಇದರ ಹಿಂದೆ ದೊಡ್ಡ ನಿಗೂಢವಾದಂತಹ ಕುತಂತ್ರ ಇದೆ ಎನ್ನುವ ಅರ್ಥ ಬರುವ ಧಾಟಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಇದರ ಹಿಂದೆ ಯಾರಿದ್ದಾರೆಂಬುದನ್ನು ಬಯಲಿಗೆಳೆಯಬೇಕು. ೧೯೮೩ ರಲ್ಲಿ ಸಿದ್ದರಾಮೇಶ್ವರ ಕೇಸ್ ಅನ್ನು ಸಿ. ಒ. ಡಿ ಯವರು ತೆಗೆದುಕೊಂಡು ಹೋದರು ನಾನೂ ಕೂಡ ಆಗ ಈ ಸದನದಲ್ಲಿದ್ದೆ. ನನ್ನ ಗೆಳೆಯರು ಸಿ. ಒ. ಡಿ.ಗೆ ಬೇಡ ಸಿ.ಬಿ.ಐ.ಗೆ ಕೊಡಬೇಕೆಂದು ಹೇಳಿದರು ಸಿದ್ದರಾಮೇಶ್ವರನ ಕೇಸ್‌ನಲ್ಲಿ ಸಿ. ಬಿ. ಐ. ತೆಗೆದುಕೊಂಡರೂ ಕೂಡ್ಲೆ ಪತ್ತೆ ಹಚ್ಚಲಿಲ್ಲ. ರಷೀದ್ ಕೊಲೆ ಯಾಗಿ ಎಂಟು ತಿಂಗಳಾದರೂ ತೆಗೆದುಕೊಳ್ಳಲಿಕ್ಕೆ ಬರುತ್ತದೆ ನಾಲ್ಕು ವರ್ಷವಾದರೂ ಸಿದ್ದರಾಮೇಶ್ವರನ ಕೇಸ್‌ನಲ್ಲಿ ಕ್ಲೂ ಸಿಗಲಿಲ್ಲವೇ ? There must be some reason behind it. What made you not to enquire about Siddarama's case? He is from Gulbarga. He was a man who was criticising Narayan's bad deeds. ಇವರು ಒಂದು ಕಡೆ ಒಪ್ಪಲಿಲ್ಲ. ನಾವೂ ಕೂಡ ಒಪ್ಪಲಿಲ್ಲ. You were also party to these people to see that this case is referred to C. B. I. ಸಿದ್ದರಾಮೇಶ್ವರನ ಕೇಸ್‌ಗೆ ಕಿಮ್ಮತ್ತಿಲ್ಲ, ರಷೀದ್ ಕೇಸ್‌ಗೆ ಕಿಮ್ಮತ್ತು ಇದೆಯೇ ಎಂದು ನಾನು ಸಿ. ಬಿ. ಐ. ಅನ್ನು ಕ್ರಿಟಿಸೈಜ್ ಮಾಡುತ್ತೇನೆ. I am not worried about what they are. Since four years what they are doing in that case? ನನಗೆ ತಮ್ಮ ಮೇಲೆ ಬಹಳ ಅಭಿಮಾನವಿದೆ. ಸಿ. ಬಿ. ಐ. ಬಗ್ಗೆ ಮಾನ್ಯ ಶ್ರೀನಿವಾಸ್‌ರವರು ಬಹಳ ಚೆನ್ನಾಗಿ ಹೇಳಿದರು. ಅಲ್ಲಿ ಬೇರೆ ಬೇರೆ ಮೆಷಿನರೀಸ್, ಅಪರೇಟಿಸ್ ಇದೆ ಅಲ್ಲದೇ ಅವರದ್ದೇ ಆದಂತಹ ತಂತ್ರ ಇದೆ ಆದರೆ ನನಗನ್ನಿಸಿದ ಮಟ್ಟಿಗೆ ಸಿದ್ಧರಾಮೇಶ್ವರನ ಕೇಸ್ ಅನ್ನು ಮುಳುಗಿಸಲಿಕ್ಕೆ ಹತ್ತಿದ್ದಾರೆ ಎಂಬ ಅಂಜಿಕೆ ಕೂಡ ಇದೆ. ಇವರಲ್ಲ ಸಿ. ಬಿ. ಐ.ನವರೂ ಕೂಡ ಹುಡುಕಬೇಕು ಈ ಕೇಸ್‌ನಲ್ಲಿ ಯಾರು ಕಲ್‌ಪ್ರಿಟ್ ಇದ್ದಾರೆ ಎಂದು. ಶ್ರೀ ಕೃಷ್ಣ ಶಮಂತಕ ಮಣಿಯನ್ನು ಕದ್ದಿದ್ದಾನೆಂಬ ಆಪಾದನೆ ಬಂದು ನಂತರ ಆತನೇ ಅದನ್ನು ನಿವಾರಿಸಿಕೊಂಡ ಅದೇ ರೀತಿಯಾಗಿ ನಾವು ಇದನ್ನು ಮಾಡಿಲ್ಲವೆಂದು ಪ್ರೂವ್ ಮಾಡುವುದು ನಿಮ್ಮ ಕೆಲಸ. ಅದನ್ನು ನೀವು ಪ್ರೂವ್ ಮಾಡಬೇಕು. ರಾಜ್ಯದಜನತೆಗೆ ತಿಳಿಸಬೇಕು. There is a hand behind this murder from the police. ದಯ ಮಾಡಿ ಆದಷ್ಟು ಮಟ್ಟಿಗೆ ನಿಮ್ಮ ಫೋರ್ಸ್ ಇಂಟೆಲಿಜೆನ್ಸ್ ಅನ್ನು ಉಪಯೋಗ ಮಾಡಿ ಇದನ್ನು ಪತ್ತೆ ಮಾಡಿ. ಸಿ. ಬಿ. ಐ. ಮಾಡುವುದು ಮಾಡಲಿ ಅದರ ಬಗ್ಗೆ ನಮಗೆ ಅಧಿಕಾರವಿಲ್ಲ. ನೀವು ತಪ್ಪು ಮಾಡಿಲ್ಲವೆಂದು ತಾವು ಪ್ರೂವ್ ಮಾಡಿ. within 2-3 months you must prove that you have no hand in this case. ನಾನು ತಮಗೆ ಸರಕಾರ ಬಿಡಿ ಎಂದು ಹೇಳುವುದಿಲ್ಲ. ಬೇರೆ ಕಡೆಗಳಲ್ಲಿ ಎಷ್ಟು ಜನ ಸತ್ತಿಲ್ಲ. ಪಂಜಾಬ್‌ನಲ್ಲಿ ಪ್ರತಿ ದಿವಸವೂ ಕೂಡ ಹೊಡೆಯುತ್ತಿದ್ದಾರೆ ಅದೇ ರೀತಿ ಕರ್ನಾಟಕದಲ್ಲಿ ಹೊಡೆಯಬೇಕೆಂದು ಹೇಳುತ್ತೀರಾ ? ೧೯೮೭ ರಲ್ಲಿ ಮಾಯನಾತ್ಮಾಗಿ ಪ್ರಕರಣ ನಮ್ಮ ರಾಜ್ಯದಲ್ಲಿ ನಡೆಯಿತು. ರಷೀದ್‌ರವರು ಇಲ್ಲಿ ಬಂದು ತೀರಿಕೊಂಡಿದ್ದಾರೆ ರಷೀದ್‌ರವರ ಕೊಲೆ ಮಾಡಿದ ಕೊಲೆಗಾರರು ಯಾರು ಇದರ ಉದ್ದೇಶ ಏನು ಇದೆ ಎಂದು ಪ್ರೂವ್ ಮಾಡುವುದು ಸಿ. ಬಿ. ಐ.

ಗಿಂತಲೂ ಹೆಚ್ಚಿನ ಜವಾಬ್ದಾರಿ ರಾಜ್ಯ ಸರಕಾರಕ್ಕಿದೆ. ಎಷ್ಟು ಪ್ರಯತ್ನ ಮಾಡಿ ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುತ್ತೀರೋ ಮಾಡಿ. ಇದರಿಂದ ಕರ್ನಾಟಕ ಜನತೆಗೆ, ಈ ಸದನಕ್ಕೆ ಘನತೆ ಬರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಿ. ಎಂ. ರವರು ರೆಸಿಗ್ನೇಷನ್ ಕೊಡುತ್ತೇವೆಂದು ಹೇಳಿದರೆ ನಾನು ಏಕೆ ಬೇಡವೆಂದು ಹೇಳಲಿ ಹೇಳುವುದಕ್ಕೆ ಹೋಗುವುದಿಲ್ಲ. ರೆಸಿಗ್ನೇಷನ್ ಕೊಡಬೇಕೋ ಬೇಡವೋ ಅದು ನಿಮ್ಮ ಪಾರ್ಟಿಗೇ ಬಿಟ್ಟದ್ದು. ಯಾರು ಮರ್ಡರ್ ಮಾಡಿದರು ಎಂಬುದನ್ನು ತಾವು ಪ್ರೂವ್ ಮಾಡಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

SRI S. BANGARAPPA.— we will continue tomorrow.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಇಲ್ಲಿಯವರೆಗೆ ೩ ಗಂಟೆಗಳ ಕಾಲ ಚರ್ಚೆಯಾಗಿದೆ ಇನ್ನೂ ಮಾನ್ಯ ಬಂಗಾರಪ್ಪನವರು ಮತ್ತು ಹಿಂದೆ ಕುಳಿತಂತಹ ನನ್ನ ಸ್ನೇಹಿತರು ಮಾತನಾಡುವವರಿದ್ದಾರೆ. ತಾವು ಎಷ್ಟು ಜನರಿಗೆ ಮಾತನಾಡಲಿಕ್ಕೆ ಪರವಾನಗಿ ಕೊಡುತ್ತೀರೋ ನನಗೆ ಗೊತ್ತಿಲ್ಲ. ಈಗ ೬–೩೦ ಗಂಟೆಯಾಗಿದೆ. ಎಲ್ಲಾ ಸದಸ್ಯರು ಭಾಷಣ ಕೇಳಿ ಬಳಲಿ ಬೇಸತ್ತಿದ್ದಾರೆ ಬೇಕಾದರೆ ನಾಳೆ ತೆಗೆದುಕೊಳ್ಳಿ. ನಮ್ಮ ಡಿಮ್ಯಾಂಡ್ ಪಾಸ್ ಮಾಡಿದ ಮೇಲೆ ಮತ್ತೆ ತೆಗೆದುಕೊಳ್ಳಿ ಇದರ ಬಗ್ಗೆ ಚರ್ಚೆ ಮಾಡೋಣ. ಪ್ರತಿ ದಿವಸ ಈ ಅಧಿವೇಶನ ಮುಗಿಯುವವರೆಗೆ ದಿವಸ ಎರಡು ಗಂಟೆ ಚರ್ಚೆ ಮಾಡಲೀ ನನ್ನದೇನೂ ಆಕ್ಷೇಪವಿಲ್ಲ.

ಅಧ್ಯಕ್ಷರು — ಎರಡು ತಾಸು ಕೊಡಬೇಕಾಗಿತ್ತು, ನಿಯಮ ೬೮ರ ಪ್ರಕಾರ, ಒಂದು ತಾಸು ಕೊಡಬೇಕಾಗಿತ್ತು. ಒಂದು ತಾಸು ಹೋಯಿತು, ಎರಡು ತಾಸು ಹೋಯಿತು, ಈಗ ಮೂರು ತಾಸು ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಎಸ್. ಬಂಗಾರಪ್ಪ.— ದಯಮಾಡಿಟ್ಟು ಕ್ಷಮಿಸಿ, ಈ ವಿಚಾರದಲ್ಲಿ ಇನ್ನೂ ಅನೇಕ ಜನ ಮಾತನಾಡುವವರು ಇದ್ದಾರೆ. ನಾಳೆಗೆ ಮುಂದುವರೆಸಿ.

ಶ್ರೀ ರಾಮಕೃಷ್ಣ ಹೆಗಡೆ.— ನಾಳೆ ಡಿಮ್ಯಾಂಡ್ ಮುಗಿದ ಮೇಲೆ ಮತ್ತೆ ಚರ್ಚೆ ಮುಂದುವರೆಸಲಿ.

ಅಧ್ಯಕ್ಷರು.— ಸದನವು ಈಗ ಮುಕ್ತಾಯವಾಗಿ, ನಾಳೆ ಬೆಳಿಗ್ಗೆ ೧೧–೦೦ ಗಂಟೆಗೆ ಪುನಃ ಸೇರುತ್ತದೆ.

(ಸದನವು ೬–೩೨ಕ್ಕೆ ಮುಕ್ತಾಯವಾಗಿ ಮರುದಿನ ಅಂದರೆ ತಾ. ೧೨-೫-೮೮ ರಂದು ಬೆಳಿಗ್ಗೆ ೧೧ ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿಶ್ಚಯಿಸಿತು.)